ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 2 ಸೋಮವಾರ 2026

ಸಂಪುಟ: 46 | ಸಂಚಿಕೆ: 311 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅಮೆರಿಕ–ಇಸ್ರೇಲ್ ಭೀಕರ ಕ್ಷಿಪಣೆ ದಾಳಿಯಲ್ಲಿ

ಇರಾನ್ ಪರಮೋಚ್ಛ ನಾಯಕ ಖಮೇನಿ ಸಾವು

ಇವರ ಪುತ್ರಿ, ಅಳಿಯ, ಮೊಮ್ಮಕ್ಕಳೂ ಸಹ ಬಲಿ

● ತುರ್ತು ಪರಿಸ್ಥಿತಿ ಘೋಷಣೆ, ಶೋಕಾಚರಣೆ; ಪ್ರತೀಕಾರದ ಪ್ರತಿಜ್ಞೆ ● ಪಾಕಿಸ್ತಾನದಲ್ಲಿ ವ್ಯಾಪಕ ಹಿಂಸಾಚಾರ; ಭಾರತ ಸೇರಿ ವಿಶ್ವದ ಬಹುತೇಕ ಕಡೆ ಪ್ರತಿಭಟನೆ, ದಾಳಿಗೆ ಖಂಡನೆ

ನವದೆಹಲಿ, ಮಾ.1– ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿದ ಭೀಕರ ದಾಳಿಯಲ್ಲಿ ಇರಾನ್‌ನ ಪರಮೋಚ್ಛ ನಾಯಕ ಅಯತೊಲ್ಲಾ ಅಲಿ ಖಮೇನಿ ಸಾವನ್ನಪ್ಪಿದ್ದು, ಮಧ್ಯಪ್ರಾಚ್ಯ ಮತ್ತಷ್ಟು ಉದ್ವಿಗ್ನಗೊಂಡಿದೆ. ವಿಶ್ವದ ಹಲವೆಡೆ ಅಮೆರಿಕಾ–ಇಸ್ರೇಲ್ ನಡೆ ವಿರುದ್ಧ ಆಕ್ರೋಶ ಭುಗಿಲೆದ್ದಿದೆ.



1989ರಿಂದ ಇರಾನ್ ಪರಮೋಚ್ಛ ನಾಯಕರಾಗಿರುವುದರೊಂದಿಗೆ ಪಾಶ್ಚಿಮಾತ್ಯ ರಾಷ್ಟ್ರಗಳ ಕಡು ವಿರೋಧಿಯಾಗಿದ್ದ 86 ವರ್ಷದ ಧರ್ಮಗುರು ಖಮೇನಿ ಅವರ ಸಾವನ್ನು ಭಾನುವಾರ ಮುಂಜಾನೆ ಇರಾನ್ ಸರ್ಕಾರಿ ದೂರದರ್ಶನ ಖಚಿತಪಡಿಸಿದೆ. 'ಶನಿವಾರ ಮುಂಜಾನೆ ತಮ್ಮ ಕಚೇರಿಯಲ್ಲಿ ಅವರು ತಮ್ಮ ನಿಯೋಜಿತ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾಗ ಕೊಲ್ಲಲ್ಪಟ್ಟರು' ಎಂದು ವರದಿಯಾಗಿದೆ. ಈ ವೇಳೆ ವಾಹಿನಿ ನಿರೂಪಕರು ತೀವ್ರ ಭಾವುಕರಾಗಿ ಕಣ್ಣೀರಿಟ್ಟಿರುವ ವೀಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ದಾಳಿಯಲ್ಲಿ ಖಮೇನಿ ಪುತ್ರಿ, ಅಳಿಯ ಹಾಗೂ ಮೊಮ್ಮಗಳು ಮೃತಪಟ್ಟಿರುವುದಾಗಿ ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಖಮೇನಿ ಅವರ ಉನ್ನತ ಸಲಹೆಗಾರ ಅಲಿ ಶಮ್ಖಾನಿ ಮತ್ತು ರೆವಲ್ಯೂಷನರಿ ಗಾರ್ಡ್ಸ್ ಮುಖ್ಯಸ್ಥ ಜನರಲ್ ಮೊಹಮ್ಮದ್ ಪಕ್ಪೂರ್ ಕೂಡ ಸಾವನ್ನಪ್ಪಿದ್ದಾರೆಂದು ಇಸ್ರೇಲ್ ಸೇನೆ ತಿಳಿಸಿದೆ. ಖಮೇನಿ ಹತರಾದ ಸುದ್ದಿ ಇರಾನ್ ಮಾಧ್ಯಮದಲ್ಲಿ ಪ್ರಕಟವಾಗುವ ಕೆಲ ಗಂಟೆಗಳ ಮುನ್ನವೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈ ವಿಷಯ ಘೋಷಿಸಿದ್ದರು.

ಪ್ರತೀಕಾರದ ಪ್ರತಿಜ್ಞೆ: ಖಮೇನಿ ಹತ್ಯೆಗೆ ಪ್ರತೀಕಾರ ತೀರಿಸುವುದಾಗಿ ಇರಾನ್ ರೆವಲ್ಯೂಷನರಿ ಗಾರ್ಡ್ ಅಬ್ಬರಿಸಿದೆ. ಸಮುದಾಯದ ನಾಯಕನ ಹಂತಕರಿಗೆ ಕಠಿಣ, ನಿರ್ಣಾಯಕ ಮತ್ತು ಪಶ್ಚಾತಾಪಪಡುವಂತಹ ಶಿಕ್ಷೆ ನೀಡುತ್ತೇವೆ. ಇರಾನ್ ಇತಿಹಾಸದಲ್ಲೇ ಅತ್ಯಂತ ವಿನಾಶಕಾರಿ, ಆಕ್ರಮಣಕಾರಿ ಕಾರ್ಯಾಚರಣೆ ಆರಂಭಿಸುತ್ತೇವೆ ಎಂದು ಎಚ್ಚರಿಕೆ ನೀಡಿರುವುದಾಗಿ ಇರಾನ್‌ನ ಫಾರ್ಸ್ ಸುದ್ದಿಸಂಸ್ಥೆ ವರದಿ ಮಾಡಿದೆ. ■6ನೇ ಪುಟಕ್ಕೆ

ದಾಳಿಯಲ್ಲಿ ಖಮೇನಿ ಸೇರಿ 48 ನಾಯಕರ ಹತ್ಯೆ

ನವದೆಹಲಿ: ಇರಾನ್ ವಿರುದ್ಧ ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಯಲ್ಲಿ ಇದುವರೆಗೆ ಇರಾನ್‌ನ 48 ರಾಜಕೀಯ ಮತ್ತು ಮಿಲಿಟರಿ ನಾಯಕರು ಸಾವನ್ನಪ್ಪಿದ್ದಾರೆ. ಇದು ದೊಡ್ಡ ಯಶಸ್ಸು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದಾರೆ.



ಫಾಕ್ಸ್ ನ್ಯೂಸ್‌ಗೆ ಮಾತನಾಡಿದ ಟ್ರಂಪ್, ನಮ್ಮ ಯಶಸ್ಸನ್ನು ಯಾರೂ ನಂಬಲು ಸಾಧ್ಯವಿಲ್ಲ. ಒಂದೇ ದಾಳಿಯಲ್ಲಿ 48 ನಾಯಕರನ್ನು ಹತ್ಯೆ ಮಾಡಲಾಗಿದೆ. ಕಾರ್ಯಾಚರಣೆ ಬಹಳ ವೇಗವಾಗಿ ಪ್ರಗತಿಯಲ್ಲಿದೆ. ಇರಾನ್‌ನಲ್ಲಿ ಯುಎಸ್ ಮಿಲಿಟರಿ ಕ್ರಮವು ನಿಗದಿತ ಸಮಯಕ್ಕಿಂತ ಮುಂಚೆಯೇ ■6ನೇ ಪುಟಕ್ಕೆ

ಅಮೆರಿಕಾ ಮಿತ್ರರಾಷ್ಟ್ರಗಳ ವಿರುದ್ಧ ಮುಗಿಬಿದ್ದ ಇರಾನ್

ಟೆಹ್ರಾನ್: ಇಸ್ರೇಲ್–ಅಮೆರಿಕ ವಾಯುದಾಳಿಯಲ್ಲಿ ಅಲಿ ಖಮೇನಿ ಸಾವನ್ನಪ್ಪಿದ್ದರಿಂದ ಕೆರಳಿರುವ ಇರಾನ್, ಅಮೆರಿಕದೊಂದಿಗೆ ಉತ್ತಮ ಸಂಬಂಧ ಹೊಂದಿರುವ ತನ್ನ ನೆರೆಯ ಕೊಲ್ಲಿದೇಶಗಳ ಮೇಲೆ ಮುಗಿಬಿದ್ದಿದೆ.

ಟೆಹ್ರಾನ್‌ನಲ್ಲಿರುವ ಶಿಯಾ ಸಮುದಾಯದ ಪ್ರಮುಖ ಧಾರ್ಮಿಕ ಕೇಂದ್ರ ಜಮ್ಕರನ್ ಮಸೀದಿ ಮೇಲೆ ಕೆಂಪು ಧ್ವಜ ಹಾರಿಸುವ ಮೂಲಕ ಅನ್ಯಾಯದ ವಿರುದ್ಧ ಹೋರಾಟ ನಡೆಸುತ್ತಿರುವುದಾಗಿ ಸಂದೇಶ ಸಾರಲಾಗಿದೆ.

ಅಮೆರಿಕದ ಮಿತ್ರರಾಷ್ಟ್ರಗಳಾದ ಕತಾರ್, ಸೌದಿ ಅರೇಬಿಯಾ, ಯುಎಇ, ಬಹರೇನ್, ಕುವೈತ್, ಒಮನ್ ಸೇರಿದಂತೆ ಹಲವು ದೇಶಗಳ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಇಸ್ರೇಲ್ ಮೇಲಂತೂ ನೂರಾರು ಕ್ಷಿಪಣಿ ಮೂಲಕ ಪ್ರತೀಕಾರದ ದಾಳಿ ನಡೆಸಿದೆ. ಇರಾನ್ ಕ್ಷಿಪಣಿ ದಾಳಿಯಲ್ಲಿ ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶದ ಮೂವರು ಮೃತಪಟ್ಟಿದ್ದಾರೆ ಎಂದು ಯುಎಇ ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.

ಅಯತೊಲ್ಲಾ ಅರಾಫಿ ಇರಾನ್‌ನ ಮಧ್ಯಂತರ ಸರ್ವೋಚ್ಛ ನಾಯಕ

ಟೆಹ್ರಾನ್: ಅಲಿ ಖಮೇನಿ ಹತರಾದ ಹಿನ್ನೆಲೆಯಲ್ಲಿನ ಹಿರಿಯ ಧರ್ಮಗುರು ಅಯತೊಲ್ಲಾ ಅಲಿರೇಜಾ ಅರಾಫಿ ಅವರು ಇರಾನ್‌ನ ಮಧ್ಯಂತರ ಸರ್ವೋಚ್ಛ ನಾಯಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಇರಾನ್‌ನ ಸಾಂವಿಧಾನಿಕ ಪ್ರಕ್ರಿಯೆಯ ಅಡಿಯಲ್ಲಿ ಶಾಶ್ವತ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವವರೆಗೆ ಪರಿವರ್ತನೆಯ ಸಮಯದಲ್ಲಿ ಸರ್ವೋಚ್ಛ ನಾಯಕನ ಅಧಿಕಾರವನ್ನು ಚಲಾಯಿಸುವ ಕಾರ್ಯವನ್ನು ನಿರ್ವಹಿಸುವ ತಾತ್ಕಾಲಿಕ ನಾಯಕತ್ವ ಮಂಡಳಿಯ ನ್ಯಾಯ ಶಾಸ್ತ್ರಜ್ಞ ಸದಸ್ಯರಾಗಿ ಅರಾಫಿ ಅವರನ್ನು ಹೆಸರಿಸಲಾಗಿದೆ. ಇರಾನ್‌ನ ಸಾಂವಿಧಾನಿಕ ಚೌಕಟ್ಟಿನ ಅಡಿಯಲ್ಲಿ, ಮಧ್ಯಂತರ ನಾಯಕತ್ವ ಮಂಡಳಿಯು ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಮುಖ್ಯ ನ್ಯಾಯಮೂರ್ತಿ ಘೋಲಮ್–ಹೊಸೇನ್ ಮೊಹ್ಸೇನಿ–ಎಜೆ ಮತ್ತು ಗಾರ್ಡಿಯನ್ ಕೌನ್ಸಿಲ್‌ನ ಒಬ್ಬ ಧರ್ಮಗುರುವನ್ನು ಒಳಗೊಂಡಿದೆ.



ಖಮೇನಿ ಹತ್ಯೆಗೆ ಸಿಎಂ ಸಿದ್ದರಾಮಯ್ಯ ಖಂಡನೆ

ಶಿವಮೊಗ್ಗ: ಇರಾನ್‌ನ ಪರಮೋಚ್ಛ ನಾಯಕ ಅಯತೊಲ್ಲಾ ಖಮೇನಿ ಹತ್ಯೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರವಾಗಿ ಖಂಡಿಸಿದ್ದಾರೆ. ಊರಗಡೂರಿನಲ್ಲಿ ಕೊಲೆಯಾದ ಬಾಲಕನ ಕುಟುಂಬಕ್ಕೆ 15 ಲಕ್ಷ ರೂ. ಪರಿಹಾರದ ಚೆಕ್ ವಿತರಣೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇರಾನ್‌ನ ಖಮೇನಿ ಅವರ ಆತ್ಮಕ್ಕೆ ಶಾಂತಿ ಕೋರಿದರು.



ಖಮೇನಿ ಸಾವು ಖಂಡನೀಯ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಂದೆಡೆ ಶಾಂತಿ ಮಂತ್ರ ಹೇಳುತ್ತಾ ಮತ್ತೊಂದೆಡೆ ಯುದ್ಧ ಮಾಡುತ್ತಿದ್ದಾರೆ. ಹೀಗೆ ದ್ವಂದ ನೀತಿ ಅನುಸರಿಸುತ್ತಿದ್ದಾರೆ. ಈ ಯುದ್ಧ ಅಗತ್ಯ ಇರಲಿಲ್ಲ ಎಂದು ಕಿಡಿಕಾರಿದರು. ■6ನೇ ಪುಟಕ್ಕೆ

ಕನ್ನಡಿಗರ ರಕ್ಷಣೆಗೆ ಸರ್ವ ಪ್ರಯತ್ನ

ಬೆಂಗಳೂರು: ಇಸ್ರೇಲ್–ಇರಾನ್ ನಡುವಿನ ಯುದ್ಧದಲ್ಲಿ ಸಿಲುಕಿರುವ ಕನ್ನಡಿಗರ ರಕ್ಷಣೆಗೆ ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಭಾನುವಾರ ತಿಳಿಸಿದ್ದಾರೆ.



ನಗರದ ತಮ್ಮ ನಿವಾಸದ ಬಳಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇರಳ, ಕರ್ನಾಟಕ ಸೇರಿದಂತೆ ಎಲ್ಲಾ ಕಡೆಯಿಂದ ಇರಾನ್‌ಗೆ ಹೋಗಿದ್ದಾರೆ. ಅವರೆಲ್ಲರ ರಕ್ಷಣೆ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ. ದೆಹಲಿ ಕಮಿಷನರ್‌ಗೆ ಸಂಪರ್ಕದಲ್ಲಿರುವಂತೆ ತಿಳಿಸಲಾಗಿದೆ ಎಂದರು. ಇರಾನ್‌ನಲ್ಲಿ ಈಗ ನಡೆಯುತ್ತಿರುವ ಯುದ್ಧ ಸರಿಯಿಲ್ಲ. ನಮ್ಮದು ಶಾಂತಿಯ ದೇಶ. ನಾವೆಲ್ಲಾ ಶಾಂತಿ, ನೆಮ್ಮದಿಯಿಂದ ಬಂದಿದ್ದೇವೆ. ಮಕ್ಕಳ ಶಾಲೆ ಮೇಲೆ ದಾಳಿ ಮಾಡಿದ್ದು ಖಂಡನೀಯ ಎಂದು ಹೇಳಿದರು.

ಪುಷ್ಪಾ ಅಮರನಾಥ್ ಸೇರಿ 60 ಮಂದಿ ದುಬೈನಲ್ಲಿ ಅತಂತ್ರ

ಅಮೆರಿಕಾದ ಮಿಸೈಲ್ ದಾಳಿಗೆ ಬೆಚ್ಚಿ ಬಿದ್ದಿರುವ ಕನ್ನಡಿಗರು



ಯುದ್ಧ ಪೀಡಿತ ದುಬೈನ ಹೋಟೆಲ್‌ನಲ್ಲಿ ಸಿಲುಕಿರುವ ಕನ್ನಡಿಗರು. ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಪತ್ರಿಕೋದ್ಯಮಿ ಆನಂದ್ ಸಂಕೇಶ್ವರ್ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ.1(ಬಿಎಲ್‌ಯು)– ಕರ್ನಾಟಕ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಪುಷ್ಪಾ, ಅವರ ಪತಿ ಅಮರನಾಥ್ ಸೇರಿದಂತೆ ಕರ್ನಾಟಕದ 60 ಮಂದಿ ದುಬೈನ ಒಂದೇ ಹೋಟೆಲ್‌ನಲ್ಲಿ ಸಿಲುಕಿದ್ದು, ಅಮೇರಿಕಾದ ಮಿಸೈಲ್ ದಾಳಿಯಿಂದ ಬೆಚ್ಚಿ ಬಿದ್ದಿದ್ದಾರೆ.

ದಿನ ಪತ್ರಿಕೆಯೊಂದರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲು ಪುಷ್ಪ, ಅಮರನಾಥ್ ಸೇರಿದಂತೆ ಇತರರು ಫೆಬ್ರವರಿ 25 ರಂದು ದುಬೈಗೆ ತಲುಪಿದ್ದರು. ಪ್ರಶಸ್ತಿ ಪ್ರದಾನ ಸಮಾರಂಭ ಮುಗಿಸಿ ತಯ್ನಾಡಿಗೆ ವಾಪಾಸಾಗಬೇಕು ಎನ್ನುವಾಗ ಈಗ ಯುದ್ಧ ಘೋಷಣೆಯಾಗಿದೆ. ಭಾರತ ಹಾಗೂ ಮಧ್ಯಪ್ರಾಚ್ಯ ದೇಶಗಳ ನಡುವಿನ ವಿಮಾನ ಸಂಚಾರ ಸಂಪೂರ್ಣ ಸ್ಥಗಿತವಾಗಿರುವ ಹಿನ್ನೆಲೆಯಲ್ಲಿ ಇವರೆಲ್ಲಾ ಈಗ ಅಲ್ಲೇ ಸಿಲುಕಿದ್ದಾರೆ.

ದುಬೈನಲ್ಲಿರುವ ಪರಿಸ್ಥಿತಿ ಬಗ್ಗೆ "ಮೈಸೂರು ಮಿತ್ರ"ಗೆ ಮಾಹಿತಿ ನೀಡಿದ ಪುಷ್ಪ ಅಮರನಾಥ್ ಅವರು, ನಾವು ಗ್ರೌಂಡ್ ಟೌನ್ ಎಂಬ ■6ನೇ ಪುಟಕ್ಕೆ

ನಾಗ್ಪುರದ ಸ್ಫೋಟಕ ತಯಾರಿಕಾ ಕಾರ್ಖಾನೆಯಲ್ಲಿ ದುರಂತ 17 ಮಂದಿ ದುರ್ಮರಣ

ಮುಂಬೈ: ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯ ಕಾರ್ಖಾನೆಯೊಂದರಲ್ಲಿ ಭಾರೀ ಸ್ಫೋಟ ಸಂಭವಿಸಿ 17 ಮಂದಿ ದುರ್ಮರಣಕ್ಕೀಡಾಗಿ, 18ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಕಟೋಲ್‌ನ ರೌಲ್‌ಗಾಂವ್‌ನಲ್ಲಿರುವ ಎಸ್‌ಬಿಎಲ್ ಎನರ್ಜಿ ಲಿಮಿಟೆಡ್, ಗಣಿಗಾರಿಕೆ ಮತ್ತು ಕೈಗಾರಿಕಾ ಸ್ಫೋಟಕ ತಯಾರಿಕಾ ಕಂಪನಿಯಲ್ಲಿ ಭಾನುವಾರ ಬೆಳಗ್ಗೆ ಭೀಕರ ಸ್ಫೋಟ ಸಂಭವಿಸಿದ್ದು, ಘಟನೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ.

ಗಣಿಗಾರಿಕೆಯಲ್ಲಿ ಬಳಸುವ ಡಿಟೋನೇಟರ್‌ಗಳು ಮತ್ತು ಇತರ ಸ್ಫೋಟಕ ವಸ್ತುಗಳನ್ನು ತಯಾರಿಸುವ ವೇಳೆ ಹಠಾತ್ ಸ್ಫೋಟ ಸಂಭವಿಸಿದೆ. ಸ್ಫೋಟದ ಶಬ್ದ ಹಾಗೂ ದಟ್ಟಹೊಗೆ ಆವರಿಸಿದ್ದರಿಂದ ಸುತ್ತಮುತ್ತಲ ಗ್ರಾಮಸ್ಥರು ಆತಂಕಗೊಂಡಿದ್ದರು. ಸ್ಫೋಟದ ತೀವ್ರತೆಗೆ ಕಾರ್ಖಾನೆಯ ಒಂದು ಭಾಗ ಕುಸಿದು ಬಿದ್ದಿದೆ. ದುರ್ಘಟನೆಯಲ್ಲಿ 17 ಮಂದಿ ಸಾವನ್ನಪ್ಪಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಯ ಬಗ್ಗೆ ಮಾಹಿತಿ ತಿಳಿದಾಕ್ಷಣ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ರಕ್ಷಣಾ ಕಾರ್ಯಾಚರಣೆ ನಡೆಸಿವೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಕಂಬನಿ ಮಿಡಿದ ಸಿಎಂ ಫಡ್ನವೀಸ್: ದುರಂತದ ಕುರಿತು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಬೇಸರ ವ್ಯಕ್ತಪಡಿಸಿದ್ದಾರೆ. ನಾಗ್ಪುರ ಜಿಲ್ಲೆಯ ರೌಲ್ಗಾಂವ್‌ನಲ್ಲಿರುವ ಸ್ಫೋಟಕ ಕಾರ್ಖಾನೆಯಲ್ಲಿ ■6ನೇ ಪುಟಕ್ಕೆ

ಕೊಡಗಲ್ಲಿ ಕಾಡಾನೆ ದಾಳಿಗೆ ಪಿಯು ವಿದ್ಯಾರ್ಥಿನಿ ಬಲಿ

ಹೆದ್ದಾರಿಯಲ್ಲಿ ರೈತಸಂಘ, ಗ್ರಾಮಸ್ಥರ ಪ್ರತಿಭಟನೆ

ಮಡಿಕೇರಿ, ಮಾ.1– ಕಾಡಾನೆ ದಾಳಿಗೆ ಸಿಲುಕಿ ಪಿಯು ವಿದ್ಯಾರ್ಥಿನಿ ಬಲಿಯಾಗಿರುವ ಘಟನೆ ತಾಲೂಕಿನ ಬೆಟ್ಟತ್ತೂರು ಗ್ರಾಮದಲ್ಲಿ ಶನಿವಾರ ಸಂಭವಿಸಿದೆ. ಮದೆ ಗ್ರಾಮ ಪಂಚಾಯಿತಿಯ ಬೆಟ್ಟತ್ತೂರಿನ ಚಂಗಪ್ಪ (ಗಿರೀಶ್) ದೇವಕ್ಕಿ ದಂಪತಿ ಪುತ್ರಿ ಪೂಜಾ (17) ಮೃತ ದುರ್ದೈವಿ.



ಘಟನೆಯ ವಿವರ : ಪೂಜಾಳ ತಾಯಿ ದೇವಕಿ ಭಾಗಮಂಡಲದ ಬಳಿಯಿರುವ ಕರಿಕೆ ಚೆತ್ತುಕಾಯದ ವಾಲ್ಮೀಕಿ ಆಶ್ರಮ ಶಾಲೆಯಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದು, 15 ದಿನಕ್ಕೊಮ್ಮೆ ಬೆಟ್ಟತ್ತೂರು ಗ್ರಾಮದ ಮನೆಗೆ ಬರುತ್ತಿದ್ದರೆನ್ನಲಾಗಿದೆ.

ಮಡಿಕೇರಿಯ ಸಂತ ಮೈಕಲರ ಶಾಲೆಯಲ್ಲಿ ಪ್ರಥಮ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಪೂಜಾಳಿಗೆ ವಾರ್ಷಿಕ ಪರೀಕ್ಷೆ ಫೆ.19ರಂದು ಮುಗಿದಿದ್ದು, ಆ ಬಳಿಕ ಕೆಲದಿನ ಬೆಟ್ಟತ್ತೂರಿನ ತನ್ನ ಮನೆಯಲ್ಲಿದ್ದು, ಬಳಿಕ ಫೆ.23ರಂದು ಕರಿಕೆಗೆ ತೆರಳಿ ತನ್ನ ತಾಯಿಯೊಂದಿಗೆ ವಾಸವಾಗಿದ್ದಳು.

ನಿನ್ನೆ ಚಂಗಪ್ಪ ತಮ್ಮ ಬೈಕಿನಲ್ಲಿ ಕರಿಕೆ ಗ್ರಾಮಕ್ಕೆ ಹೋಗಿ ಪತ್ನಿ ಮತ್ತು ಪುತ್ರಿಯೊಂದಿಗೆ ಬೈಕಿನಲ್ಲಿ ಸಂಜೆ 5.30ರ ಸಮಯದಲ್ಲಿ ಹಿಂದಿರುಗುತ್ತಿದ್ದರೆನ್ನಲಾಗಿದೆ. ಮನೆಯ ಸಮೀಪ ಬರುತ್ತಿದ್ದಂತೆ ಏರು ರಸ್ತೆಯಲ್ಲಿ ಬೈಕ್‌ನಲ್ಲಿ ಮೂವರು ತೆರಳಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಚಂಗಪ್ಪ ಅವರು ಪತ್ನಿ ದೇವಕಿ ಹಾಗೂ ಮಗಳು ಪೂಜಾಳನ್ನು ಬೈಕ್‌ನಿಂದ ಇಳಿಸಿ ನಡೆದುಕೊಂಡು ಬರುವಂತೆ ಹೇಳಿ ಮನೆ ಕಡೆಗೆ ತೆರಳಿದ್ದಾರೆ. ಅದರಂತೆ ಮಗಳ ಹಿಂದೆ ತಾಯಿ ಹೋಗುತ್ತಿದ್ದಾಗ ಮಗಳ ಮೇಲೆ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಆನೆ ದಾಳಿಯನ್ನು ಕಂಡು ದೇವಕಿ ಭಯದಿಂದ ಜೋರಾಗಿ ಕಿರುಚಿಕೊಂಡಾಗ ಆನೆ ಕಾಡಿನ ಕಡೆ ಹೊರಟು ಹೋಗಿದೆ. ಮುಂದೆ ಹೋಗುತ್ತಿದ್ದ ಚಂಗಪ್ಪ ಕೂಗಿನ ಶಬ್ದ ಕೇಳಿ ಹಿಂದಿಗುಗಿ ಬರುವಷ್ಟರಲ್ಲಿ ದಾಳಿಯಿಂದಾಗಿ ಪೂಜಾ ಗಂಭೀರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ■6ನೇ ಪುಟಕ್ಕೆ

ಫಿಟ್ ಮೈಸೂರು, ಡ್ರಗ್ಸ್ ಮುಕ್ತ, ಸೈಬರ್ ಜಾಗೃತಿಗಾಗಿ

ಮೈಸೂರಲ್ಲಿ ಪೊಲೀಸರ ಮ್ಯಾರಥಾನ್

ನಮ್ಮ ಪೊಲೀಸ್ ನಮ್ಮ ಹೆಮ್ಮೆ; ಜೊತೆಗೂಡಿದ ಸಾವಿರಾರು ಮಂದಿ

ಮೈಸೂರು, ಮಾ.1(ಜಿಎ)–ಬಿಳಿ, ಕೆಂಪು, ನೀಲಿ, ಹಳದಿ ಬಣ್ಣ ಬಣ್ಣದ ಟೀ ಶರ್ಟ್ ಧರಿಸಿದ್ದ ಪೊಲೀಸ್ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಮೈಸೂರಿಗರು ನಮ್ಮ ಪೊಲೀಸ್ ನಮ್ಮ ಹೆಮ್ಮೆ ಎಂದು ಮ್ಯಾರಥಾನ್‌ನಲ್ಲಿ ಹೆಜ್ಜೆ ಹಾಕಿದರು.

ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್ ವತಿಯಿಂದ ಕರ್ನಾಟಕ ರಾಜ್ಯ ಪೊಲೀಸ್ ರನ್ ಅಂಗವಾಗಿ ಅರಮನೆ ಆವರಣದಲ್ಲಿ ಡ್ರಗ್ಸ್ ಮುಕ್ತಗೊಳಿಸಲು, ಸೈಬರ್ ಜಾಗೃತಿ ಹಾಗೂ ಫಿಟ್ ಮೈಸೂರಿಗಾಗಿ ಆಯೋಜಿಸಿದ್ದ 'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಮ್ಯಾರಥಾನ್‌ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಐಜಿಪಿ ಎಂ.ಬಿ.ಬೋರಲಿಂಗಯ್ಯ ಹಸಿರು ನಿಶಾನೆ ತೋರಿದರು.

ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ ಮಾತನಾಡಿ, 'ಮೈಸೂರಿನಲ್ಲಿ ಸಾಲು ಸಾಲು ಮ್ಯಾರಥಾನ್ ನಡೆಯುತ್ತಿವೆ. ಪ್ರಮುಖವಾಗಿ ಮೈಸೂರಿಗರ ಫಿಟ್‌ನೆಸ್‌ಗಾಗಿ ನಡೆಯುತ್ತಿದೆ. ಸೂರ್ಯ ಉದಯಿಸುವ ಮುನ್ನ ವಾಕ್ ಮಾಡಿದರೆ ದೇಹದಲ್ಲಿ ಟಾಕ್ಸಿಕ್ ದೂರವಾಗಲಿದೆ ಎಂದರು.



ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್ ವತಿಯಿಂದ ಫಿಟ್ ಮೈಸೂರಿಗಾಗಿ ಆಯೋಜಿಸಿದ್ದ 'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಮ್ಯಾರಥಾನ್‌ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಐಜಿಪಿ ಎಂ.ಬಿ.ಬೋರಲಿಂಗಯ್ಯ ಹಸಿರು ನಿಶಾನೆ ತೋರಿದರು. ನಟ ವಿನಯ್ ರಾಘವೇಂದ್ರ ರಾಜಕುಮಾರ್, ನಟಿಯರಾದ ಅಮೃತ ಐಯ್ಯಂಗಾರ್, ಬೃಂದಾ ಆಚಾರ್, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಯುಕೇಶ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಪೊಲೀಸರು ಸಾಮರ್ಥ್ಯದಿಂದ ಕೂಡಿದ್ದಾರೆ. ಪೊಲೀಸ್ ಕೆಲಸ ಎಂದರೆ ಹುಲಿ ಮೇಲೆ ಸವಾರಿ ಮಾಡಿದಂತೆ ಹುಲಿಯನ್ನು ಪಳಗಿಸಿ ಕುಳಿತುಕೊಳ್ಳಬೇಕು ಇಲ್ಲವಾದರೆ ಹುಲಿಯೆ ಬಲಿ ಪಡೆಯುತ್ತದೆ. ಆದರೆ ನಮ್ಮ ಪೊಲೀಸರು ಜನರ ಮಾನ, ಪ್ರಾಣ, ಘನತೆ ಕಾಪಾಡಬೇಕು ಎಂಬ ಉದ್ದೇಶದಿಂದ ಕೆಲಸ ಮಾಡುತ್ತಿದ್ದು, ಮಾದಕ ವಸ್ತುಗಳಿಂದ ದೂರ ಇರಬೇಕು ಎಂಬುದರ ಜೊತೆ ಸೈಬರ್ ಕ್ರೈಂ ಜಾಗೃತಿ ಮೂಡಿಸುತ್ತಿದ್ದಾರೆ. ಮಾಹಿತಿ, ಶಿಕ್ಷಣ, ಸಂವಹನೆಗಾಗಿ ವಾಕಥಾನ್ ಅನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಇತಿಹಾಸ ಮತ್ತು ಶಾಂತಿಗೆ ಪ್ರಿಯವಾದ ಮೈಸೂರು ನಗರವನ್ನು ಪೊಲೀಸರು ಡ್ರಗ್ಸ್ ಜಪ್ತಿ ಮಾಡಿ, ಚಿನ್ನಾಭರಣ ಹಿಂದಿರುಗಿಸುವ ಮೂಲಕ ಜನರಿಗೆ ಧೈರ್ಯ ತುಂಬುತ್ತಿದ್ದಾರೆ. ಸಾರ್ವಜನಿಕರು ಪೊಲೀಸರಿಗೆ ಮಾಹಿತಿಯನ್ನು ನೀಡುವ ಕೆಲಸ ಮಾಡಬೇಕಿದೆ ಎಂದು ಸಲಹೆ ನೀಡಿದರು.

ನಟ ವಿನಯ್ ರಾಘವೇಂದ್ರ ರಾಜಕುಮಾರ್ ಮಾತನಾಡಿ, ■6ನೇ ಪುಟಕ್ಕೆ



5 ಕಿಮೀ, 10 ಕಿಮೀ ಮ್ಯಾರಥಾನ್

5 ಕಿಮೀ ಓಟವು ಅರಮನೆ ಆವರಣ, ಕೆ.ಆರ್.ವೃತ್ತ– ಡಿ.ದೇವರಾಜ ಅರಸು ರಸ್ತೆ. ಜೆ.ಎಲ್.ಬಿ ಜಂಕ್ಷನ್–ಎಡ ತಿರುವು– ರೋಟರಿ ಜಂಕ್ಷನ್– ಮುಡಾ ಜಂಕ್ಷನ್– ರಾಮಸ್ವಾಮಿ ವೃತ್ತ–ಎಡ ತಿರುವು– ಚಾಮರಾಜ ಜೋಡಿ ರಸ್ತೆ– ತಾತಯ್ಯ ವೃತ್ತ– ಗನ್ ಹೌಸ್ ವೃತ್ತ– ಹಾರ್ಡಿಂಜ್ ವೃತ್ತ– ಎಡ ತಿರುವು– ಕೋಟೆ ಆಂಜನೇಯಸ್ವಾಮಿ ದೇವಸ್ಥಾನ– ಮುಕ್ತಾಯ

10ಕಿಮೀ ಓಟವು ಅರಮನೆ ಆವರಣ, ಕೆ.ಆರ್.ವೃತ್ತ– ಡಿ.ದೇವರಾಜ ಅರಸು ರಸ್ತೆ– ಜೆ.ಎಲ್.ಬಿ ಜಂಕ್ಷನ್– ಬಲ ತಿರುವು– ಮೆಟ್ರೋಪೋಲ್ ವೃತ್ತ– ಹುಣಸೂರು ರಸ್ತೆ ಕಲಾಮಂದಿರ ಜಂಕ್ಷನ್– ಪಡುವಾರಹಳ್ಳಿ ಜಂಕ್ಷನ್– ಎಡ ತಿರುವು– ಬಂಯಲು ರಂಗಮಂದಿರ ರಸ್ತೆ– ಸೆನೆಟ್ ಭವನ ಜಂಕ್ಷನ್– ಬಲ ತಿರುವು– ಕ್ಲಾಕ್ ಟವರ್ ರಸ್ತೆ– ಕುವೆಂಪು ಪ್ರತಿಮೆ ಜಂಕ್ಷನ್– ಎಡ ತಿರುವು– ಬೋಗಾದಿ ರಸ್ತೆ– ವಿ.ಎಂ.ಡಿ ಜಂಕ್ಷನ್– ಪದ್ಮ ವೃತ್ತ– ಬಲ ತಿರುವು– ಫೈರ್ ಬ್ರಿಗೇಡ್ ಜಂಕ್ಷನ್– ಎಡ ತಿರುವು– ಏಕಲವ್ಯ ವೃತ್ತ–ರಾಮಸ್ವಾಮಿ ವೃತ್ತ–ಚಾಮರಾಜ ಜೋಡಿ ರಸ್ತೆ– ತಾತಯ್ಯ ವೃತ್ತ– ಗನ್ ಹೌಸ್ ವೃತ್ತ–ಹಾರ್ಡಿಂಜ್ ವೃತ್ತ–ಎಡ ತಿರುವು–ಅರಮನೆ ತಲುಪಿತು.

ಲಕ್ಷ್ಮೀಕಾಂತನಗರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ



ಮೈಸೂರಿನ ಲಕ್ಷ್ಮೀಕಾಂತನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು, ಮಾ.1(ಎಂಕೆ)– ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿಎಂಐಡಿಪಿ) ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ 50 ಕೋಟಿ ರೂ. ಅನುದಾನದಡಿ ನಗರಪಾಲಿಕೆ ವಾರ್ಡ್ ನಂ.1ರ ಲಕ್ಷ್ಮೀಕಾಂತನಗರ ವ್ಯಾಪ್ತಿಯಲ್ಲಿ 6.19 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಭಾನುವಾರ ಗುದ್ದಲಿಪೂಜೆ ನೆರವೇರಿಸಿದರು.

ಸುಬ್ರಮಣ್ಯ ನಗರದ ಹಳೇ ಪೊಲೀಸ್ ಸ್ಟೇಷನ್ ಹಿಂಭಾಗ, ಸುಬ್ರಮಣ್ಯ ದೇವಸ್ಥಾನ, ಹೆಬ್ಬಾಳ 2ನೇ ಹಂತದ ಮಯೂರ ವೃತ್ತ ಮತ್ತು ಕಾವೇರಿ ವೃತ್ತದ ಅಡ್ಡ ರಸ್ತೆಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಲಕ್ಷ್ಮೀಕಾಂತನಗರದ ನಿಸರ್ಗ ಬಡಾವಣೆ, ಎಲ್‌ಐಜಿ ಮನೆಗಳ ಮುಂಭಾಗ ಕಾಂಕ್ರೀಟ್ ರಸ್ತೆ, ಮಾರಿಗುಡಿ ದೇವಸ್ಥಾನ, ಮಾನಸ ಭಂಡಾರ ಹತ್ತಿರದ ಅಡ್ಡ ರಸ್ತೆಗಳು, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ದೇವರಾಜ ಬ್ಲಾಕ್ ಅಧ್ಯಕ್ಷ ಡಿ.ನಾಗಭೂಷಣ್, ವಾರ್ಡ್ ಅಧ್ಯಕ್ಷ ಜಗದೀಶ್, ಗೀತಾ, ತನುಜಾ ಮಹೇಶ್, ಮುಖಂಡರಾದ ರಾಮಚಂದ್ರು, ರಮೇಶ್, ಡಿಕ್ಸಿ ಮೋಹನ್, ಡೈರಿ ರಮೇಶ್, ಮಹೇಶ್ ಮಸಿಯಪ್ಪ, ಚಂದ್ರು ಕಾಂತಣ್ಣ, ವಿಜಿ, ವೆಂಕಟೇಶ್ ಮತ್ತಿತರರಿದ್ದರು.

ಉತ್ತಮ ಪ್ರಜೆಯಾಗಲು ಮಕ್ಕಳಿಗೆ ಶಿಕ್ಷಣದೊಂದಿಗೆ ಸಂಸ್ಕಾರ ಮುಖ್ಯ

ಹಿರಿಯ ಶಾಸಕ ಜಿ.ಟಿ.ದೇವೇಗೌಡರ ಅಭಿಮತ



ಮೈಸೂರಿನ ವಿಜಯನಗರದಲ್ಲಿರುವ ಕಲಿಕೆ ಎಜುಕೇಷನ್ ಟ್ರಸ್ಟ್‌ನ ಎರಡನೇ ವಾರ್ಷಿಕೋತ್ಸವ ಅಂಗವಾಗಿ ಏರ್ಪಡಿಸಿದ್ದ ಉಚಿತ ಶಾಲಾ ಬ್ಯಾಗ್ ಮತ್ತು ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಶಾಸಕ ಜಿ.ಟಿ. ದೇವೇಗೌಡರು ಉದ್ಘಾಟಿಸಿದರು.


ಮೈಸೂರು, ಮಾ.1–ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸಿದರೆ ಅವರು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ವಿಜಯನಗರ ನಾಲ್ಕನೇ ಹಂತ, 1ನೇ ಘಟ್ಟದಲ್ಲಿರುವ ಕಲಿಕೆ ಎಜುಕೇಷನ್ ಟ್ರಸ್ಟ್‌ನ ಎರಡನೇ ವಾರ್ಷಿಕೋತ್ಸವ ಪ್ರಯುಕ್ತ ಆಯೋಜಿಸಿದ್ದ ಉಚಿತ ಶಾಲಾ ಬ್ಯಾಗ್ ಮತ್ತು ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಮನೆಯೇ ಮೊದಲ ಪಾಠಶಾಲೆಯಾದರೆ, ಶಾಲೆ ಬದುಕಿನ ದಿಕ್ಕು ತೋರಿಸುವ ಹಾಗೂ ಸೂಕ್ತ ಮಾರ್ಗದರ್ಶನ ನೀಡುವ ಪುಣ್ಯಕ್ಷೇತ್ರ. ಮಕ್ಕಳಿಗೆ ಪಠ್ಯದ ಜೊತೆಗೆ ಬದುಕಿನ ಶಿಕ್ಷಣ ನೀಡಬೇಕು. ಮಾನವೀಯ ಮೌಲ್ಯಗಳೊಂದಿಗೆ ಸಂಸ್ಕಾರ ಕಲಿಸಿದರೆ ಅವರು ಜವಾಬ್ದಾರಿಯುತ ಉತ್ತಮ ಪ್ರಜೆಗಳಾಗುತ್ತಾರೆ. ದೇಶದ ಭವಿಷ್ಯ ರೂಪಿಸುವ ನಾಯಕತ್ವ ಗುಣ ಬೆಳೆಸಿಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಪೋಷಕರು ಹಾಗೂ ಶಿಕ್ಷಕರ ಜವಾಬ್ದಾರಿ ಸಮಾನವಾಗಿದೆ ಎಂದರು.

ಮಕ್ಕಳು ಕಲಿಕೆಯಲ್ಲಿ ಸದಾ ಮುಂದಿರಬೇಕು. ಕಲಿಕೆ ಜತೆಗೆ ಇನ್ನಿತರ ಚಟುವಟಿಕೆಗಳಲ್ಲೂ ಭಾಗಿಯಾಗಬೇಕು. ನೃತ್ಯ, ಸಂಗೀತ, ಹಾಡುಗಾರಿಕೆ, ಭರತನಾಟ್ಯ ಮೊದಲಾದ ಕಲಾಪ್ರಕಾರಗಳನ್ನು ಕಲಿತರೆ ಉತ್ತಮ. ಮಕ್ಕಳು ಮುಖ್ಯವಾಗಿ ಸಂಸ್ಕಾರವಂತರಾಗಬೇಕು. ತಂದೆ–ತಾಯಿ, ಶಿಕ್ಷಕರನ್ನು ಗೌರವಿಸಬೇಕು. ಮಕ್ಕಳನ್ನು ಓದಿಸಲು ಪೋಷಕರು ಸಾಕಷ್ಟು ಶ್ರಮಿಸುತ್ತಾರೆ. ತಮ್ಮ ಜೀವನದ ಸುಖ–ಸಂತೋಷ ತ್ಯಾಗ ಮಾಡುತ್ತಾರೆ. ಹಾಗಾಗಿ ನೀವು ದೊಡ್ಡವರಾದ ಮೇಲೆ ತಂದೆ–ತಾಯಿಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಈ ವೇಳೆ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಿವೃತ್ತ ಹಿರಿಯ ವ್ಯವಸ್ಥಾಪಕ ಬಿ.ಎಲ್.ರಾಮೇಗೌಡ, ಎಂಐಟಿ ಕಾಲೇಜು ಸಹ ಪ್ರಾಧ್ಯಾಪಕ ಡಾ.ವಿ.ಮಂಜುನಾಥ, ವಿಜಯನಗರ ಮಂಜು ಮತ್ತಿತರರು ಉಪಸ್ಥಿತರಿದ್ದರು.

ಕಾತ್ಯಾಯಿನಿ ಅವರ 'ಬಚ್ಚಿಟ್ಟ ಭಾವಗಳು', 'ಚಿಕ್ಕಕಥೆಗಳ ಚುಕ್ಕಿ ರಂಗೋಲಿ' ಕೃತಿಗಳು ಲೋಕಾರ್ಪಣೆ



ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾನುವಾರ ನಡೆದ ಕಾಂಯಕ್ರಮದಲ್ಲಿ ಕೊಳ್ಳೇಗಾಲದ ಪಿ.ಕಾತ್ಯಾಯಿನಿ ಅವರ ಎರಡು ಕೃತಿಗಳನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು.

ಮೈಸೂರು,ಮಾ.1(ಎಂಟಿವೈ)– ಗಜಲ್‌ಗಳಲ್ಲಿ ಭಾವನೆಗಳು ಮುಖ್ಯವಾಗಿದ್ದು, ಗಜಲ್ ಲೋಕ ಸುಂದರವಾಗಿದೆ ಎಂದು ಹೈದರಾಬಾದಿನ ಸಾಹಿತಿ ಡಿ.ಬಿ.ರಾಘವೇಂದ್ರರಾವ್ ಬಣ್ಣಿಸಿದ್ದಾರೆ.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಬಳಗ ಆಯೋಜಿಸಿದ್ದ ಕೊಳ್ಳೇಗಾಲದ ಪಿ.ಕಾತ್ಯಾಯಿನಿ ಅವರ 'ಬಚ್ಚಿಟ್ಟ ಭಾವಗಳು' ಹಾಗೂ 'ಚಿಕ್ಕ ಕಥೆಗಳ ಚುಕ್ಕಿ ರಂಗೋಲಿ' ಕೃತಿಗಳ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗಜಲ್‌ಗಳದ್ದು ಉತ್ತಮ ಲೋಕ. ನಿರಂತರವಾಗಿ ಬರೆಯುತ್ತಿದ್ದರೆ, ಭಾವನೆಗಳನ್ನೇ ವಸ್ತುವಾಗಿರಿಸಿಕೊಂಡು ಗಜಲ್ ರಚನೆ ಸಿದ್ಧಿಸುತ್ತದೆ. ಪಿ. ಕಾತ್ಯಾಯಿನಿ ಅವರು ಬಹುಮುಖ ಪ್ರತಿಭೆಯಾಗಿದ್ದು, ಅತ್ಯುತ್ತಮವಾಗಿ ಕಥೆ, ಕವನಗಳು, ಗಜಲ್‌ಗಳನ್ನು ಬರೆಯುತ್ತಿದ್ದಾರೆ ಎಂದರು.

'ಬಚ್ಚಿಟ್ಟ ಭಾವಗಳು'–ಗಜಲ್ ಸಂಕಲನ ಕುರಿತು ಪುತ್ತೂರಿನ ಹಿರಿಯ ಪತ್ರಕರ್ತ ಗಣೇಶ್‌ಪ್ರಸಾದ್ ಪಾಂಡೇಲು ಮಾತನಾಡಿ, ಕನ್ನಡದಲ್ಲಿ ಮೊದಲು ಶಾಂತರಸ ಅವರು ಗಜಲ್‌ಗಳನ್ನು ಬರೆದರು. ನಂತರ ಈ ಪ್ರಕಾರ ಬೆಳೆಯುತ್ತಾ ಬರುತ್ತಿದೆ. ಗಜಲ್‌ಗಳ ರಚನೆಗೆ ಅಧ್ಯಯನಶೀಲತೆ ಹಾಗೂ ಶೈಕ್ಷಣಿಕ ಶಿಸ್ತು ಮುಖ್ಯ ಎಂದರು.

ಗಜಲ್‌ಗಳ ಭಾವನೆಗಳ ಲೋಕ ಸುಂದರವಾಗಿದೆ

'ಚಿಕ್ಕಕಥೆಗಳ ಚುಕ್ಕಿ ರಂಗೋಲಿ'– ನ್ಯಾನೋ ಕಥಾ ಸಂಕಲನ ಕುರಿತು ಹೊಯ್ಸಳ ಕನ್ನಡ ಸಂಘದ ಕಾರ್ಯದರ್ಶಿ ರಂಗನಾಥ್ ಮೈಸೂರು ಮಾತನಾಡಿ, ನೀಳ್ಗತೆಗಳನ್ನು ಓದಲು ಯಾರಿಗೂ ಸಮಯವಿಲ್ಲ. ಹೀಗಾಗಿ ಪುಟ್ಟ ಪುಟ್ಟ ಕಥೆಗಳನ್ನು ಓದುತ್ತಾರೆ. ಪತ್ರಿಕೆಗಳ ವಿಶೇಷಾಂಕಗಳಲ್ಲೂ ನ್ಯಾನೋ ಕಥೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಪಿ.ಕಾತ್ಯಾಯಿನಿ ಅವರು ಅಲ್ಪ ಸಮಯದಲ್ಲಿಯೇ ಓದುವಂತೆ ಒಂದೆರೆಡು ಪ್ಯಾರಾಗಳಲ್ಲಿಯೇ ಕಥೆಗಳನ್ನು ಕಟ್ಟಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಉರ್ದುವಿನಲ್ಲಿ ಗಜಲ್‌ಗಳು ಬಹು ಜನಪ್ರಿಯವಾಗಿವೆ. ಇತ್ತೀಚೆಗೆ ಕನ್ನಡದಲ್ಲಿಯೂ ಗಜಲ್‌ಗಳ ರಚನೆ ಹೆಚ್ಚಿದೆ ಎಂದರು.

ಕೊಳ್ಳೇಗಾಲ ಸಾಹಿತ್ಯ ಮಿತ್ರಕೂಟದ ಅಧ್ಯಕ್ಷ ಬಾಳಗುಣಸೆ ಮಂಜುನಾಥ್ ಮಾತನಾಡಿ, ಕೃತಿಗಳ ಸಂಖ್ಯೆಗಿಂತ ಗಟ್ಟಿ ಸಾಹಿತ್ಯ ನೀಡುವತ್ತ ಗಮನಹರಿಸಬೇಕು ಎಂದು ಸಲಹೆ ಮಾಡಿದರು.

ಎರಡೂ ಕೃತಿಗಳನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು. ಸಿರಿಗನ್ನಡ ವೇದಿಕೆ ರಾಜ್ಯ ಉಪಾಧ್ಯಕ್ಷೆ ಸೌಗಂಧಿಕಾ ಜೋಯ್ಸ್, ಲೇಖಕಿ ಬಿ.ಕೆ.ಮೀನಾಕ್ಷಿ, ಕೊ.ಸು.ನರಸಿಂಹಮೂರ್ತಿ ಮಾತನಾಡಿದರು. ಮನಿಷಾ ಪ್ರಾರ್ಥಿಸಿದರು. ಪಿ.ಕಾತ್ಯಾಯಿನಿ ಸ್ವಾಗತಿಸಿದರು. ಪ್ರಿಯಾ ಕಾರ್ತಿಕೇಯನ್ ಕಾರ್ಯಕ್ರಮ ನಿರೂಪಿಸಿದರು. ಪರಮೇಶ್ ಕೆ. ಉತ್ತನಹಳ್ಳಿ ಪ್ರೊ.ಆರ್.ಎ.ಕುಮಾರ್, ಆದಿಲ್ ಪಾಷ ಗೀತೆಗಳನ್ನು ಹಾಡಿದರು.

ಡಾ.ನಿಶಾತ್ ಖಾನಂಗೆ ಪಿಎಚ್.ಡಿ ಪದವಿ



ಮೈಸೂರು: ಡಾ.ಬಿ.ಆರ್.ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಡಾ.ನಿಶಾತ್ ಖಾನಂ ಅವರು ದಂತ ವೈದ್ಯಕೀಯ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ತಂಬಾಕು ಬಳಕೆಯನ್ನು ನಿಲ್ಲಿಸುವ ಸಂದರ್ಭದಲ್ಲಿನ ಲಕ್ಷಣಗಳನ್ನು ಕಡಿಮೆ ಮಾಡುವುದು ಹಾಗೂ ತಂಬಾಕು ಸಂಬಂಧಿತ ಬಾಯಿಯ ಗಾಯಗಳ ಗುಣಮುಖತೆಯನ್ನು ಉತ್ತೇಜಿಸುವ ಹೊಸತಾದ ನವೀನ ಔಷಧೀಯ ಹರ್ಬಲ್ ಸಂಯೋಜನೆಯ ಅಭಿವೃದ್ಧಿ' ಕುರಿತು ಮಹಾಪ್ರಬಂಧ'ವನ್ನು ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ. ಈಕೆ ನಿವೃತ್ತ ಕಾರ್ಯ ನಿರ್ವಾಹಕ ಇಂಜಿನಿಯರ್ (ಪಿಡಬ್ಲ್ಯುಡಿ) ಅಹಮದ್ ಖಾನ್ ಅವರ ಪುತ್ರಿ.

ಅಭಿನಂದನೆ



ಮೈಸೂರು ತಾಲೂಕಿನ ಜಯಪುರ ಗ್ರಾಮದ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ 25 ಸಾವಿರ ಜನರಿಗೆ ನಿರಂತರ ದಾಸೋಹಕ್ಕೆ ಅಡುಗೆ ತಯಾರಿಸಿಕೊಟ್ಟ ಧನಗಹಳ್ಳಿ ಬಸವಣ್ಣ ಅವರನ್ನು, ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಾಲಯ ಸಮಿತಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಮಾವಿನಹಳ್ಳಿ ಎಸ್.ಸಿದ್ದೇಗೌಡ ಸನ್ಮಾನಿಸಿದರು. ಈ ವೇಳೆ ಸಮಿತಿ ಸದಸ್ಯರಾದ ಚೌಡೇಗೌಡ, ನಾಗೇಶ್, ಚೌಡಚಾರಿ, ಎ.ದೇವಪ್ಪ, ನಾಗೇಗೌಡ, ನಾಗರಾಜಪ್ಪ, ಚಿಕ್ಕಣ್ಣನ ಶಿವಣ್ಣ, ದೇವಪ್ಪ, ಬಸವರಾಜಪ್ಪ, ಬಸವಲಿಂಗಸ್ವಾಮಿ, ಮಲ್ಲಪ್ಪ, ಪಿ. ಬಸವರಾಜು, ಜವರನಾಯಕ, ಎಂ. ನಾಗರಾಜು, ಬಿ.ರೇಣುಕಾ ಮತ್ತು ಮೂಗನಾಯಕ ಉಪಸ್ಥಿತರಿದ್ದರು.

ಕಲಿಕೆಯಲ್ಲಿ ಗುಣಮಟ್ಟ, ಮೌಲ್ಯಯುತ ಶಿಕ್ಷಣಕ್ಕೆ ಶಿಕ್ಷಕರ ಪಾತ್ರ ಮುಖ್ಯ

ಶಿಕ್ಷಣೋದ್ಯಮಿ ಐಶ್ವರ್ಯ ಡಿಕೆಎಸ್ ಹೆಗ್ಡೆ ಅಭಿಪ್ರಾಯ

ಮೈಸೂರು, ಮಾ.1(ಎಂಕೆ)– ಶಿಕ್ಷಣ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಅಳವಡಿಕೆ ನಡುವೆಯೂ ವಿದ್ಯಾರ್ಥಿಗಳ ಕಲಿಕೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು, ಮೌಲ್ಯಯುತ ಶಿಕ್ಷಣ ನೀಡಲು ಶಿಕ್ಷಕರ ಪಾತ್ರ ಮುಖ್ಯವಾಗಿದೆ ಎಂದು ಟೀಚರ್ 360 ಸಂಸ್ಥೆಯ ಪೋಷಕರೂ ಆದ ಯುವ ಶಿಕ್ಷಣೋದ್ಯಮಿ ಐಶ್ವರ್ಯ ಡಿಕೆಎಸ್ ಹೆಗ್ಡೆ ಹೇಳಿದರು.

ಮೈಸೂರಿನ ವಿಜಯನಗರದಲ್ಲಿರುವ ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಭಾಂಗಣದಲ್ಲಿ ಟೀಚರ್360 ಸಂಸ್ಥೆ ವತಿಯಿಂದ ಆಯೋಜಿಸಿದ್ದ ಎಜುಕೇಟರ್ ಎನ್‌ಕ್ಲೇವ್ ಮೈಸೂರು–2026 'ನಾನು ಕಲಿತು ಮುನ್ನಡೆಯುತ್ತೇನೆ' ಕುರಿತು ಮಾತನಾಡಿದ ಅವರು, ಎಐ ಹೆಚ್ಚಿನ ಮಾಹಿತಿಯನ್ನೇ ಒದಗಿಸಿದರೂ ಸಮಂಜಸ ಮತ್ತು ಅವಶ್ಯವಿರುವುದನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಶಿಕ್ಷಕರಿಂದ ಮಾತ್ರವೇ ಸಾಧ್ಯ ಎಂದರು.



ಎಜುಕೇಟರ್ ಎನ್‌ಕ್ಲೇವ್ ಮೈಸೂರು–2026 ಟೀಚರ್360 ಸಂಸ್ಥೆ ಪೋಷಕಿ, ಯುವ ಶಿಕ್ಷಣೋದ್ಯಮಿ ಐಶ್ವರ್ಯ ಡಿಕೆಎಸ್ ಹೆಗ್ಡೆ ಮಾತನಾಡುತ್ತಿರುವುದು.

ಕೃತಕ ಬುದ್ಧಿಮತ್ತೆ ನೀಡುವ ಮಾಹಿತಿಯಲ್ಲಿ ಅನಾವಶ್ಯಕ ವಿಚಾರಗಳು ಇರಲಿವೆ. ಆದ್ದರಿಂದ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಅಗತ್ಯವಿರುವದನ್ನು ಕಲಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಮಕ್ಕಳಲ್ಲಿನ ಶಕ್ತಿಯನ್ನು ಜ್ಞಾನವಾಗಿ ಪರಿವರ್ತಿಸುವುದು ಶಿಕ್ಷಕರ ಕೆಲಸವಾಗಿದೆ. ಈ ನಿಟ್ಟಿನಲ್ಲಿ ತರಗತಿ ಸಂತೋಷದಿಂದ ಶಿಕ್ಷಕರ ಸಂತೋಷವೂ ಮುಖ್ಯ ಎಂದು ಐಶ್ವರ್ಯ ಡಿಕೆಎಸ್ ಹೆಗ್ಡೆ ಅಭಿಪ್ರಾಯಪಟ್ಟರು.

ಶಿಕ್ಷಣ ವ್ಯವಸ್ಥೆಯು ಅತ್ಯಂತ ದೊಡ್ಡ ಜವಾಬ್ದಾರಿಯಾಗಿದ್ದು, ನಿರಂತರ ಕಲಿಕಾ ಪ್ರಕ್ರಿಯೆಯಾಗಿದೆ. ಶಾಲೆಯಲ್ಲಿ ಸಮಯ ಮತ್ತು ಶಿಕ್ಷಕರು ಬದಲಾವಣೆಯಾದರೂ ಶಾಲೆಯ ಶಿಸ್ತಿನಲ್ಲಿ ಹಿನ್ನಡೆಯಾಗಬಾರದು. ಶಿಕ್ಷಣ ಆಲೋಚನೆ, ಪ್ರಸ್ತುತತೆ ಮತ್ತು ಫಲಿತಾಂಶದ ಮೂಲಕ ವ್ಯಕ್ತವಾಗಬೇಕು. ಇದಕ್ಕಾಗಿ ಜ್ಞಾನದ ವೃದ್ಧಿ, ಕೌಶಲ್ಯಗಳು ಮತ್ತು ಮೌಲ್ಯಯುತ ಅಂಶಗಳ ಅಳವಡಿಕೆ ಮುಖ್ಯವಾಗಿದೆ ಎಂದರು.

ಮಕ್ಕಳೊಂದಿಗೆ ಉತ್ತಮ ರೀತಿಯಲ್ಲಿ ಸಂವಹನ ನಡೆಸುವುದು ಬೋಧನೆ ಮತ್ತು ಕಲಿಕೆಯನ್ನು ಪರಿಣಾಮಕಾರಿಯಾಗಿ ಮಾಡುವ ಕೀಲಿಯಾಗಿದೆ ಎಂದು ಒತ್ತಿ ಹೇಳಿದ ಐಶ್ವರ್ಯ, ಮೊದಲೆಲ್ಲಾ ದೀಪದ ಬೆಳಕಿನಲ್ಲಿ ಓದುವ ಪರಿಸ್ಥಿತಿ ಇತ್ತು. ಆದರೆ, ಇಂದು ಎಲ್ಲವೂ ಇದೆ. ತಂತ್ರಜ್ಞಾನ ಮುಂದುವರೆದಿದೆ. ಇದೆಲ್ಲವನ್ನೂ ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಶಿಕ್ಷಕರು ಕಲಿಯುವ ನಾಯಕರಾಗಿದ್ದು, ಪ್ರಶ್ನೋತ್ತರಗಳ ಮೂಲಕ, ಉತ್ತಮ ಆಲೋಚನೆ ಮತ್ತು ಮಾರ್ಗದರ್ಶನದ ಮೂಲಕ ಹಾಗೂ ಉತ್ತಮ ಮೌಲ್ಯಗಳನ್ನು ಬಿತ್ತಿ–ಬೆಳೆಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ತರಬೇಕಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಟೀಚರ್360 ಸಂಸ್ಥೆಯ ಮುಖ್ಯಸ್ಥ ಜಿ.ಬಾಲಸುಬ್ರಮಣಿಯನ್ ಪ್ರಾಸ್ತಾವಿಕ ಮಾತುಗಳನ್ನಾಡಿದರೆ, ಮಾರ್ಗದರ್ಶಕ ಪಿಕ್‌ಬ್ರೈನ್ ಗಿರಿ ಬಾಲಸುಬ್ರಮಣಿಯನ್ ಸ್ವಾಗತ ಕೋರಿದರು.

ಡಾ.ಅನ್ನಪೂರ್ಣರ 'ಅಮ್ಮನ ಹೆಬ್ಬೆರಳು', 'ಕೊರಡು ಕೊನರುವುದೇನಯ್ಯ' ಕೃತಿ ಬಿಡುಗಡೆ



ಲೇಖಕಿ ಡಾ.ಅನ್ನಪೂರ್ಣ ರಚಿತ 'ಅಮ್ಮನ ಹೆಬ್ಬೆರಳು' ಮತ್ತು 'ಕೊರಡು ಕೊನರುವುದೇನಯ್ಯ' ಕವನ ಮತ್ತು ಕಥಾ ಸಂಕಲನ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು, ಮಾ.1(ಎಂಕೆ)– ಲೇಖಕಿ ಡಾ.ಅನ್ನಪೂರ್ಣ ರಚಿತ 'ಅಮ್ಮನ ಹೆಬ್ಬೆರಳು' ಮತ್ತು 'ಕೊರಡು ಕೊನರುವುದೇನಯ್ಯ' ಕವನ ಮತ್ತು ಕಥಾ ಸಂಕಲನವನ್ನು ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಅರಿವು ಸಂಶೋಧನಾ ವೇದಿಕೆ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಹಾಗೂ ಚಿಂತನ ಚಿತ್ತಾರದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ತಳವಾರ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಹೆಣ್ಣುಮಕ್ಕಳು ಸಾಹಿತ್ಯ ಬರವಣಿಗೆಯಲ್ಲಿ ಹೆಚ್ಚೆಚ್ಚು ತೊಡಗಿಸಿಕೊಳ್ಳಬೇಕು. ಕನ್ನಡ ಸಾಹಿತ್ಯ ಅಧ್ಯಯನದ ನಂತರ ಬಹುತೇಕರು ಬೋಧನೆಯತ್ತ ಮುಖ ಮಾಡುತ್ತಾರೆ. ಆದರೆ, ಕೆಲವರು ಮಾತ್ರವೇ ಬರವಣಿಗೆ ರೂಢಿಸಿಕೊಳ್ಳುತ್ತಾರೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿವಿ ಕನ್ನಡ ಅಧ್ಯಯನ ವಿಭಾಗದ ನಿರ್ದೇಶಕಿ ಪ್ರೊ.ಕವಿತಾ ರೈ, 'ಅಮ್ಮನ ಹೆಬ್ಬೆರಳು' ಕವನ ಸಂಕಲನ ಕುರಿತು ಮಾತನಾಡಿದರೆ, 'ಕೊರಡು ಕೊನರುವುದೇನಯ್ಯ' ಕಥಾ ಸಂಕಲನ ಕುರಿತು ಪತ್ರಕರ್ತ ಕೆ.ನರಸಿಂಹಮೂರ್ತಿ ಅಭಿಪ್ರಾಯ ಹಂಚಿಕೊಂಡರು. ಚಿಂತನ ಚಿತ್ತಾರದ ನಿಂಗರಾಜು ಚಿತ್ತಣ್ಣನವರ್, ಡಾ.ಶೈಲಾ, ಲೇಖಕಿ ಡಾ.ಅನ್ನಪೂರ್ಣ ಮತ್ತಿತರರು ಉಪಸ್ಥಿತರಿದ್ದರು.

ಸುಶೀಲಮ್ಮ ನಿಧನ



ಮೈಸೂರಿನ ನಿವೇದಿತಾನಗರ ನಿವಾಸಿ ಸುಶೀಲಮ್ಮ(84) ಅವರು ಶನಿವಾರ ನಿಧನರಾದರು. ಇವರು ಪುತ್ರ ಬಿಜೆಪಿ ಮುಖಂಡ ಲೋಕೇಶ್ ರೆಡ್ಡಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಿಜಯನಗರ ನಾಲ್ಕನೇ ಹಂತದಲ್ಲಿರುವ ಚಿರಶಾಂತಿ ಧಾಮದಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ. ಸುಶೀಲಮ್ಮ ಅವರ ನಿಧನಕ್ಕೆ ಬಿಜೆಪಿ ನಗರ ಅಧ್ಯಕ್ಷ ಮಾಜಿ ಶಾಸಕ ಎಲ್.ನಾಗೇಂದ್ರ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ ರಘು, ಜೆಡಿಎಸ್ ಮುಖಂಡ ಸಿ.ಶೇಖರ್, ರುದ್ರಮೂರ್ತಿ, ರಾಕೇಶ್ ಭಟ್, ಕಾರ್ತಿಕ್ ಮರಿಯಪ್ಪ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಕೊದೆಂಗಡ ಓಡಿಯಂಡ ಸುಮಿತ್ರಾ



ಮೈಸೂರು, ಮಾ.1– ಕೊಡಗಿನ ಮಕ್ಕಂದೂರು ವಾಸಿ ಮೈಸೂರಿನ ಸಾತಗಳ್ಳಿ ಬಳಿಯ ಹಂಚ್ಯಾ ಗ್ರಾಮದಲ್ಲಿ ವಾಸವಾಗಿರುವ ಮೂಲತಃ ಹಂಚ್ಯಾ ನಿವಾಸಿ ತಾಮನೆ ಕೊದೆಂಗಡ ಓಡಿಯಂಡ ಸುಮಿತ್ರಾ (67) ಭಾನುವಾರ ಅನಾರೋಗ್ಯದಿಂದ ನಿಧನರಾದರು. ಅವರು ಪತಿ ಓ.ಇ.ತಮ್ಮಯ್ಯ, ಪುತ್ರರಾದ ಮಾಚಯ್ಯ ಮತ್ತು ಲಿಥಿನ್, ಸೊಸೆಯಂದಿರಾದ ಶೃಂದಾ ಹಾಗೂ ತೃಪ್ತಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸೋಮವಾರ (ಮಾ.2) ಮಧ್ಯಾಹ್ನ 1 ಗಂಟೆಗೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.3.2026 ಸೋಮವಾರ, ಮಳೆ ನಕ್ಷತ್ರ: ಶತಭಿಷ 19.02.2026ರಿಂದ 03.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನಲ್ಲಿ ಸೋಂಕು ಶಿಬಿರ, ಕಣ್ಣಿನಲ್ಲಿ ಮಾಂಸ ಬೆಳವಣಿಗೆ, ಮತ್ತು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ನೀರು ಸೋರುವುದು, ಕಣ್ಣು ತುರಿಸುವುದು, ಶುಷ್ಕನೇತ್ರ, ಮಕ್ಕಳಲ್ಲಿ ಕಂಡುಬರುವ ಕಲಿಕೆಯಲ್ಲಿನ ಸಮಸ್ಯೆಗಳು ಹಾಗೂ ಏಕಾಗ್ರತೆಯ ಕೊರತೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ
- **ಸಂತ ಫಿಲೋಮಿನಾ ಕಾಲೇಜು (ಸ್ವಾಯತ್ತ), ಕನ್ನಡ ವಿಭಾಗ ಮತ್ತು ನವ ಕರ್ನಾಟಕ ಪ್ರಕಾಶನ ಮೈಸೂರು:** ಬೃಹತ್ ಪುಸ್ತಕ ಪ್ರದರ್ಶನ, ಉದ್ಘಾಟನೆ: ಸಂತ ಫಿಲೋಮಿನಾ ವಿದ್ಯಾಸಂಸ್ಥೆಯ ಉಪನ್ಯಾಸಕ ರೆ.ಫಾ.ಡಾ. ಲೂರ್ದ್ ಪ್ರಸಾದ್ ಜೋಸೆಫ್, ಉಪಸ್ಥಿತಿ: ಕ್ಯಾಂಪಸ್ ಆಡಳಿತಾಧಿಕಾರಿ ರೆ.ಫಾ.ಜ್ಞಾನ ಪ್ರಗಾಸಂ, ಪ್ರಾಂಶುಪಾಲರಾದ ಡಾ.ರವಿ.ಜೆ.ಡಿ.ಸಲ್ಡಾನ್ಹಾ, ನವ ಕರ್ನಾಟಕ ಪ್ರಕಾಶನ, ಮೈಸೂರು ಶಾಖೆ ವ್ಯವಸ್ಥಾಪಕ ಸತ್ಯನಾರಾಯಣ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10 ಗಂಟೆಗೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಖೇಡಾ ವೇದವ್ಯಾಸಚಾರ್ ಅವರಿಂದ ರುಕ್ಮೇಶ ವಿಜಯ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀ ಪುರಂ, ಸಂಜೆ 5 ರಿಂದ.
- **ಪರಂಪರೆ ಸಂಸ್ಥೆ, ಸುಧರ್ಮಾ ಸಂಸ್ಕೃತ ದಿನ ದಿನ ಪತ್ರಿಕೆ:** ಉಪನ್ಯಾಸ ಸರಣಿ, ವಿದ್ವಾನ್ ಡಾ.ಹೆಚ್.ವಿ.ನಾಗಾರಾಜರಾವ್ ಅವರಿಂದ ಶ್ರೀ ವೇದಾಂತ ದೇಶಿಕರಿಂದ ವಿರಚಿತ ಶ್ರೀ ಪಾದುಕಾಸಹಸ್ರಂ ಉಪನ್ಯಾಸ. ಸ್ಥಳ: ಶ್ರೀನಿವಾಸ ಪದ್ಮಜಾರಾವ್ ಸಭಾಂಗಣ, ಬಿಎಸ್‌ಎಸ್ ವಿದ್ಯೋದಯ ಸಂಸ್ಥೆ, ರಾಘವೇಂದ್ರ ಸ್ವಾಮಿ ಮಠದ ಪಕ್ಕ, ಕೃಷ್ಣಮೂರ್ತಿಪುರಂ, ಸಂಜೆ 6 ಗಂಟೆಗೆ.
- **ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಶ್ರೀ ಮದ್ದಿವ್ಯರ ಧ್ವಜಾರೋಹಣ ಮಹೋತ್ಸವ, ರಾತ್ರಿ ಗಿರಿಜಾ ಕಲ್ಯಾಣ, ಗಜಾರೋಹಣ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೆಪೇಟೆ.
- **ಹಿರಿಯ ನಾಗರೀಕರ ವೇದಿಕೆ:** ಮಾಸಿಕ ಉಪನ್ಯಾಸ, ದಂತ ವೈದ್ಯರಾದ ಡಾ.ಲೋಕೇಶ್ ಅವರಿಂದ ಹಿರಿಯ ನಾಗರೀಕರ ಹಲ್ಲುಗಳ ಸಮಸ್ಯೆ ಹಾಗೂ ಆರೋಗ್ಯಯುತ ದಂತ ಸುಧಾರಣೆ ಬಗ್ಗೆ ಉಪನ್ಯಾಸ, ಸ್ಥಳ: ಸರಸ್ವತಿ ಸಮುದಾಯ ಭವನ, ಹಿರಿಯ ನಾಗರೀಕರ ಮಂಡಳಿ ಜಯಲಕ್ಷ್ಮಿಪುರಂ, ಸಂಜೆ 5 ಗಂಟೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಪದ್ಮಿನಿ ನಾಗರಾಜ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಕೆ.ಪಿ.ರೇವತಿ. ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು: ಶಂಕರ್ ಶಾನ್ ಭೋಗ್, 7.45 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಕ್ಯಾನ್ಸರ್ ಕುರಿತ ಮಿಥ್ಯೆಗಳು. ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್ 9.10 ನೆನಪಿನಂಗಳ (ಧ್ವನಿ ಭಂಡಾರದಿಂದ) ಮೈಸೂರು ಆಕಾಶವಾಣಿಯ ಸುವರ್ಣ ಮಹೋತ್ಸವ ಸಮಾರಂಭದ ಧ್ವನಿ ಮುದ್ರಣದಿಂದ ಆಯ್ದ ಅವತರಣಿಕೆಯ ಎರಡನೇ ಭಾಗ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ –ಎನ್.ಕಾರ್ತಿಕ್–ವಯೋಲಿನ್, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಗೇಮ್ ಷೋ–ಪ್ರಸ್ತುತಿ: ಬಿ.ದಿಗ್ವಿಜಯ್, **ಮಧ್ಯಾಹ್ನ** 12.05 ವನಿತಾ ವಿಹಾರ: ಇಂದಿರಾ ಪ್ರಸಾದ ಅವರಿಂದ ನನ್ನ ಡಯಟಿಂಗ್ ಲಘು ಭಾಷಣ ನಂತರ 'ಸ್ತ್ರೀ ಸಬಲೀಕರಣದ ಬಾಗಿಲನ್ನು ತೆರೆದು" ನೀತಾರಾವ್ ಅವರಿಂದ ಭಾಷಣ. 12.35 ದೇವರನಾಮ–ಮೀರಾ ಮಂಜುನಾಥ್, 12.45 ನಮ್ಮ ಆರೋಗ್ಯ ಬೊಜ್ಜುತನ ಕಾರಣಗಳು ಮತ್ತು ಪರಿಹಾರ ಕುರಿತು ಇಂಡಿಯನ್ ಅಕಾಡೆಮಿ ಆಫ್ ಪಿಡೀಯಾಟ್ರಿಕ್ಸ್‌ನ ಖಜಾಂಚಿ ಹಾಗೂ ಮಕ್ಕಳ ಮತ್ತು ನವಜಾತ ಶಿಶುತಜ್ಞರಾದ ಡಾ.ಮಲ್ಲಿಕಾರ್ಜುನ ಮತ್ತು ಎಂಡೋಕ್ರೈನಾಲಜಿಸ್ಟ್ ಡಾ.ತೃಪ್ತಿ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ STAND UP INDIA ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ಶ್ರೀಕರ್ ಬಿ.ಆರ್., 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಬಾಂಬೆ ಎಸ್.ಜಯಶ್ರೀ–ಹಾಡುಗಾರಿಕೆ, 4.00 ಮಹಿಳಾರಂಗ–ನನ್ನ ಹಕ್ಕು ನನ್ನ ಜವಾಬ್ದಾರಿ ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ–ಮಹಿಳಾ ಮತ್ತು ಮಕ್ಕಳ ಹಕ್ಕುಗಳ ವಕೀಲರಾದ ಅಂಜಲಿ ರಾಮಣ್ಣ. ಪ್ರಸ್ತುತಿ: ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ: ಅನುರಾಧಮೂರ್ತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಹವಾಮಾನ ಮುನ್ಸೂಚನೆ ಮತ್ತು ಕೃಷಿ ಚಟುವಟಿಕೆ ಪೂರ್ವ ಸಿದ್ಧತೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮೈಸೂರು ತಾಲೂಕು, ನಾಗನಹಳ್ಳಿಯ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಸಹಸಂಶೋಧಕ ಡಾ.ಜಿ.ವಿ.ಸುಮಂತ್‌ಕುಮಾರ್, ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಎಚ್.ಪಿ.ರಜತ್, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ: ಮೈಸೂರು ವಿಶ್ವವಿದ್ಯಾನಿಲಯದ 106ನೇ ಘಟಿಕೋತ್ಸವದಲ್ಲಿ ಕನ್ನಡ ಸ್ನಾತಕೋತ್ತರ ಪದವಿ ಜೊತೆಗೆ 13 ಚಿನ್ನದ ಪದಕ ಹಾಗೂ 4 ನಗದು ಬಹುಮಾನ ಪಡೆದಿರುವ ಕೊಪ್ಪಳ ಜಿಲ್ಲೆಯ ಚಂದ್ರಶೇಖರ್ ಹಾಗೂ ರಸಾಯನಶಾಸ್ತ್ರ ಸ್ನಾತಕೋತ್ತರ ಪದವಿಯಲ್ಲಿ 24 ಚಿನ್ನದ ಪದಕ ಹಾಗೂ 8 ನಗದು ಬಹುಮಾನ ಪಡೆದ ಎನ್.ಅದಿತಿ ಅವರೊಂದಿಗೆ ಸಂದರ್ಶನ. ಪ್ರಸ್ತುತಿ–ದಿಗ್ವಿಜಯ್.ಬಿ, 9.30 ಸವಿನೆನಪು, 10.00 ಆಕಾಶವಾಣಿ ಸಂಗೀತ ಸಮ್ಮೇಳನ–ಪ್ರಾದೇಶಿಕ ಜನಪದ ಹಾಗೂ ಲಘು ಸಂಗೀತ ವಿಜಯ್‌ಕುಮಾರ್ ಗಾಯಕ್ ವಾಡ್ ಮತ್ತು ಸಂಗಡಿಗರಿಂದ ಜನಪದ ಸಂಗೀತ.

ಆಧುನಿಕ ತಂತ್ರಜ್ಞಾನದ ಜಿಐಎಸ್ ಪರಿಚಯಿಸುತ್ತಿರುವ ರಾಜ್ಯ ಸರ್ಕಾರ

ಆಸ್ತಿ ನೋಂದಣಿಯಲ್ಲಿ ಇನ್ನು ಮುಂದೆ ಅಕ್ರಮದ ಆಟ ನಡೆಯಲ್ಲ; ಮುದ್ರಾಂಕ ಶುಲ್ಕ ವಂಚನೆಯಂತೂ ಸಾಧ್ಯವೇ ಇಲ್ಲ



• ಕಾವೇರಿ 2.0 ಜೊತೆಗೆ ಜಿಐಎಸ್ ಸಾಫ್ಟ್‌ವೇರ್ ಅಳವಡಿಕೆ • ಇ-ಖಾತಾಗೆ ಜಿಐಎಸ್ ಲಿಂಕ್ • ಆಸ್ತಿ ನೋಂದಣಿ ವೇಳೆ ಆಸ್ತಿಯ ಫೋಟೋ ಸಹಿತ ನಿಖರ ಮಾಹಿತಿ ಲಭ್ಯ • ಆಸ್ತಿ ಪತ್ರದಲ್ಲಿ ಈಗಾಗಲೇ ಇರುವ ತಪ್ಪು ತಿದ್ದಿಕೊಳ್ಳಲು ಅವಕಾಶ

ಮೈಸೂರು, ಮಾ.1(ಬಿಎಲ್‌ಯು)– ಆಸ್ತಿ ನೋಂದಣಿ ಮಾಡುವಾಗ ನೋಂದಣಿ ಪತ್ರದಲ್ಲಿ ತಪ್ಪು ಮಾಹಿತಿಗಳನ್ನು ನೀಡಿ ಸುಳ್ಳು ದಾಖಲಾತಿ ಸೃಷ್ಟಿಸಿ ಅಕ್ರಮಗಳನ್ನು ಎಸಗಲಾಗುತ್ತಿತ್ತು. ಅಲ್ಲದೆ ನೈಜ ಮುದ್ರಾಂಕ ಶುಲ್ಕ ಪಾವತಿ ಮಾಡದೆ ಸರ್ಕಾರಕ್ಕೆ ವಂಚನೆ ಕೂಡ ಮಾಡಲಾಗುತ್ತಿತ್ತು. ಆದರೆ ಇನ್ನು ಮುಂದೆ ಇಂತಹ ವಂಚನೆ ಆಟ ನಡೆಯುವುದಿಲ್ಲ. ಇದಕ್ಕೆಲ್ಲಾ ಇತಿಶ್ರೀ ಹಾಡಲೆಂದೇ ಕರ್ನಾಟಕ ಸರ್ಕಾರ ಆಧುನಿಕ ತಂತ್ರಜ್ಞಾನದ ಜಿಐಎಸ್ (Geographic information System– ಭೌಗೋಳಿಕ ಮಾಹಿತಿ ವ್ಯವಸ್ಥೆ) ಪರಿಚಯಿಸುತ್ತಿದೆ.

ಕಾವೇರಿ–2.0 ಸಾಫ್ಟ್‌ವೇರ್ ಜೊತೆಗೆ ಆಸ್ತಿ ನೋಂದಣಿ ಪ್ರಕ್ರಿಯೆಯಲ್ಲಿ ಮತ್ತಷ್ಟು ನಿಖರ ಹಾಗೂ ಪಾರದರ್ಶಕತೆ ತರಲು ರಾಜ್ಯ ಸರ್ಕಾರ ಜಿಐಎಸ್ ತಂತ್ರಜ್ಞಾನ ಅಳವಡಿಸುತ್ತಿದೆ. ಇದು ದಸ್ತಾವೇಜು ಆಸ್ತಿ ನೋಂದಣಿ ಮಾಡುವಾಗ ಆ ಆಸ್ತಿಯ ನಿಖರ ಅಳತೆ, ಭೌಗೋಳಿಕ ನಕ್ಷೆ, ರಸ್ತೆ ಸಂಪರ್ಕ ಸೇರಿದಂತೆ ಇತರೆ ಮಾಹಿತಿ ಗುರುತಿಸಲು ಸಹಾಯವಾಗುತ್ತದೆ. ಇದರಿಂದ ಸುಳ್ಳು ಮಾಹಿತಿ ನೀಡಿ, ಮುದ್ರಾಂಕ ಶುಲ್ಕ ವಂಚಿಸಿ ನೋಂದಣಿ ಮಾಡಿಸುವ ಯಾವುದೇ ಅಕ್ರಮ ಇನ್ನು ನಡೆಯುವುದಿಲ್ಲ.

ಆಸ್ತಿ ನೋಂದಣಿ ಮಾಡವಾಗ ಕೆಲವರು ತಪ್ಪು ಮಾಹಿತಿ ನೀಡುತ್ತಿದ್ದರು. ಸಬ್ ರಿಜಿಸ್ಟರ್ ಆಫೀಸ್‌ನಲ್ಲಿ ಇದೇ ಮಾಹಿತಿ ಮೇರೆಗೆ ಆಸ್ತಿ ನೋಂದಣಿ ಮಾಡಲಾಗುತ್ತಿತ್ತು. ಉದಾಹರಣೆಗೆ ಎರಡು, ಮೂರು ಅಂತಸ್ತಿನ ಮನೆ ಇದ್ದರೆ ಒಂದು ಅಂತಸ್ತಿನ ಮನೆ ಇದೆ ಎಂದು ನೋಂದಣಿ ಮಾಡಿಸುತ್ತಿದ್ದರು, ಜಮೀನಿನಲ್ಲಿ ತೆಂಗು ಸೇರಿದಂತೆ ಇತರೆ ಬೆಳೆ ಇದ್ದರೆ ಖಾಲಿ ಭೂಮಿ ಎಂದು ನಮೂದಿಸಿ ನೋಂದಣಿ ಮಾಡಿಸುತ್ತಿದ್ದರು. ಹೀಗೆ ತಪ್ಪು ಮಾಹಿತಿ ನೀಡಿದರೂ ಅಂತಹ ಆಸ್ತಿಯನ್ನು ಸಬ್ ರಿಜಿಸ್ಟರ್ ಆಫೀಸ್‌ನಲ್ಲಿ ನೋಂದಣಿ ಮಾಡುತ್ತಿದ್ದರು.

ಆದರೆ, ಇನ್ನು ಮುಂದೆ ಇಂತಹ ಯಾವುದೇ ಅಕ್ರಮಕ್ಕೆ ಅವಕಾಶ ಇರುವುದಿಲ್ಲ. ಆಸ್ತಿ ನೋಂದಣಿ ಮಾಡುವಾಗ ಆ ಆಸ್ತಿಯ ಸಂಖ್ಯೆ ಅಥವಾ ಪಿಐಡಿ (Property Identification Number) ಸೇರಿದಂತೆ ಇತರೆ ಮಾಹಿತಿಯನ್ನು ಜಿಪಿಎಸ್ ಮೂಲಕ ಕಂಪ್ಯೂಟರ್‌ನಲ್ಲಿ ದಾಖಲಿಸಿದಾಗ ಆ ಆಸ್ತಿಯ ನಕ್ಷೆ ಮೇಲೆ ನಿಖರತೆ ಪಾರದರ್ಶಕವಾಗಿ ತಿಳಿಯುತ್ತದೆ. ನೋಂದಣಿಯಾಗುವ ಆಸ್ತಿಯ ಫೋಟೋ ಸಹಿತ ನಿಖರ ಮಾಹಿತಿ ದೊರೆಯುತ್ತದೆ. ಅಲ್ಲದೆ ಆ ಆಸ್ತಿಯ ಅಳತೆ, ಭೌಗೋಳಿಕ ಸ್ಥಳ, ರಸ್ತೆ ಸಂಪರ್ಕ ಸೇರಿದಂತೆ ಹಲವು ಮಾಹಿತಿಗಳು ಆಸ್ತಿ ಚಕ್ಕು ಬಂಧಿ ಸಹಿತ ವಿವರಗಳು ಕಂಪ್ಯೂಟರ್ ಪರದೆಯಲ್ಲಿ ತೆರೆದುಕೊಳ್ಳುತ್ತವೆ. ಆಸ್ತಿ ನೋಂದಣಿಗೆ ಇ–ಸ್ವತ್ತು ಅಥವಾ ಇ–ಖಾತಾವನ್ನು ಜಿಐಎಸ್‌ನೊಂದಿಗೆ ಲಿಂಕ್ ಮಾಡಲಾಗುತ್ತದೆ. ಅಕ್ರಮಗಳನ್ನು ತಡೆಯುವ ನಿಟ್ಟಿನಲ್ಲಿ ಈಗಿರುವ ಕಾವೇರಿ–2.0 ಸಾಫ್ಟ್‌ವೇರ್‌ನಲ್ಲಿ ಜಿಐಎಸ್ ತಂತ್ರಜ್ಞಾನ ಕೂಡ ಅಡಕವಾಗುವ ಹಿನ್ನೆಲೆಯಲ್ಲಿ ಇನ್ನು ಮುಂದೆ ತಪ್ಪು ಮಾಹಿತಿ ನೀಡಿ ದಸ್ತಾವೇಜು ಆಸ್ತಿ ನೋಂದಣಿ ಮಾಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಜಿಐಎಸ್ ತಂತ್ರಜ್ಞಾನ ವ್ಯವಸ್ಥೆಯ ಲೋಪದೋಷಗಳನ್ನು ಬಹುತೇಕ ಸರಿಪಡಿಸಲಾಗಿದೆ. ಈ ಮೂಲಕ ಇನ್ನು ಕೆಲವೇ ದಿನಗಳಲ್ಲಿ ರಾಜ್ಯ ಸರ್ಕಾರ ಜಿಐಎಸ್ ಅನ್ನು ಅಧಿಕೃತವಾಗಿ ಪರಿಚಯಿಸುತ್ತಿದೆ.

ಆಸ್ತಿಗಳ ಜಿಐಎಸ್ ಫಾರ್ಮೂಲಾ ಅಳವಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದೇವೆ

ಆಸ್ತಿಗಳಿಗೆ ಜಿಐಎಸ್ ಫಾರ್ಮೂಲಾ ಅಳವಡಿಸಿ ಈಗಾಗಲೇ ಸರ್ಕಾರಕ್ಕೆ ನೀಡಿದ್ದೇವೆ. ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯವರು ಇದನ್ನು ಪರಿಶೀಲನೆ ನಡೆಸುತ್ತಿದ್ದಾರೆ. ದಿಢೀರ್ ಆಗಿ ನೂತನ ತಂತ್ರಜ್ಞಾನ ವ್ಯವಸ್ಥೆ ಪರಿಚಯಿಸಲು ಸಾಧ್ಯವಿಲ್ಲ. ಆಂತರಿಕವಾಗಿ ನಾವು ಫಾರ್ಮೂಲಾ ಅಳವಡಿಸಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದೇವೆ. ಅದರಲ್ಲಾಗುವ ಲೋಪ ದೋಷಗಳನ್ನು ಸರಿಪಡಿಸಿಕೊಳ್ಳುವಂತೆ ಅಲ್ಲಿಂದ ನಮಗೆ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ದೊರೆಯುತ್ತಿದೆ. ತರುವಾಯ ಲೋಪ ದೋಷಗಳನ್ನು ಸರಿಪಡಿಸಿ ಮತ್ತೆ ಸರ್ಕಾರಕ್ಕೆ ಸಲ್ಲಿಸುತ್ತಿದ್ದೇವೆ. ಮತ್ತೆ ಅಲ್ಲಿಂದ ಮತ್ತಷ್ಟು ಲೋಪ ದೋಷ ಗುರುತಿಸಿ ಕಳುಹಿಸುತ್ತಿದ್ದಾರೆ. ಹೀಗೆ ಹಲವು ದಿನಗಳಿಂದ ಅಪ್‌ಡೇಟ್ ಪ್ರಕ್ರಿಯೆ ನಡೆಯುತ್ತಲೇ ಇದೆ. ಎಲ್ಲಾ ರೀತಿಯ ಲೋಪ–ದೋಷ ಸರಿಪಡಿಸಿ, ಪಕ್ಕಾ ಆಗಿರುವುದನ್ನು ಖಚಿತಪಡಿಸಿಕೊಂಡ ನಂತರ ಸರ್ಕಾರ ಅಧಿಕೃತವಾಗಿ ಇದನ್ನು ಪರಿಚಯಿಸುತ್ತದೆ. ಇದರ ಆಧಾರದ ಮೇಲೆ ಇನ್ನು ಮುಂದೆ ಜಿಐಎಸ್ ಆಧಾರಿತ ಆಸ್ತಿ ನೋಂದಣಿ ಆರಂಭವಾಗುತ್ತದೆ.

ಆಧುನಿಕ ನೂತನ ತಂತ್ರಜ್ಞಾನ ವ್ಯವಸ್ಥೆಯಿಂದ ಇನ್ನು ಮುಂದೆ ತಪ್ಪು ಮಾಹಿತಿ ನೀಡುವುದು, ಮುದ್ರಾಂಕ ಶುಲ್ಕದಲ್ಲಿ ವಂಚನೆ ಮಾಡುವುದು ಸೇರಿದಂತೆ ಇತರೆ ಅಕ್ರಮ ಎಸಗಲು ಸಾಧ್ಯವಿಲ್ಲ. ಇದರಿಂದ ಇನ್ನು ಮುಂದಿನ ದಸ್ತಾವೇಜು ಆಸ್ತಿ ದಾಖಲಾತಿಗಳಲ್ಲಿ ನಿಖರತೆ ಹಾಗೂ ಪಾರದರ್ಶಕತೆ ಇರುತ್ತದೆ. **– ವಿಜಯಲಕ್ಷ್ಮಿ, ಡಿಜಿಸ್ಟಿಕ್ ರಿಜಿಸ್ಟಾರ್, ಮೈಸೂರು ಜಿಲ್ಲೆ**

ಇನ್ನು ಮುಂದೆ ಅತಿಕ್ರಮಣ, ಗಡಿ ವಿವಾದ ಸಾಧ್ಯವಿಲ್ಲ

ಸಾಮಾನ್ಯವಾಗಿ ಆಸ್ತಿಗಳಲ್ಲಿ ತಲೆದೋರುವ ಸಮಸ್ಯೆ ಎಂದರೆ ಅದು ಅವುಗಳ ಅತಿಕ್ರಮಣ ಹಾಗೂ ಗಡಿ ವಿವಾದ. ಈ ಸಮಸ್ಯೆ ಜಟಿಲವಾಗಿ ಜಟಾಪಟಿ ಸಾಮಾನ್ಯವಾಗಿದೆ. ತರುವಾಯ ಈ ವಿವಾದ ಅತಿರೇಕಕ್ಕೆ ಹೋಗಿ ಕೋರ್ಟ್ ಮೆಟ್ಟಿಲು ಹತ್ತಿ ಪ್ರಕರಣದ ಬಗ್ಗೆ ಹತ್ತಾರು ವರ್ಷಗಳ ಕಾಲ ವಿಚಾರಣೆ ನಡೆಯುತ್ತದೆ. ಆದರೆ ಜಿಐಎಸ್‌ನಲ್ಲಿ ಇನ್ನು ಮುಂದೆ ಇಂತಹ ಸಮಸ್ಯೆಗಳು ಎದುರಾಗುವುದಿಲ್ಲ. ಆಸ್ತಿಗಳ ಭೌಗೋಳಿಕ ಸ್ಥಳ, ರಸ್ತೆ ಸಂಪರ್ಕ ಸೇರಿದಂತೆ ಇತರೆ ಮಾಹಿತಿ ನಿಖರವಾಗಿ ದೊರೆಯುವ ಕಾರಣ ಆಸ್ತಿ ನೋಂದಣಿ ಪತ್ರದಲ್ಲಿ ತಪ್ಪು ಮಾಹಿತಿ ನೀಡಲು ಸಾಧ್ಯವೇ ಆಗುವುದಿಲ್ಲ. ಒಂದು ವೇಳೆ ತಪ್ಪು ಮಾಹಿತಿ ನೀಡಿದರೆ ಜಿಐಎಸ್‌ನಲ್ಲಿ ಆ ಆಸ್ತಿಯ ವಿವರ ಒಂದಕ್ಕೊಂದು ತಾಳೆ ಆಗುವುದಿಲ್ಲ. ಇಂತಹ ವಿಶಿಷ್ಟವಾದ ಸಾಫ್ಟ್‌ವೇರ್ ಅನ್ನು ರಾಜ್ಯ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ ಅಳವಡಿಸುತ್ತಿದೆ.

ಆಸ್ತಿ ನೋಂದಣಿ ರಿಜಿಸ್ಟ್ರೇಷನ್ ಫೀ ವಂಚನೆ ಅಸಾಧ್ಯ

ತಪ್ಪು ಮಾಹಿತಿ ನೀಡಿ ದಸ್ತಾವೇಜು ಆಸ್ತಿಯ ನೋಂದಣಿಯಲ್ಲಿ ಮುದ್ರಾಂಕ ಶುಲ್ಕ ಪಾವತಿಯಲ್ಲಿ ಸರ್ಕಾರಕ್ಕೆ ವಂಚನೆ ಮಾಡಲು ಕೆಲವರು ಪ್ಲಾನ್ ಮಾಡಿರುತ್ತಾರೆ. ಆದರೆ ಜಿಐಎಸ್‌ನಲ್ಲಿ ಇನ್ನು ಮುಂದೆ ಇಂತಹ ಯಾವುದೇ ಆಟ ನಡೆಯುವುದಿಲ್ಲ. ನೋಂದಣಿ ಮಾಡಿಸಲು ತರುವ ಆಸ್ತಿಯ ಮಾಹಿತಿ ದಾಖಲಿಸಿದಾಗ ಮುದ್ರಾಂಕ ಶುಲ್ಕ ಆಟೋಮ್ಯಾಟಿಕ್ ಆಗಿ ಅದೇ ಲೆಕ್ಕ ಹಾಕಿ ನಿಖರವಾದ ವಿವರ ನೀಡುತ್ತದೆ. ನೋಂದಣಿ ವೇಳೆ ಜಮೀನಿನ ಸರ್ವೆ ನಂಬರ್ ಅಥವಾ ಪಿಐಡಿ ನಂಬರ್ ದಾಖಲಿಸಿದಾಗ ಸ್ವಯಂ ಚಾಲಿತವಾಗಿ ಲೆಕ್ಕ ಹಾಕಿ ತೋರುವ ಮುಂದ್ರಾಂಕ ಶುಲ್ಕವನ್ನು ಪಾವತಿ ಮಾಡಬೇಕು. ತರುವಾಯ ಇತರೆ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿದಾಗ ಮಾತ್ರ ನೋಂದಣಿ ಆಗುತ್ತದೆ. ಇದರಿಂದ ತಪ್ಪು ಮಾಹಿತಿ ನೀಡಿ ಮುದ್ರಾಂಕ ಶುಲ್ಕದಲ್ಲಿ ಸರ್ಕಾರಕ್ಕೆ ವಂಚನೆ ಮಾಡುವ ಆಟ ಇನ್ನು ಮುಂದೆ ನಡೆಯಲ್ಲ. ಅಲ್ಲದೆ ನೂತನ ತಂತ್ರಜ್ಞಾನದಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುವುದು ತಪ್ಪುತ್ತದೆ. ಒಂದು ವೇಳೆ ಆಸ್ತಿ ದಾಖಲಾತಿಯಲ್ಲಿ ಅಧಿಕಾರಿಗಳ ಕಣ್ತಪ್ಪಿನಿಂದ ಏನಾದರೂ ತಪ್ಪಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳಲು ಕೂಡ ಅವಕಾಶ ಇರುತ್ತದೆ. ಒಟ್ಟಾರೆ ಜಿಐಎಸ್ ಬಹುಪಯೋಗಿಯಾಗಿದ್ದು, ಇದೆಲ್ಲಾ ಆಧುನಿಕ ಮಾಹಿತಿ ತಂತ್ರಜ್ಞಾನದ ಕೊಡುಗೆಯಾಗಿದೆ.

ಸಹಾಯ ಹಸ್ತ



ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ಜಯಪುರ ಗ್ರಾಮದ ಟೈಲರ್ ರವಿ ಅವರ ಚಿಕಿತ್ಸೆಗಾಗಿ ಶಾಸಕ ಜಿ.ಟಿ.ದೇವೇಗೌಡರು ವೈಯಕ್ತಿಕವಾಗಿ ಒಂದು ಲಕ್ಷ ರೂಗಳನ್ನು ಸಹಾಯ ಧನ ನೀಡಿದರು. ಟೈಲರ್ ರವಿ ಅವರಿಗೆ ಪತ್ನಿ ವೇದಾವತಿ ಅವರು ಒಂದು ಕಿಡ್ನಿ ನೀಡಿದ್ದು, ವಿಷಯ ತಿಳಿದ ಶಾಸಕ ಜಿ.ಟಿ.ದೇವೇಗೌಡರು ಹೆಚ್ಚಿನ ಚಿಕಿತ್ಸಾ ವೆಚ್ಚಕ್ಕೆ ವೈಯಕ್ತಿಕವಾಗಿ ಒಂದು ಲಕ್ಷ ರೂ. ಸಹಾಯ ಧನ ನೀಡಿದ್ದಾರೆ. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್, ಮುಖಂಡರಾದ ಜವರನಾಯಕ ಮತ್ತು ರಂಗಸ್ವಾಮಿ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಆಡಳಿತ ಪಕ್ಷ ಹಾಳಾಗುವುದನ್ನು ವಿಪಕ್ಷ ಕಾಯುತ್ತಿದೆ

ಬಿಜೆಪಿ ವಿರುದ್ಧ ಮಾಜಿ ಉಪಮುಖ್ಯಮಂತ್ರಿ ಈಶ್ವರಪ್ಪ ವಾಗ್ದಾಳಿ

ಹುಬ್ಬಳ್ಳಿ: ರಾಜ್ಯದಲ್ಲಿ ವಿರೋಧ ಪಕ್ಷ ಸತ್ತು ಹೋಗಿದ್ದು, ತಾನು ಅಧಿಕಾರಕ್ಕೆ ಬರಲು ಆಡಳಿತ ಪಕ್ಷ ಹಾಳಾಗುವುದನ್ನು ಕಾಯುತ್ತಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಬಿಜೆಪಿ ವಿರುದ್ಧವೇ ಕಿಡಿಕಾರಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿಗೆ ಎಂದಿಗೂ ಬಹುಮತ ಬಂದಿಲ್ಲ. ಈ ಹಿಂದೆ ದಾರಿ ತಪ್ಪಿ ನಾವು ಅಧಿಕಾರಕ್ಕೆ ಬಂದಿದ್ದು. ಪಕ್ಷದಲ್ಲಿ ಒಂದಷ್ಟು ಶುದ್ಧೀಕರಣ ವಾಗಬೇಕಿದೆ. ಲಕ್ಷಾಂತರ ಮಂದಿ ಕಾರ್ಯಕರ್ತರು ನೋವು ಅನುಭವಿಸುತ್ತಲೇ ಪಕ್ಷದಲ್ಲಿದ್ದಾರೆ. ನಿರೀಕ್ಷೆಯಂತೆ ಮುಂದಿನ ದಿನಗಳಲ್ಲಿ ಎಲ್ಲವೂ ನಡೆಯುವ ಭರವಸೆಯೊಂದಿಗೆ ಕಾಯುತ್ತಿದ್ದು, ನಂತರ ಒಂದಷ್ಟು ಷರತ್ತುಗಳನ್ನು ಮುಂದಿಟ್ಟು ಪಕ್ಷದ ಕಾರ್ಯದಲ್ಲಿ ಸಕ್ರಿಯನಾಗುತ್ತೇನೆ ಎಂದು ಹೇಳಿದರು.



ಪುತ್ರನಿಗೆ ಟಿಕೆಟ್ ತಪ್ಪಿಸಿದರು ಎನ್ನುವ ಒಂದೇ ಕಾರಣಕ್ಕಾಗಿ ನಾನು ಬಿಜೆಪಿಯಿಂದ ದೂರ ಉಳಿದಿಲ್ಲ. ಕೆಲವಷ್ಟು ಕಾರಣಗಳೂ ಇವೆ. ಮೊದಲು ಪಕ್ಷ ಶುದ್ಧೀಕರಣವಾಗಬೇಕು ಎನ್ನುವುದು ನನ್ನ ಹೆಬ್ಬಯಕೆ. ಅದು, ಏನು ಎನ್ನುವುದು ವರಿಷ್ಠರಿಗೆ ತಿಳಿದಿದೆ. ರಾಜಕೀಯ ವೈರಾಗ್ಯ ಎನ್ನುವುದು ನನ್ನಲ್ಲಿ ಇಲ್ಲ. ಹೋರಾಡುತ್ತಲೇ ಬದುಕು ಕಟ್ಟಿಕೊಂಡವನು ನಾನು. ಸದ್ಯ ರಾಯಣ್ಣ ಬ್ರಿಗೇಡ್ ಕಾರ್ಯಕ್ರಮವೇನೂ ಮಾಡುತ್ತಿಲ್ಲ. ಹಿಂದುತ್ವ ಮತ್ತು ಧರ್ಮದ ಕಾರ್ಯಕ್ಕೆ ರಾಜ್ಯ ಪ್ರವಾಸ ಮಾಡುತ್ತಿದ್ದೇನೆ ಎಂದರು.

ಮೇಲ್ಛಾವಣಿ ಗಾರೆ ಕುಸಿದ ಕನಕಗಿರಿ ಶಾಲೆ ಪರಿಶೀಲಿಸಿದ ಶಾಸಕ ಶ್ರೀವತ್ಸ



ಮೈಸೂರಿನ ಕನಕಗಿರಿ ಸರ್ಕಾರಿ ಶಾಲೆಗೆ ಶಾಸಕ ಟಿ.ಎಸ್.ಶ್ರೀವತ್ಸ ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು, ಮಾ.1– ಮೈಸೂರಿನ ಕೆ.ಆರ್.ಕ್ಷೇತ್ರದ ಕನಕಗಿರಿ ಸರ್ಕಾರಿ ಶಾಲೆಯ ದುರಸ್ತಿ ಕಾರ್ಯವನ್ನು ಶೀಘ್ರ ಆರಂಭಿಸಲಾಗುವುದು ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದ್ದಾರೆ.

ಶಾಲೆಯ ಮೇಲ್ಛಾವಣಿ ತಾರ್ಸಿ ಭಾಗದ ಚಿಪ್ಪುಗಳು ಕಳಚಿ ಬಿದ್ದು ಶಿಕ್ಷಕಿ ಗಾಯಗೊಂಡಿರುವ ಹಿನ್ನೆಲೆಯಲ್ಲಿ, ಬಿ.ಇ.ಓ ಕೃಷ್ಣ ಹಾಗೂ ಶಾಲೆಯ ಮುಖ್ಯ ಶಿಕ್ಷಕರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಶಾಸಕರು, ದುರಸ್ತಿ ಕಾಮಗಾರಿಗೆ ಸುಮಾರು 5 ರಿಂದ 7 ಲಕ್ಷದೊಳಗೆ ವೆಚ್ಚವಾಗಲಿದ್ದು, ಶಾಸಕರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಿಂದ ಅನುದಾನ ನೀಡುವ ಕುರಿತು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಪರಿಶೀಲನೆ ವೇಳೆ ಮೇಲ್ಛಾವಣಿಯ ಗಾರೆ ಚೂರು ಬಿದ್ದಿರುವುದು ಗಮನಕ್ಕೆ ಬಂದಿದೆ. ಆದರೆ ಶಾಲೆಯಲ್ಲಿ ಈಗಾಗಲೇ ಸಾಕಷ್ಟು ತರಗತಿ ಕೊಠಡಿಗಳು ಲಭ್ಯವಿರುವುದರಿಂದ, ಹಾನಿಗೊಳಗಾದ ಚಾವಣಿ ಭಾಗವನ್ನು ಸಂಪೂರ್ಣವಾಗಿ ತೆರವುಗೊಳಿಸಿ, ಶೀಟ್ ಅಳವಡಿಸುವ ಮೂಲಕ ಅದನ್ನು ಉತ್ತಮ ರೀತಿಯ ಊಟದ ಹಾಲ್ ಅಥವಾ ಸಭಾಂಗಣವಾಗಿ ಪರಿವರ್ತಿಸಬಹುದೆಂಬ ಅಭಿಪ್ರಾಯ ವ್ಯಕ್ತವಾಗಿದೆ ಎಂದು ತಿಳಿಸಿದ್ದಾರೆ.

ಈ ಸಂಬಂಧ ಮುಂದಿನ ಬುಧವಾರ ಶಾಲಾ ಅಭಿವೃದ್ಧಿ ಮಂಡಳಿ ಸಭೆ ಏರ್ಪಡಿಸಲು ಬಿ.ಇ.ಓ ಅವರಿಗೆ ಸೂಚನೆ ನೀಡಿದ್ದು, ಸಭೆಯಲ್ಲಿ ಡಿಡಿಪಿಐ ಸೇರಿದಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು, ಶಿಕ್ಷಕರು ಹಾಗೂ ಅಭಿವೃದ್ಧಿ ಸಮಿತಿ ಸದಸ್ಯರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದ್ದಾರೆ.

ಪರಿಶೀಲನೆ ವೇಳೆ ಬಿಜೆಪಿ ಮುಖಂಡರಾದ ವಾಣೀಶ್, ಚೇತನ್, ಪ್ರದೀಪ್ ಕುಮಾರ್ ಹಾಗೂ ಸ್ಥಳೀಯ ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರು ಮತ್ತು ಪೋಷಕರು ಉಪಸ್ಥಿತರಿದ್ದರು.

ಜೆಎಸ್‌ಎಸ್ ವಿದ್ಯಾರ್ಥಿನಿ ಮೋನಿಷ ಜಪಾನ್‌ನ ಸಕುರಾ ಸೈನ್ಸ್ ಎಕ್ಸ್‌ಚೇಂಜ್ ಕಾರ್ಯಕ್ರಮಕ್ಕೆ ಆಯ್ಕೆ



ಮೈಸೂರು: ಶೈಕ್ಷಣಿಕ, ಸಂಶೋಧನೆ, ವಿವಿಧ ವಿಷಯ ಜ್ಞಾನ ಹಾಗೂ ಕೌಶಲ್ಯಗಳ ಸಂಬಂಧಿತ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಜಪಾನ್‌ನ ಹೊಕ್ಕೈಡೊ ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆಯನ್ನು ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಮಾಡಿಕೊಂಡಿದೆ.

ಈ ಒಡಂಬಡಿಕೆಯ ಅಡಿಯಲ್ಲಿ 2026 ಮಾರ್ಚ್ 2ರಿಂದ 8ರವರೆವಿಗೆ ಜಪಾನ್‌ನ ಸೈನ್ಸ್ ಅಂಡ್ ಟೆಕ್ನಾಲಜಿ ಏಜೆನ್ಸಿ ಪ್ರಾಯೋಜಿತ ಸಕುರಾ ಸೈನ್ಸ್ ಎಕ್ಸ್‌ಚೇಂಜ್ ಕಾರ್ಯಕ್ರಮದ ವಿವಿಧ ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಆಯ್ಕೆಯಾಗಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸ್ನಾತಕೋತ್ತರ ರಸಾಯನಶಾಸ್ತ್ರ ವಿಷಯ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿನಿ ಕು. ಮೋನಿಷ ಕೆ ಜಪಾನ್ ಪ್ರವಾಸ ಕೈಗೊಳ್ಳುತ್ತಿದ್ದಾರೆ.

'ಸೆಲೆಬ್ರಿಟಿ' ಟೀಸರ್ ಬಿಡುಗಡೆ



ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿಯಲ್ಲಿ ನಡೆದ ಸಮಾರಂಭದಲ್ಲಿ 'ಗೌರಿ ಆರ್ಟ್ಸ್' ನಿರ್ಮಾಣದ 'ಸೆಲೆಬ್ರಿಟಿ' ಚೊಚ್ಚಲ ಚಿತ್ರದ ಟೀಸರ್ ಅನ್ನು ನಟ ಕಿಚ್ಚ ಸುದೀಪ್ ಬಿಡುಗಡೆ ಮಾಡಿದರು. ನಿರ್ಮಾಪಕರಾದ ಮಾಜಿ ಸಚಿವ ಸಾ.ರಾ.ಮಹೇಶ್ ಹಾಗೂ ಶ್ರೀಮತಿ ಸುಷ್ಮಾ ಅಶ್ವಿನ್, ನಿರ್ದೇಶಕ ಕಿರಣ್ ವಿಶ್ವನಾಥ್, ಜೆಡಿಎಸ್ ಪಕ್ಷದ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು, ಚಿತ್ರದ ನಾಯಕ ನಟ ಅಶ್ವಿನ್, ನಟಿ ಪ್ರಿಯಾಂಕ, ಯಾರೇ ನೀನು ಚಲುವೆ ಖ್ಯಾತಿಯ ನಟಿ ಶ್ರೀಮತಿ ಸಂಗೀತಾ ಮತ್ತಿತರ ಕಲಾವಿದರು ಉಪಸ್ಥಿತರಿದ್ದರು.



ದಕ್ಷಿಣ ಆಫ್ರಿಕಾ ವಿರುದ್ಧ ಸೋತ ಜಿಂಬಾಬ್ವೆ

ಡೆಲ್ಲಿ, ಮಾ.1(ವಿವಿಹೆಚ್)– ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಮಿಂಚಿದ ದಕ್ಷಿಣ ಆಫ್ರಿಕಾ ಸೂಪರ್–8ರ ಹಂತದ ಕೊನೆಯ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ 5 ವಿಕೆಟ್‌ಗಳ ಗೆಲುವು ದಾಖಲಿಸಿತು.

ಇಲ್ಲಿನ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಸಿಸಿ ಟಿ20 ವಿಶ್ವಕಪ್ ಟೂರ್ನಿ 2026ರ ಸೂಪರ್–8 ಹಂತದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 153 ರನ್ ಕಲೆಹಾಕಿ ದಕ್ಷಿಣ ಆಫ್ರಿಕಾಗೆ 154 ರನ್‌ಗಳ ಸಾಧಾರಣ ಗುರಿಯನ್ನು ನೀಡಿತ್ತು. ಈ ಗುರಿಯನ್ನು ಯಶಸ್ವಿಯಾಗಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ 17.5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 154 ರನ್ ಕಲೆಹಾಕಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆಗೆ ನಾಯಕ ಸಿಕಂದರ್ ರಾಜಾ ಬೆನ್ನೆಲುಬಾದರು. ಒಂದೆಡೆ ವಿಕೆಟ್ ಬೀಳುತ್ತಿದ್ದರು ಮತ್ತೊಂದೆಡೆ ಭದ್ರವಾಗಿ ನಿಂತು ಬ್ಯಾಟ್ ಬೀಸಿದ ರಾಜಾ 43 ಎಸೆತಗಳಲ್ಲಿ 8 ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಸಹಿತ 73 ರನ್ ಗಳಿಸಿ, ತಂಡದ ಮೊತ್ತ ನೂರೈವತ್ತು ದಾಟಲು ಕಾರಣರಾದರು. ಕ್ಲೈವ್ ಮದಾಂಡೆ ಅಜೇಯ 26 ರನ್ ಗಳಿಸಿದರು.

ಇವರಿಬ್ಬರ ಹೊರತಾಗಿ ಮತ್ಯಾರಿಂದಲೂ 20ರನ್‌ಗಳಿಂತ ಅಧಿಕ ಮೊತ್ತ ಕಲೆಹಾಕಲು ಸಾಧ್ಯವಾಗದೇ ಹೋದದ್ದು, ತಂಡದ ಕುಸಿತಕ್ಕೆ ಕಾರಣವಾಯಿತು. ಉಳಿದಂತೆ ಮರುಮಾನಿ 7ರನ್, ಬ್ರಿಯಾನ್ ಬೆನೆಟ್ 15 ರನ್, ಡಿಯೋನ್ ಮೈರ್ಸ್ 11 ರನ್, ರೈನ್ ಬರ್ಲ್ 5ರನ್, ಟೋನಿ ಮುನ್ಯೊಂಗಾ 2, ಬ್ರಾಡ್ ಇವನ್ 8ರನ್ ಹಾಗೂ ವೆಲ್ಲಿಂಗ್ಟನ್ ಮಸಕಡ್ಜಾ ಅಜೇಯ 1 ರನ್ ಗಳಿಸಿದರು.



ಡೆವಾಲ್ಡ್ ಬ್ರೇವಿಸ್ ಬ್ಯಾಟಿಂಗ್ ವೈಖರಿ.

ದಕ್ಷಿಣ ಆಫ್ರಿಕಾ ಪರ ಮಕಾಪ ಮತ್ತು ಕಾರ್ಬಿನ್ ಬಾಷ್ ತಲಾ 2 ವಿಕೆಟ್, ಜಾರ್ಜ್ ಲಿಂಡೆ, ಎನ್‌ಗಿಡಿ ಮತ್ತು ನೋಕಿಯೋ ತಲಾ ಒಂದೊಂದು ವಿಕೆಟ್ ಪಡೆದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ದಕ್ಷಿಣ ಆಫ್ರಿಕಾ ಪಡೆಗೆ ನಿರೀಕ್ಷಿತ ಆರಂಭ ಕಂಡುಬರಲಿಲ್ಲ. ಕ್ವಿಂಟನ್ ಡಿಕಾಕ್ ಶೂನ್ಯಕ್ಕೆ ಔಟಾದರೆ, ನಾಯಕ ಏಡೆನ್ ಮಾರ್ಕ್ರಂ 4 ರನ್, ರಿಯಾನ್ ರಿಕಲ್ಟನ್ 22 ಎಸೆತಗಳಲ್ಲಿ 31 ರನ್‌ಗಳಿಗೆ ವಿಕೆಟ್ ಒಪ್ಪಿಸಿ ಹೊರನಡೆದರು.

ಬಳಿಕ ಜೊತೆಯಾದ ಡೆವಾಲ್ಡ್ ಬ್ರೇವಿಸ್ ಹಾಗೂ ಡೆವಿಡ್ ಮಿಲ್ಲರ್ ಚೇತರಿಕೆ ಆಟವಾಡಿದರು. ಬ್ರೇವಿಸ್ ಕೇವಲ 18 ಎಸೆತಗಳಲ್ಲಿ 2 ಬೌಂಡರಿ, 4 ಭರ್ಜರಿ ಸಿಕ್ಸರ್ ಸಹಿ 42 ರನ್ ಗಳಿಸಿ ಔಟಾದರೆ, ಮಿಲ್ಲರ್ 16 ಎಸೆತಗಳಲ್ಲಿ 22 ರನ್ ಕಲೆಹಾಕಿದರು.

ಕೊನೆಯಲ್ಲಿ ಒಂದಾದ ಟ್ರಿಸ್ಟನ್ ಸ್ಟಬ್ಸ್ 21(24 ಎ) ಹಾಗೂ ಜಾರ್ಜ್ ಲಿಂಡೆ 30(21 ಎ)ಅಜೇಯರಾಗಿ ಉಳಿದು ಉತ್ತಮ ಜೊತೆಯಾಟ ಆಡುವ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟರು.

ಜಿಂಬಾಬ್ವೆ ಪರ ನಾಯಕ ಸಿಕಂದರ್ ರಾಜಾ ಪ್ರಮುಖ 3 ವಿಕೆಟ್ ಕಬಳಿಸಿದರು. ಮುಜರಬಾನಿ ಮತ್ತು ಎವನ್ಸ್ ತಲಾ ಒಂದೊಂದು ವಿಕೆಟ್ ಕಿತ್ತರು. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಉತ್ತಮ ಪ್ರದರ್ಶನ ತೋರಿದ ಜಿಂಬಾಬ್ವೆ ತಂಡದ ಸಿಕಂದರ್ ರಾಜಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಜಿಂಬಾಬ್ವೆ ವಿರುದ್ಧದ ಗೆಲುವಿನೊಂದಿಗೆ ದಕ್ಷಿಣ ಆಫ್ರಿಕಾ 6 ಅಂಕಗಳನ್ನು ಹೊಂದಿ ಗ್ರೂಪ್ ಒಂದರ ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಖಾಯಂ ಮಾಡಿಕೊಂಡಿದೆ. ಗ್ರೂಪ್ ಒಂದರಲ್ಲಿ ಅಗ್ರಸ್ಥಾನದಲ್ಲಿರುವ ತಂಡ ಗ್ರೂಪ್ ಎರಡರಲ್ಲಿ ಎರಡನೇ ಸ್ಥಾನದಲ್ಲಿರುವ ತಂಡದ ವಿರುದ್ಧ ಮೊದಲ ಸೆಮಿ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಹೀಗಾಗಿ ಕೊಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಬುಧವಾರ (ಮಾ.4) ನಡೆಯಲಿರುವ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ (ಗ್ರೂಪ್ ಒಂದರ ಟಾಪ್ ತಂಡ) ಹಾಗೂ ನ್ಯೂಜಿಲೆಂಡ್ (ಗ್ರೂಪ್ ಎರಡರಲ್ಲಿ ಎರಡನೇ ಸ್ಥಾನದಲ್ಲಿರುವ ತಂಡ) ಮುಖಾಮುಖಿಯಾಗಲಿವೆ. ಸಂಜೆ 7 ಗಂಟೆಗೆ ಈ ಪಂದ್ಯ ಆರಂಭವಾಗಲಿದೆ.

ಸಂಜು ಏಕಾಂಗಿ ಹೋರಾಟ; ಸೆಮಿಸ್‌ಗೆ ಭಾರತ

ಮಾ.5 ರಂದು ಫೈನಲ್ಸ್‌ಗಾಗಿ ಆಂಗ್ಲರೊಂದಿಗೆ ಕಾದಾಟ

ಕೋಲ್ಕತ್ತಾ, ಮಾ.1(ವಿವಿಹೆಚ್)– ಸಂಜು ಸ್ಯಾಮ್ಸನ್ ಅವರ ಏಕಾಂಗಿ ಹೋರಾಟ ಫಲವಾಗಿ ಟೀಂ ಇಂಡಿಯಾ ಬಲಿಷ್ಠ ವೆಸ್ಟ್ ಇಂಡೀಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸುವ ಮೂಲಕ ಸೆಮಿಸ್‌ಗೆ ಲಗ್ಗೆಯಿಟ್ಟಿತು.

ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಭಾನುವಾರ ನಡೆದ ಐಸಿಸಿ ಪುರುಷರ ಟಿ ಟ್ವೆಂಟಿ ವಿಶ್ವಕಪ್ 2026ರ ಸೂಪರ್ 8 ಸುತ್ತಿನ ಕೊನೆಯ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 195 ರನ್ ಕಲೆಹಾಕಿ ಭಾರತಕ್ಕೆ 196 ರನ್‌ಗಳ ಸವಾಲಿನ ಗುರಿ ನೀಡಿತ್ತು.

ಈ ಬೃಹತ್ ಮೊತ್ತವನ್ನು ಬೆನ್ನತ್ತಿದ ಟೀಂ ಇಂಡಿಯಾಗೆ ಆರಂಭಿಕ ಆಘಾತ ಎದುರಾಯಿತು. ಅಭಿಷೇಕ್ ಶರ್ಮಾ 10 ರನ್, ಇಶಾನ್ ಕಿಶನ್ 10 ರನ್ ಗಳಿಸಿ ಬೇಗನೇ ಔಟಾದರು. ಬಳಿಕ ಬಂದ ನಾಯಕ ಸೂರ್ಯಕುಮಾರ್ ಯಾದವ್ 18ರನ್ ಗಳಿಸಿ ಬಂದಷ್ಟು ವೇಗವಾಗಿ ಔಟಾದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಸಮಯೋಚಿತ ಆಟವಾಡುತ್ತಾ ಭದ್ರ ಬುನಾದಿ ಹಾಕಿಕೊಟ್ಟ ಸಂಜು ಸ್ಯಾಮ್ಸನ್ ಟೀಂ ಇಂಡಿಯಾ ಪಾಲಿಗೆ ವರದಾನವಾದರು. ವಿಂಡೀಸ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಅವರು ಕೊನೆಯವರೆಗೂ ನಿಂತು ತಂಡವನ್ನು ಗೆಲ್ಲಿಸಿಕೊಟ್ಟರು.

ಕೊನೆಯ 6 ಎಸೆತಗಳಲ್ಲಿ ತಂಡ ಗೆಲ್ಲಲು 7 ರನ್‌ಗಳ ಅವಶ್ಯಕತೆಯಿದ್ದಾಗ ಬ್ಯಾಟ್ ಬೀಸಿದ ಸಂಜು ಮೊದಲ ಎಸೆತವನ್ನು ಲೆಗ್‌ಸೈಡ್‌ಗೆ ಸಿಕ್ಸ್ ಬಾರಿಸಿದರೆ, ಎರಡನೇ ಎಸೆತವನ್ನು ಸ್ಟ್ರೈಟ್ ಬೌಂಡರಿ ಲೈನ್ ದಾಟಿಸಿ ವಿನ್ನಿಂಗ್ ರನ್ ಬಾರಿಸಿದರು. ಅಂತಿಮವಾಗಿ 50 ಎಸೆತಗಳನ್ನು ಎದುರಿಸಿದ ಸಂಜು 15 ಬೌಂಡರಿ ಹಾಗೂ 4 ಭರ್ಜರಿ ಸಿಕ್ಸರ್ ಸಹಿತ ಅಜೇಯ 97 ರನ್ ಗಳಿಸಿದರು.



ಸಂಜು ಸ್ಯಾಮ್ಸನ್, ತಿಲಕ್ ವರ್ಮಾ ಬ್ಯಾಟಿಂಗ್ ವೈಖರಿ.

ಉಳಿದಂತೆ ತಿಲಕ್ ವರ್ಮಾ 15 ಎಸೆತಗಳಲ್ಲಿ 27 ರನ್, ಹಾರ್ದಿಕ್ ಪಾಂಡ್ಯ 17 ರನ್ ಹಾಗೂ ಶಿವಂ ದುಬೆ ಅಜೇಯ 8 ರನ್ ಗಳಿಸಿದರು. ಅಂತಿಮವಾಗಿ ಟೀಂ ಇಂಡಿಯಾ 19.2 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 199 ರನ್ ಬಾರಿಸಿ ಗೆಲುವಿನ ನಗೆ ಬೀರಿತು.

ವೆಸ್ಟ್ ಇಂಡೀಸ್ ಪರ ಜಾಸನ್ ಹೋಲ್ಡರ್ ಹಾಗೂ ಸಮರ್ ಜೋಸೆಫ್ ತಲಾ 2 ವಿಕೆಟ್, ಅಕಿಲ್ ಹೊಸೇನ್ ಒಂದು ವಿಕಟ್ ಕಿತ್ತರು.

ಇದಕ್ಕೂ ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ ಉತ್ತಮ ಆರಂಭ ಪಡೆಯಿತು. ಶಾಯ್ ಹೋಪ್ ಹಾಗೂ ರಾಸ್ಟನ್ ಚೇಸ್ 68 ರನ್‌ಗಳ ಜತೆಯಾಟವನ್ನಾಡಿದರು. ಹೋಪ್ 32 ರನ್ ಗಳಿಸಿದರೆ, ಚೇಸ್ 40 ರನ್ ಬಾರಿಸಿದರು. ಶಿಮ್ರಾನ್ ಹೆಟ್ಮಾಯೆರ್ 12 ಎಸೆತಗಳಲ್ಲಿ 27 ರನ್ ಶೆರ್ಫೇನ್ ರುದರ್‌ಫೋರ್ಡ್ 14 ರನ್ ಬಾರಿಸಿ ಬೇಗನೆ ವಿಕೆಟ್ ಒಪ್ಪಿಸಿದರು.

ಬಳಿಕ ಜೊತೆಯಾದ ಜೇಸನ್ ಹೋಲ್ಡರ್ ರೊವ್‌ಮನ್ ಪೋವೆಲ್ ಜೋಡಿ 35 ಎಸೆತಗಳಲ್ಲಿ 76 ರನ್‌ಗಳ ಕೊಡುಗೆ ನೀಡಿದರು. ಹೋಲ್ಡರ್ 22 ಎಸೆತಗಳಲ್ಲಿ 2 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ ಅಜೇಯ 37 ರನ್ ಬಾರಿಸಿದರೆ, ಪೋವೆಲ್ 19 ಎಸೆತಗಳಲ್ಲಿ 3 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ ಅಜೇಯ 34 ರನ್ ಕಲೆಹಾಕಿದರು.

ಭಾರತದ ಪರ ಜಸ್‌ಪ್ರೀತ್ ಬುಮ್ರಾ 2 ವಿಕೆಟ್, ಹಾರ್ದಿಕ್ ಪಾಂಡ್ಯ ಹಾಗೂ ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಪಡೆದರು. ತಮ್ಮ ಅಮೋಘ ಬ್ಯಾಟಿಂಗ್ ಪ್ರದರ್ಶನದ ಮೂಲಕ ಟೀಂ ಇಂಡಿಯಾ ಗೆಲುವಿಗೆ ಕಾರಣರಾದ ಸಂಜು ಸ್ಯಾಮ್ಸನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮಾ.5 ರಂದು ಸೆಮಿಸ್

ಇತ್ತ ವೆಸ್ಟ್ ಇಂಡೀಸ್ ಮಣಿಸಿ ಸೆಮಿಸ್‌ಗೆ ಲಗ್ಗೆಯಿಟ್ಟ ಟೀಂ ಇಂಡಿಯಾ 6ನೇ ಬಾರಿಗೆ ಸೆಮಿಸ್‌ಗೆ ಲಗ್ಗೆಯಿಟ್ಟಿದೆ. ಇದರಲ್ಲಿ ಒಂದು ಬಾರಿ ರನ್ನರ್ಸ್ ಆಗಿದ್ದು, 2 ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಇತ್ತ ಎರಡನೇ ಸೆಮಿ ಫೈನಲ್ಸ್ ಮಾ.5 ರಂದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಈ ಪಂದ್ಯದಲ್ಲಿ ಭಾರತ ಬಲಿಷ್ಠ ಇಂಗ್ಲೆಂಡ್ ತಂಡದೊಂದಿಗೆ ಪ್ರಶಸ್ತಿ ಸುತ್ತಿಗಾಗಿ ಕಾದಾಡಲಿದೆ.

ನಕ್ಕರೆ ಅದೇ ಸ್ವರ್ಗ

ಬಾಸ್ : ಗುಂಡ ಕನ್ನಡಿ ತಗೊಂಡು ಬಾರೋ
ನನ್ನ ಮುಖ ನೋಡ್ಕೋಬೇಕು.

ಗುಂಡ ಸ್ವಲ್ಪ ಹೊತ್ತು ಬಿಟ್ಟು ಬಂದು ಹೇಳಿದ:
ಸಾರ್ ಎಲ್ಲೂ ಸಿಕ್ಕುತ್ತಿಲ್ಲ. ಎಲ್ಲ ಕನ್ನಡಿಯಲ್ಲೂ ನನ್ನ ಮುಖನೇ ಕಾಣಿಸ್ತಾ ಇದೆ.

ಮೈಸೂರು ಮಿತ್ರ

ಸೋಮವಾರ, ಮಾರ್ಚ್ 2, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೆಲವರಿಗೆ ದೇವರು ನೋಡುತ್ತಿದ್ದಾನೆ ಎಂಬ ಭಯ, ಇನ್ನು ಕೆಲವರಿಗೆ ದೇವರು ನೋಡುತ್ತಿದ್ದಾನೆ ಎಂಬುದೇ ಅಭಯ!

ವೇದ ಸುಳ್ಳಾದರೂ { ಬೆಲ್ಲವಿಲ್ಲದಿದ್ದರೂ
ಗಾದೆ ಸುಳ್ಳಾಗದು { ಬೆಲ್ಲದಂತ ಮಾತು

ನಿಮ್ಮ ಪತ್ರಗಳು



ಮಕ್ಕಳಿಗೆ ಮೊಬೈಲ್ ಫೋನ್ ಬಳಕೆ ನಿಷೇಧ ಸರಿಯಾದ ಕ್ರಮ

ಮಾನ್ಯರೆ,

ಇಂದಿನ ದಿನಗಳಲ್ಲಿ 16 ವರ್ಷ ಒಳಪಟ್ಟ ಮಕ್ಕಳು ಮೊಬೈಲ್ ಫೋನ್ ಬಳಕೆಯ ಬಗ್ಗೆ ಮತ್ತು ಅದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ರಾಜಕೀಯ ವಲಯದಲ್ಲಿ ವಿವಿಧ ರೀತಿಯ ಚರ್ಚೆಗಳು ನಡೆಯುತ್ತಿವೆ. ಅವುಗಳಲ್ಲಿ ಪ್ರಕಟವಾಗುವ ಅಶ್ಲೀಲ ಚಿತ್ರಗಳು ಮತ್ತು ಸನ್ನಿವೇಶಗಳು ಮಕ್ಕಳು ಅಲ್ಲದೆ ವಯಸ್ಕರರು ತಪ್ಪು ದಾರಿ ಹಿಡಿಯಲು ಅವಕಾಶ ಮಾಡಿ ಕೊಡುವುದರಲ್ಲಿ ಸಂದೇಹವಿಲ್ಲ. ಇಂದಿನ ಮಾಹಿತಿ ತಂತ್ರಜ್ಞಾನದಲ್ಲಿ ಜ್ಞಾನಾರ್ಜನೆ ಆಗುವಂತಹ ವಿಷಯಗಳು ಪ್ರಕಟವಾಗಬೇಕು. Facebook ಮತ್ತು youtube ಮತ್ತು ಇತರೆ ಮಾಧ್ಯಮಗಳನ್ನು ಸೆನ್ಸಾರ್ ಮೂಲಕ ನಿಯಂತ್ರಣದಲ್ಲಿ ಇಡುವುದರ ಬಗ್ಗೆ ಸರಕಾರ ಚಿಂತನೆ ಮಾಡಬೇಕು.

ಅಲ್ಲದೆ ದೂರದರ್ಶನದಲ್ಲಿ ಪ್ರಕಟವಾಗುತ್ತಿರುವ ಧಾರಾವಾಹಿಗಳೂ ವೀಕ್ಷಕರಲ್ಲಿ ದ್ವೇಷ, ಅಸೂಯೆ ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡುವಂತಾಗುವ ಕಥೆಗಳಾಗಿವೆ. ಆದಷ್ಟು ನೀತಿಕತೆಗಳು ಪ್ರಸಾರವಾಗಬೇಕು. ಈ ವಿಷಯದ ಬಗ್ಗೆ ಸಂಬಂಧ ಪಟ್ಟವರು ಗಮನಹರಿಸಬೇಕೆಂಬುದು ನನ್ನ ಅಭಿಪ್ರಾಯ.

–ಎ.ವಿ.ರಾಜಶೇಖರ, ಹೆಬ್ಬಾಳು 2ನೇ ಹಂತ, ಮೈಸೂರು.

ಪಾನ್ ಮಸಾಲಾ ಉದ್ಯಮಕ್ಕೆ ತಾಂತ್ರಿಕ ಪಾರದರ್ಶಕತೆ ಅವಶ್ಯಕತೆ

ಮಾನ್ಯರೆ,

ಪಾನ್ ಮಸಾಲಾ ತಯಾರಿಕಾ ಘಟಕಗಳ ಮೇಲೆ ಕೇಂದ್ರ ವಿಧಿಸಿರುವ ಹೊಸ ತೆರಿಗೆ ಮತ್ತು ಕಣ್ಗಾವಲು ನಿಯಮಗಳು ಸ್ವಾಗತಾರ್ಹ. ಕೇವಲ ಸಿಸಿಟಿವಿ ಅಳವಡಿಕೆ ಮತ್ತು 24 ತಿಂಗಳ ದತ್ತಾಂಶ ಸಂಗ್ರಹಣೆಯಷ್ಟೇ ಅಲ್ಲದೆ, ಈ ವ್ಯವಸ್ಥೆಯನ್ನು ಇನ್ನಷ್ಟು ದಕ್ಷಗೊಳಿಸಲು ಸರ್ಕಾರವು ಪ್ರತಿ ಪ್ಯಾಕೆಟ್ ಮೇಲೆ ಕಡ್ಡಾಯವಾಗಿ ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಇದರಿಂದ ಉತ್ಪಾದನೆಯಿಂದ ಮಾರಾಟದವರೆಗೆ ಪ್ರತಿಯೊಂದು ಹಂತವನ್ನೂ ಡಿಜಿಟಲ್ ಮೂಲಕ ಪತ್ತೆಹಚ್ಚಲು ಸಾಧ್ಯವಾಗುತ್ತದೆ. ಸಿಸಿಟಿವಿ ದೃಶ್ಯಗಳನ್ನು ಕೇವಲ ದಾಖಲಿಸದೆ, ಅಬಕಾರಿ ಇಲಾಖೆಯ ಕೇಂದ್ರ ಸರ್ವರ್‌ಗೆ ನೇರ ಸಂಪರ್ಕ ಕಲ್ಪಿಸುವುದು ಸೂಕ್ತ. ಇದಲ್ಲದೆ, ಕಚ್ಚಾ ವಸ್ತುಗಳಾದ ಸುಪಾರಿ ಮತ್ತು ತಂಬಾಕಿನ ಪೂರೈಕೆಯ ಮೇಲೆ ನಿಗಾ ಇರಿಸುವುದರಿಂದ ತೆರಿಗೆ ಚೋರಿಯನ್ನು ಸಂಪೂರ್ಣವಾಗಿ ತಡೆಯ ಬಹುದು. ವ್ಯಸನಕಾರಿ ಉತ್ಪನ್ನಗಳ ಮೇಲಿನ ಶೇ.88ರಷ್ಟು ತೆರಿಗೆ ಸಂಗ್ರಹದ ಜೊತೆಗೆ, ಪರಿಸರ ಮಾಲಿನ್ಯ ತಡೆಗೆ ಹೆಚ್ಚುವರಿ ಶುಲ್ಕ ವಿಧಿಸುವುದು ಮತ್ತು ಸಾರ್ವಜನಿಕ ಸಹಭಾಗಿತ್ವದ ಮೂಲಕ ಅಕ್ರಮಗಳನ್ನು ಪತ್ತೆ ಹಚ್ಚುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಲಿ.

– ಡಾ.ವಿಜಯಕುಮಾರ ಎಚ್.ಕೆ

ಬೋಗಾದಿ ರೈಲ್ವೆ ಲೇಔಟ್‌ನಲ್ಲಿ ಕಾವೇರಿ ನೀರಿನ ಅನಿಯಮಿತ ಸರಬರಾಜು

ಮಾನ್ಯರೆ,

ಮೈಸೂರು ನಗರದ ಬೋಗಾದಿ ರೈಲ್ವೆ ಲೇಔಟ್ ಪ್ರದೇಶದಲ್ಲಿ ಕಾವೇರಿ ನೀರಿನ ಸರಬರಾಜು ಅತ್ಯಂತ ಅನಿಯಮಿತವಾಗಿದೆ. ನೀರು ಸರಬರಾಜು ಮಾಡುವ ಸಿಬ್ಬಂದಿ ಒಂದು ದಿನ ಬಿಟ್ಟು ಒಂದು ದಿನ ನೀರು ನೀಡಲಾಗುವುದು ಎಂದು ತಿಳಿಸಿದ್ದಾರೆ. ಆದರೆ ವಾಸ್ತವದಲ್ಲಿ ಯಾವುದೇ ನಿಯಮಿತತೆ ಇಲ್ಲದೆ ನೀರನ್ನು ಬಿಡಲಾಗುತ್ತಿದೆ.



ಒಂದು ದಿನ ಬೆಳಿಗ್ಗೆ 11ರಿಂದ ಸಂಜೆ 4 ಗಂಟೆಯವರೆಗೆ, ಮತ್ತೊಂದು ದಿನ ಬೆಳಿಗ್ಗೆ 7ರಿಂದ 10 ಗಂಟೆಯವರೆಗೆ, ಇನ್ನೊಂದು ದಿನ ಸಂಜೆ 4ರಿಂದ 7 ಗಂಟೆಯವರೆಗೆ, ಕೆಲವೊಮ್ಮೆ ಮಧ್ಯಾಹ್ನ 1ರಿಂದ 4 ಗಂಟೆಯವರೆಗೆ ನೀರು ಬರುತ್ತಿದೆ. ಈ ರೀತಿಯ ಅಸಮಯದ ಮತ್ತು ಅಸ್ಥಿರ ನೀರು ಸರಬರಾಜಿನಿಂದ ನಿವಾಸಿಗಳಿಗೆ ತೀವ್ರ ತೊಂದರೆ ಉಂಟಾಗಿದೆ. ಕೆಲಸಕ್ಕೆ ಹೋಗುವವರು ಮತ್ತು ವಿದ್ಯಾರ್ಥಿಗಳಿಗೆ ನೀರು ಸಂಗ್ರಹಿಸಲು ಬಹಳ ಕಷ್ಟವಾಗುತ್ತಿದೆ. ಆದ್ದರಿಂದ ಒಂದು ದಿನ ಬಿಟ್ಟು ಒಂದು ದಿನ ಪದ್ಧತಿಯನ್ನು ರದ್ದುಪಡಿಸಿ ಪ್ರತಿದಿನ ನಿಶ್ಚಿತ ಸಮಯದಲ್ಲಿ ನೀರು ಸರಬರಾಜು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ. ವಿಶೇಷವಾಗಿ ಬೆಳಿಗ್ಗೆ 9 ಗಂಟೆಯೊಳಗೆ ಅಥವಾ ಸಂಜೆ 5 ಗಂಟೆಯ ನಂತರ ನೀರು ಒದಗಿಸುವಂತೆ ಸಂಬಂಧಪಟ್ಟ ಇಲಾಖೆ ಕ್ರಮ ವಹಿಸಲಿ.

–ಡಾ.ದಿದ್ದಿಗಿ ವಂಶೀಕೃಷ್ಣ, ರೈಲ್ವೆ ಲೇಔಟ್, ಬೋಗಾದಿ, ಮೈಸೂರು.

ರೈತರ ಹೋರಾಟಕ್ಕೆ ಬೆಲೆಯೇ ಇಲ್ಲದಂತಾಗಿದೆ

ಮಾನ್ಯರೆ...

ಮೈಸೂರು ಜಿಲ್ಲೆಗೆ ಸೇರಿದ ಹೆಗ್ಗಡದೇವನ ಕೋಟೆ ತಾಲೂಕು ಇಡಿ ರಾಜ್ಯದಲ್ಲಿ ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ಹೊಂದಿದೆ. ಹಾಗೆಯೇ ವನಸಿರಿ ನಾಡು ಎಂಬ ಬಿರುದನ್ನೂ ಪಡೆದಿದೆ. ಕೆಲ ದಿನಗಳ ಹಿಂದೆ ಹುಲಿ ದಾಳಿಯಿಂದ ಮೂವರು ಮೃತಪಟ್ಟು, ಇನ್ನೊಬ್ಬರು ಎರಡು ಕಣ್ಣು ಕಳೆದುಕೊಂಡಿದ್ದಾರೆ. ಹಾಗೆ ರೈತರ ಸಾಕು ಪ್ರಾಣಿಗಳಿಗೂ ಹಾನಿ ಮಾಡಿದೆ. ಹೀಗಿರುವಾಗ ರಾಜ್ಯ ಸರ್ಕಾರವು ಅಕ್ರಮ ರೆಸಾರ್ಟ್, ಸಫಾರಿಗಳಿಂದ ಕಾಡುಪ್ರಾಣಿಗಳು, ಹುಲಿಗಳು ನಾಡಿನತ್ತ ಮುಖ ಮಾಡಿ ಜನರಿಗೆ ಪ್ರಾಣಹಾನಿ ಉಂಟು ಮಾಡುತ್ತಿವೆ ಎಂದಾಗ, ಇದನ್ನು ಪರಿಗಣಿಸಿದ ರಾಜ್ಯ ಸರ್ಕಾರವು ಸುಮಾರು ಕೆಲ ತಿಂಗಳಿಂದ ಸಫಾರಿ ಕೇಂದ್ರಗಳನ್ನು ಬಂದ್ ಮಾಡಿದ್ದವು.

ಆದರೆ ಈಗ ಮತ್ತೆ ಸಫಾರಿ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದಾರೆ. ಎಷ್ಟೋ ರೈತ ಸಂಘಗಳು ಸಾವಿರಾರು ಸ್ಥಳೀಯರು, ಸಂಘಟನೆಗಳು ಪರಿಸರವಾದಿಗಳು ಸೇವ್ ಕಬಿನಿ ಪದಾಧಿಕಾರಿಗಳು, ಇಷ್ಟೆಲ್ಲಾ ಸಂಘಟನೆಗಳು ಕಾಡನ್ನು ಉಳಿಸಿ, ನಾಡನ್ನು ಬೆಳೆಸಿ ಸಫಾರಿ ಬಂದ್ ಮಾಡಿಸಿ ಎಂದು ಹೋರಾಟ ನಡೆಸಿದರೂ ಕರ್ನಾಟಕ ರಾಜ್ಯ ಸರ್ಕಾರವು ಮತ್ತೆ ರೆಸಾರ್ಟ್‌ಗಳನ್ನು ಹಾಗೂ ಸಫಾರಿಗಳನ್ನು ಮತ್ತೆ ಪ್ರಾರಂಭ ಮಾಡಿರುವುದು ಖಂಡನೀಯ.

–ಸಿದ್ದಲಿಂಗೇಗೌಡ, ಹೈರಿಗೆ, ಹೆಚ್.ಡಿ.ಕೋಟೆ ತಾಲೂಕು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಅಸ್ತಿತ್ವವಿದ್ದರೆ ನಿರರ್ಥಕ; ಬದುಕಿದರೆ ಸಾರ್ಥಕ..!

ಬದುಕುವುದು ಅಪರೂಪದ ಸಂಗತಿ, ಅನೇಕರು ಅಸ್ತಿತ್ವದಲ್ಲಿದ್ದಾರೆ ಅಷ್ಟೆ! ಎಂದು ಕವಿ ಮತ್ತು ನಾಟಕಕಾರ ಆಸ್ಕರ್ ವೈಲ್ಡ್ ಹೇಳಿರುವುದು ಮೇಲ್ನೋಟಕ್ಕೆ ಗಂಭೀರ ಎನಿಸದೇ ಇದ್ದರೂ ಮಾರ್ಮಿಕವಾಗಿದೆ. ಎಷ್ಟೋ ಜನ ಉಸಿರಾಡುತ್ತಿದ್ದೇವೆ ಎಂದ ಕಾರಣಕ್ಕೆ ಬದುಕಿದ್ದೇವೆ ಎಂದು ಭಾವಿಸುತ್ತಾರೆ. ದೇಹದಲ್ಲಿ ಜೀವ ಇದ್ದ ಮಾತ್ರಕ್ಕೆ ಅದು ಬದುಕಲ್ಲ, ಬದುಕಿನಲ್ಲಿ ಒಂದು ಜೀವಂತಿಕೆ ಇರಬೇಕು, ಅದು ಬದುಕು.


ಬದುಕು ಎಂದರೆ ಸರಳ ರೇಖೆಯಂತೆ ಇರಬೇಕಿಲ್ಲ, ಹಾಗಿದ್ದರೆ ಯಾವ ಸ್ವಾರಸ್ಯವೂ ಇರುವುದಿಲ್ಲ. ರಾತ್ರಿ ಇರದಿದ್ದರೆ ಹಗಲಿಗೆ ಬೆಲೆಯಿಲ್ಲ, ಕಪ್ಪು ಬಣ್ಣ ಇರದಿದ್ದರೆ ಬಿಳಿ ಬಣ್ಣಕ್ಕೆ ಬೆಲೆಯಿಲ್ಲ, ಅಷ್ಟಕ್ಕೂ ಬಿಳಿ ಬಣ್ಣ ಎನ್ನುವುದು ಏಳು ವರ್ಣಗಳ ಮಿಶ್ರಣ ಅಲ್ಲವೇ? ಹಾಗೆಯೇ ಬದುಕಿನಲ್ಲೂ ವರ್ಣವಿರಬೇಕು. ಬೆಳಗ್ಗೆ ಎದ್ದಾಗ ಭಗವಂತ ನನಗೆ ಯಾವುದೇ ಕಷ್ಟ ನೀಡಬೇಡ ಎಂದು ಬೇಡುವ ಬದಲು, ಎಂತದ್ದೇ ಕಷ್ಟ ಬಂದರೂ ಅದನ್ನು ಎದುರಿಸುವ ಶಕ್ತಿ ನೀಡು ಎಂದು ಬೇಡಬೇಕು. ಕಷ್ಟಗಳನ್ನು ಹಿಮ್ಮೆಟ್ಟಿಸಿದ ನಂತರ ಆಗುವ ಆನಂದ ಅನುಭವಿಸಬೇಕು, ಅದು ಜೀವನ.

ಹುಟ್ಟಿದ ಮೇಲೆ ಸಾಯುವುದು ಇದ್ದೇ ಇದೆ. ಯಾವತ್ತೋ ಒಂದು ದಿನ ಸಾಯುತ್ತೇವೆ ಎಂದ ಮಾತ್ರಕ್ಕೆ ನಿತ್ಯ ನೂತನವಾಗಿರುವ ಬದುಕನ್ನು ಹೈರಾಣ ಮಾಡಿಕೊಳ್ಳಬೇಕಿಲ್ಲ. ಮನುಷ್ಯ ಭೂಮಿ ಮೇಲೆ ಜನಿಸಿರುವುದು ಅರ್ಥಪೂರ್ಣವಾಗಿ ಬದುಕಲು ಎಂದು ಭಾವಿಸಬೇಕು. ಹೇಗೋ ಬದುಕಬೇಕು ಎಂದು ಭಾವಿಸಬಾರದು. ಪ್ರಾಣಿಪಕ್ಷಿಗಳೇ ತಮ್ಮ ಬದುಕನ್ನು ಹಸನುಗೊಳಿಸಲು ನಿತ್ಯವೂ ಒಂದಲ್ಲ ಒಂದು ರೀತಿಯಲ್ಲಿ ಹೋರಾಟ ಮಾಡುತ್ತವೆ. ಸುಖ–ದುಃಖಗಳನ್ನು ಅನುಭವಿಸಿ ಆನಂದಿಸುತ್ತವೆ. ಅಂತಹುದರಲ್ಲಿ ಮನುಷ್ಯ ತನ್ನ ಬದುಕನ್ನು ಎಷ್ಟು ಸುಂದರ, ಸುಮಧುರಗೊಳಿಸಿಕೊಳ್ಳಬಹುದಲ್ಲವೇ?

ಎಷ್ಟೋ ಜನರು ವಿವಿಧ ಕಾರಣಗಳಿಗೆ ಬದುಕಿನಲ್ಲಿ ವೈರಾಗ್ಯ ಮೂಡಿಸಿಕೊಂಡಿರುತ್ತಾರೆ. ಅವರೊಟ್ಟಿಗೆ ಇದ್ದರೆ ಬದುಕುವುದಕ್ಕಿಂತ ಸಾಯುವುದೇ ಮೇಲು ಎಂಬ ಮನೋಭಾವ ಮೂಡಿದರೂ ಆಶ್ಚರ್ಯವಿಲ್ಲ. ಅಂತಹ ವಿಚಿತ್ರ ಹಾಗೂ ವಿಕೃತ ಮನೋ ಭಾವದ ಜನರಿಂದ ಅಂತರ ಕಾಪಾಡಿಕೊಳ್ಳಬೇಕು. ಜೀವನಪ್ರೀತಿಯನ್ನು ವೃದ್ಧಿಸಿಕೊಳ್ಳಬೇಕು. ಬದುಕು ಇರುವುದು ಏಕತಾನತೆಯಿಂದ ಸವೆಸಲು ಅಲ್ಲ, ಹಲವು ವಿಧಗಳಲ್ಲಿ ಸವಿಯಲು ಎಂದು ಭಾವಿಸಬೇಕು. ಬೆಳಗ್ಗೆ ಎದ್ದಾಕ್ಷಣ ದೇವರಿಗೆ ಕೃತಜ್ಞತೆ ಸಲ್ಲಿಸಿ ದಿನವನ್ನು ಪ್ರಾರಂಭಿಸಬೇಕು. ಏಕೆಂದರೆ ನಮಗೆ ಬದುಕಲು ಮತ್ತೊಂದು ದಿನವನ್ನು ಭಗವಂತ ಕರುಣಿಸಿದ್ದಾನೆ ಎಂದು ತಿಳಿಯಬೇಕು. ಸಮಸ್ಯೆಗಳೇ ಇಲ್ಲದ ಬದುಕು ನನ್ನದಾಗಲಿ ಎಂದು ಆಶಿಸಬಾರದು. ಜೀವನದಲ್ಲಿ ಏರುಪೇರುಗಳಾದರೆ ಸಮಚಿತ್ತದಿಂದ ಸ್ವೀಕರಿಸಬೇಕು.

ಎಲ್ಲರ ಬದುಕು ಅವರವರ ಮಟ್ಟಕ್ಕೆ ಸುಂದರವಾಗಿಯೂ, ಸುಮಧುರವಾಗಿಯೂ ಇರುತ್ತದೆ. ಯಾವಾಗ ಇತರರೊಂದಿಗೆ ಹೋಲಿಸಿಕೊಳ್ಳುತ್ತಾರೆಯೋ ಆಗ ಇರುವ ನೆಮ್ಮದಿಯನ್ನು ಕಳೆದುಕೊಳ್ಳುತ್ತಾರೆ. ಮನುಷ್ಯನಿಗೆ ಅತ್ಯಂತ ದೊಡ್ಡ ಪಿಡುಗು ಎಂದರೆ ಹೋಲಿಕೆ. ಯಾವುದೇ ಸ್ಪರ್ಧೆ ಏರ್ಪಡಿಸಿದರೂ ವಯೋಮಾನ, ವಿದ್ಯಾರ್ಹತೆ, ತೂಕ, ಎತ್ತರ ಹೀಗೆ ಯಾವುದಾದರೂ ಒಂದು ಮಾನ ದಂಡ ವಿಧಿಸಿರುತ್ತಾರೆ. ಆದರೆ ವಿನಾ ಕಾರಣ ತಮಗೆ ಸರಿಸಮನಾಗಿ ಇಲ್ಲದವರ ಜೊತೆ ಸ್ಪರ್ಧೆ ಏರ್ಪಡಿಸಿಕೊಂಡು ಬದುಕನ್ನು ಹೈರಾಣ ಮಾಡಿಕೊಳ್ಳುವವರು ಒಂದು ಕಡೆಯಾದರೆ, ಯಾವುದಕ್ಕೂ ಸ್ಪಂದಿಸದೆ ಬದುಕು ಎಂದರೆ ನಿಸ್ಸಾರ ಎಂದು ಭಾವಿಸಿ, ನಿತ್ಯ ತಮ್ಮ ಸ್ಥಿತಿಗತಿಗೆ ಯಾರ್‍ಯಾರನ್ನೋ ಶಪಿಸಿ ಪ್ರಾಣಿಪಕ್ಷಿಗಳಿಗೂ ಕಡೆಯದಾದ ಬದುಕನ್ನು ನಡೆಸುತ್ತಾ ತಮ್ಮ ಲೆಕ್ಕದಲ್ಲಿ ಬದುಕುತ್ತಾ, ಜನರ ಲೆಕ್ಕದಲ್ಲಿ ಎಂದು ನಿಧನ ಹೊಂದಿರುವ ಅನೇಕ ಪಾಪ ಪುರುಷರನ್ನು ಕಂಡಿರಬಹುದು. ಇಂತಹ ಮನುಜರನ್ನು ಕಂಡೇ ಆಂಗ್ಲ ಸಾಹಿತಿ ಬೆಂಜಮಿನ ಫ್ರಾಂಕ್ಲಿನ್ ಅವರು ಕೆಲವರು 25ನೇ ವಯಸ್ಸಿಗೆ ತೀರಿ ಹೋಗಿರುತ್ತಾರೆ, ಅವರನ್ನು 75ನೇ ವಯಸ್ಸಿನಲ್ಲಿ ಸಮಾಧಿ ಮಾಡುತ್ತಾರೆ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ಮನುಷ್ಯನಾದವನಿಗೆ ಸೂಕ್ಷ್ಮ ಸಂವೇದನೆ ಇರಬೇಕು. ಸಾಹಿತಿ ಗಳಾದ ಪೂರ್ಣಚಂದ್ರ ತೇಜಸ್ವಿಯವರು ಹೇಳುವಂತೆ ಪ್ರಕೃತಿಯ ಕುರಿತಾಗಿ ಒಂದು ಕುತೂಹಲವಿರಬೇಕು. ಕೋಗಿಲೆಯ ಗಾಯನಕ್ಕೆ ತಲೆದೂಗದೆ, ನವಿಲಿನ ನರ್ತನಕ್ಕೆ



> ಪಂಚೇಂದ್ರಿಯಗಳು ಇರುವುದು ಮನುಷ್ಯ ತಾನು ತಿಂದುಂಡು ಬದುಕಲು ಎಂದು ಎಷ್ಟೋ ಜನ ಭಾವಿಸಿದಂತಿದೆ. ಅನ್ನ, ವಸ್ತ್ರ, ವಸತಿಗೂ ಮಿಗಿಲಾದ ಬದುಕಿದೆ, ಅದನ್ನು ಕಂಡುಕೊಂಡವನೇ ನಿಜ ಸುಖಿಯು. ಕಲೆ, ಸಾಹಿತ್ಯ, ನೃತ್ಯ, ಸಂಗೀತ, ಕ್ರೀಡೆ..... ಹೀಗೆ ಯಾವುದಾದರೂ ಒಂದರಲ್ಲಿ ಆಸಕ್ತಿ ಇದ್ದರೂ ಬದುಕು ಬರಡು ಎನಿಸುವುದಿಲ್ಲ. ಒಂದಷ್ಟು ಆಸೆಯೂ ಇರಬೇಕು. ಆಸೆ ಮನುಷ್ಯನ ಬದುಕಿಗೆ ಇಂಧನ ಇದ್ದ ಹಾಗೆ. ಆದರೆ ದುರಾಸೆ ಇರಬಾರದು. ದುರಾಸೆ ದುಃಖಕ್ಕೆ ಮೂಲ ವಾಗಬಹುದು. ಬದುಕಿನಲ್ಲಿ ನಮಗೆ ಸಿಕ್ಕಿರುವ, ದಕ್ಕಿರುವ ಸಂಗತಿಗಳ ಕುರಿತಾಗಿ ಪಟ್ಟಿ ಮಾಡಬೇಕು. ಅದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಬೇಕು. ಬಹುತೇಕರು ಇಲ್ಲದಿರುವ ಸಂಗತಿಗಳ ಕುರಿತಾಗಿ ಪಟ್ಟಿ ಮಾಡುತ್ತಾರೆ. ಆ ಪಟ್ಟಿಗೆ ಕೊನೆ ಮೊದಲಿಲ್ಲ. ಆ ಕಾರಣಕ್ಕೆ ಅವರಿಗೆ ಆನಂದ ಲಭಿಸು ವುದೇ ಇಲ್ಲ. ಸದಾ ಆತಂಕದಲ್ಲಿಯೇ ಬದುಕನ್ನು ಕಾಣುತ್ತಾರೆ. ಖುಷಿ ಪಡಲು ನೂರು ಸಂಗತಿಗಳಿರುವಾಗ, ದುಃಖಪಡಲು ಮೂರು ಸಂಗತಿಗಳನ್ನು ನೆನೆಯುವುದು ವಿಪರ್ಯಾಸವಲ್ಲವೇ?

ಮನಸೋಲದೆ, ಚಿರತೆಯ ಓಟಕ್ಕೆ ಬೆರಗಾಗದೆ, ಆನೆಯ ಶಕ್ತಿಗೆ ಆಶ್ಚರ್ಯಪಡದೆ, ಅರಳುವ ಹೂವನ್ನು ಕಂಡು, ಅದರ ಸುವಾಸನೆಯನ್ನು ಸವಿದು, ವಿವಿಧ ಪುಷ್ಪಗಳ ಮಕರಂದ ಹೀರಿ ಜೇನು ತಯಾರಿಸುವ ಜೇನು ನೊಣವ ಕಂಡು ಬೆರಗು ಪಡದೇ ಇರುವವನು ಮನುಷ್ಯನೇ? ನಾವು ಮಾಡುವ ಪ್ರತಿ ಕ್ರಿಯೆಯಲ್ಲಿಯೂ ವ್ಯಾಪಾರಿ ಮನೋಭಾವ ಇರಬೇಕೇ? ಲಾಭನಷ್ಟಗಳ ಲೆಕ್ಕದಲ್ಲಿಯೇ ಬದುಕು ಸವೆಯಬೇಕೇ? ಈ ರೀತಿಯ ಪ್ರಶ್ನೆಗಳನ್ನು ಹಾಕಿಕೊಂಡಲ್ಲಿ ಒಂದಷ್ಟು ಜಾಗೃತಿ ಮೂಡಬಹುದು. ಮಲಯ ಮಾರುತ ಚಲನಚಿತ್ರದಲ್ಲಿನ ಒಂದು ಗೀತೆ ಇಲ್ಲಿ ಉಲ್ಲೇಖನೀಯ. ಎಲ್ಲೆಲ್ಲೂ ಸಂಗೀತವೇ... ಎಲ್ಲೆಲ್ಲೂ ಸೌಂದರ್ಯವೇ.... ಕೇಳುವ ಕಿವಿಯಿರಲು, ನೋಡುವ ಕಣ್ಣಿರಲು ಎಲ್ಲೆಲ್ಲೂ ಸಂಗೀತವೆ, ಎಲ್ಲೆಲ್ಲೂ ಸೌಂದರ್ಯವೇ... ಈ ಗೀತೆಯು ಮನುಷ್ಯನಲ್ಲಿ ಇರಬೇಕಾದ ಆಸಕ್ತಿಯ ಕುರಿತು ತಿಳಿಸುತ್ತದೆ.

ಪಂಚೇಂದ್ರಿಯಗಳು ಇರುವುದು ಮನುಷ್ಯ ತಾನು ತಿಂದುಂಡು ಬದುಕಲು ಎಂದು ಎಷ್ಟೋ ಜನ ಭಾವಿಸಿದಂತಿದೆ. ಅನ್ನ, ವಸ್ತ್ರ, ವಸತಿಗೂ ಮಿಗಿಲಾದ ಬದುಕಿದೆ, ಅದನ್ನು ಕಂಡುಕೊಂಡವನೇ ನಿಜಸುಖಿಯು. ಕಲೆ, ಸಾಹಿತ್ಯ, ನೃತ್ಯ, ಸಂಗೀತ, ಕ್ರೀಡೆ..... ಹೀಗೆ ಯಾವುದಾದರೂ ಒಂದರಲ್ಲಿ ಆಸಕ್ತಿ ಇದ್ದರೂ ಬದುಕು ಬರಡು ಎನಿಸುವುದಿಲ್ಲ. ಒಂದಷ್ಟು ಆಸೆಯೂ ಇರಬೇಕು. ಆಸೆ ಮನುಷ್ಯನ ಬದುಕಿಗೆ ಇಂಧನ ಇದ್ದ ಹಾಗೆ. ಆದರೆ ದುರಾಸೆ ಇರಬಾರದು. ದುರಾಸೆ ದುಃಖಕ್ಕೆ ಮೂಲ ವಾಗಬಹುದು. ಬದುಕಿನಲ್ಲಿ ನಮಗೆ ಸಿಕ್ಕಿರುವ, ದಕ್ಕಿರುವ ಸಂಗತಿಗಳ ಕುರಿತಾಗಿ ಪಟ್ಟಿ ಮಾಡಬೇಕು. ಅದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಬೇಕು. ಬಹುತೇಕರು ಇಲ್ಲದಿರುವ ಸಂಗತಿಗಳ ಕುರಿತಾಗಿ ಪಟ್ಟಿ ಮಾಡುತ್ತಾರೆ. ಆ ಪಟ್ಟಿಗೆ ಕೊನೆಮೊದಲಿಲ್ಲ. ಆ ಕಾರಣಕ್ಕೆ ಅವರಿಗೆ ಆನಂದ ಲಭಿಸುವುದೇ ಇಲ್ಲ. ಸದಾ ಆತಂಕದಲ್ಲಿಯೇ ಬದುಕನ್ನು ಕಾಣುತ್ತಾರೆ. ಖುಷಿಪಡಲು ನೂರು ಸಂಗತಿಗಳಿರುವಾಗ, ದುಃಖಪಡಲು ಮೂರು ಸಂಗತಿಗಳನ್ನು ನೆನೆಯುವುದು ವಿಪರ್ಯಾಸವಲ್ಲವೇ?

ಆಂಗ್ಲ ಕವಿ ಹಾಗೂ ನಾಟಕಕಾರ ಷೇಕ್ಸ್‌ಪಿಯರ್ ಅವರ ಈ ಮಾತು ಬದುಕಿನಲ್ಲಿ ನಮಗೆ ಕೊರತೆ ಇದೆ ಎನ್ನುವವರ ಕಣ್ತೆರೆಸು ವಂತಿದೆ. ನಾನು ನನಗೆ ಪಾದರಕ್ಷೆಗಳಿಲ್ಲ ಎಂದು ಕೊರಗುತ್ತಿದ್ದೆ, ಆದರೆ ಕಾಲಿಲ್ಲದವನನ್ನು ನೋಡಿ, ನನಗೆ ಕಾಲುಗಳಾದರು ಇವೆಯಲ್ಲ ಎಂಬ ಸಮಾಧಾನವಾಯಿತು ಎಂದು ಹೇಳುವ ಮೂಲಕ ಮನುಷ್ಯ ತನ್ನಲ್ಲಿರುವ ಅನೇಕ ವರಗಳ ಕುರಿತಾಗಿ ಅರಿವನ್ನೇ ಹೊಂದಿರುವುದಿಲ್ಲ ಎಂಬ ಸತ್ಯವನ್ನು ತಿಳಿಸಿದ್ದಾರೆ. ಕೈಯಲ್ಲಿ ವಜ್ರವೇ ಇದ್ದರೂ ಕಲ್ಲುಗಳಿಗೆ ಆಸೆ ಪಡುವಂತೆ ಕ್ಷುಲ್ಲಕ ವಿಷಯ ಹಾಗೂ ವಸ್ತುಗಳಿಗೆ ನೆಮ್ಮದಿ ಕಳೆದುಕೊಳ್ಳುತ್ತಾನೆ, ಅಲ್ಲವೇ?

ಅನೇಕ ಜನರಿಗೆ ಪರರ ಚಿಂತೆಯೇ ಹೆಚ್ಚಾಗಿರುತ್ತದೆ. ಅನ್ಯರ ವಿಚಾರದಲ್ಲಿಯೇ ಒಂದು ರೀತಿ ವಿಕೃತಾನಂದ ಪಡೆಯುತ್ತಿರುತ್ತಾರೆ. ಇತರರ ಕುರಿತು ಇಲ್ಲಸಲ್ಲದ ವಿಚಾರಗಳನ್ನು ಪ್ರಸ್ತಾಪಿಸಿ, ಅವರನ್ನು ನಿಂದಿಸದೇ ಇದ್ದರೆ ಅವರಿಗೆ ಊಟ ಸೇರುವುದಿಲ್ಲ, ನಿದ್ರೆ ಬರುವುದಿಲ್ಲ. ಇಂತಹ ಜನರನ್ನು ಕಂಡು ವಚನಕಾರರಾದ ಬಸವಣ್ಣನವರು ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ನಮ್ಮ ಕೂಡಲಸಂಗಮದೇವ? ಎಂದು ಹೇಳುವ ಮೂಲಕ ಅನ್ಯರ ವಿಚಾರಕ್ಕೆ ಮೂಗು ತೂರಿಸುವವರನ್ನು ಎಚ್ಚರಿಸಿದ್ದಾರೆ.

ಬದುಕು ನಾವು ಎಣಿಸಿದಷ್ಟು ಸುಲಭವೂ ಅಲ್ಲ, ನಾವು ಹೆದರುವಷ್ಟು ಕಷ್ಟವೂ ಅಲ್ಲ. ಬದುಕು ಬಂದ ಹಾಗೆ ಸ್ವೀಕರಿಸುವುದು ಜಾಣತನ. ಇಲ್ಲಿ ಯಾವುದೂ ಶಾಶ್ವತ ಎಂಬುದಿಲ್ಲ. ಸಿನೆಮಾ, ಧಾರಾವಾಹಿಗಳ ಚಿತ್ರಕಥೆಗಳಂತೆ ಬದುಕು ನಡೆಯುವುದಿಲ್ಲ. ಸಿನೆಮಾಗಿಂತಲೂ ರೋಚಕ ವಾಗಿರುತ್ತದೆ ಬದುಕು. ಊಹೆಗೂ ನಿಲುಕದ ತಿರುವುಗಳು, ಅನಿರೀಕ್ಷಿತವಾಗಿ ಬರುವ ಕಷ್ಟಗಳು, ಸುಖಗಳು ಇವೆಲ್ಲವುಗಳ ಮಿಶ್ರಣ ಬದುಕು. ಮನುಷ್ಯನಲ್ಲಿ ಸ್ವಾರ್ಥ ಹೆಚ್ಚಾಗಿರುವುದನ್ನು ಕಾಣಬಹುದು. ತನಗೆ ಕಷ್ಟ ಬಂದಾಗ ದೇವರನ್ನು ಬೇಡುವ, ಶಪಿಸುವ ಮನುಷ್ಯ, ಸುಖ ಬಂದಾಗ ತನ್ನಿಂದ ಈ ಸುಖ ಲಭಿಸಿದೆ ಎಂದು ಮೆರೆಯುತ್ತಾನೆ, ದೇವರನ್ನೇ ಮರೆಯುತ್ತಾನೆ. ಸುಖ ಬಂದಾಗ ಸುಮ್ಮನೆ ಹಿಗ್ಗದೆ, ದುಃಖ ಬಂದಾಗ ಕೊರಗಿ ಕುಗ್ಗದೆ ಸಮಾಧಾನಿಯಾಗಿರುವುದು ಜಾಣತನ. ಶರಣೆ ಅಕ್ಕಮಹಾದೇವಿಯ ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆ ಎಂತಯ್ಯ, ಸಮುದ್ರದ ತಟದಲ್ಲೊಂದು ಮನೆಯ ಮಾಡಿ ನೊರೆತೊರೆಗಳಿಗೆ ಅಂಜಿ ದೊಡೆ ಎಂತಯ್ಯ, ಸಂತೆಯಲ್ಲೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆ ಎಂತಯ್ಯ, ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದರೆ ಸಮಾಧಾನಿಯಾಗಿರಬೇಕು ಎಂದು ಹೇಳಿರುವುದು ಎಂತಹವರಿಗೂ ಆತ್ಮಸ್ಥೈರ್ಯ ತುಂಬುತ್ತದೆ.

ಎಂದಿಗೂ ನನ್ನದೂ ಒಂದು ಬದುಕಾ ಎಂದು ಹತಾಶರಾಗಬಾರದು. ನಮ್ಮ ಬದುಕನ್ನು ಪ್ರೀತಿಸಬೇಕು. ಬದುಕನ್ನು ಪ್ರೀತಿಸಲು ಪ್ರಾರಂಭಿಸಿದರೆ ನಾವು ಬದುಕನ್ನು ನೋಡುವ ದೃಷ್ಟಿಕೋನವೇ ಬದಲಾಗುತ್ತದೆ, ಬದುಕನ್ನು ದ್ವೇಷಿಸಲು ಪ್ರಾರಂಭಿಸಿದರೆ ನರಕ ಇನ್ನೇಕೆಬೇಕು? ಎನಿಸುತ್ತದೆ. ಮನುಷ್ಯ ಮನಸ್ಸು ಮಾಡಿದರೆ ಇಲ್ಲಿಯೇ ಸ್ವರ್ಗ ಸೃಷ್ಟಿ ಮಾಡಿಕೊಳ್ಳಬಲ್ಲ, ಮನಸ್ಸನ್ನು ಹಾಳು ಮಾಡಿಕೊಂಡರೆ ನರಕವನ್ನು ಸೃಷ್ಟಿ ಮಾಡಿಕೊಳ್ಳಬಲ್ಲ. ಆದ್ದರಿಂದ ಅನಗತ್ಯವಾದ ವ್ಯಾಮೋಹಗಳಿಗೆ ಕಡಿವಾಣ ಹಾಕಬೇಕು.

ಬದುಕು ಎಂದರೆ ಕಷ್ಟ–ಸುಖ, ನೋವು–ನಲಿವು, ಸೋಲು–ಗೆಲುವು, ನಿರೀಕ್ಷೆ–ನಿರಾಸೆ, ಬಾಲ್ಯ–ವೃದ್ಧಾಪ್ಯ ಇವುಗಳ ಹೂರಣ. ಬದುಕು ಎಂದರೆ ತಪ್ಪಿಸಿಕೊಳ್ಳಲಾಗದ ಒಂದು ಪಯಣ. ಈ ಪಯಣದಲ್ಲಿ ಏರುಪೇರು ಇದ್ದೇ ಇರುತ್ತವೆ. ಭರವಸೆಯೊಂದಿಗೆ ಪಯಣ ಮುಂದುವರಿಸಿದರೆ ಬದುಕು ಆನಂದಮಯ. ಭರವಸೆ ಕಳೆದುಕೊಂಡು ಬದುಕಿದರೆ ಆನಂದ ಮಾಯ, ಅಷ್ಟೇ! ಸುಮ್ಮನೆ ನಮ್ಮ ದೇಹ ಅಸ್ತಿತ್ವದಲ್ಲಿದ್ದರೆ ಸಾಲದು, ಸಾರ್ಥಕವಾಗಿ ಬದುಕಬೇಕು, ಏನಂತೀರಿ?

ಹೂರಣ: ಮನಸ್ಸು ಇಟ್ಟರೆ ಬದುಕು ಅದ್ಭುತ,
ಮನಸ್ಸು ಕೆಟ್ಟರೆ ಬದುಕಿನ ಭೂತ !

ಮೈಸೂರಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ

ಶಾಂತಿಯೊಂದಿಗೆ ಸಮ ಸಮಾಜ ನಿರ್ಮಾಣಕ್ಕೆ ಯತ್ನಿಸಿದವರು ಶ್ರೀ ರೇಣುಕಾಚಾರ್ಯರು

ಮೈಸೂರು, ಮಾ.1(ಎಂಟಿವೈ)– ಶ್ರೀ ರೇಣುಕಾಚಾರ್ಯರು 'ಮಾನವ ಕುಲಕ್ಕೆ ಒಳಿತಾಗಲಿ' ಎಂಬ ಉದಾತ್ತ ಚಿಂತನೆಯೊಂದಿಗೆ ಶಾಂತಿಯೊಂದಿಗೆ ಸಮ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದ್ದರು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಶ್ರೀ ರೇಣುಕಾಚಾರ್ಯ ಜಯಂತ್ಯೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಶ್ರೀ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶ್ರೀ ರೇಣುಕಾಚಾರ್ಯರ ತತ್ವ, ಸಿದ್ಧಾಂತಗಳು ಜಗತ್ತಿಗೆ ಒಳಿತನ್ನು ಬಯಸುತ್ತದೆ. ಸಮಾಜದ ಕಣ್ಣಾಗಿ, ಮಾನವೀಯತೆಯ ಪ್ರತಿರೂಪವಾಗಿ ಹಾಗೂ ಮನುಷ್ಯ ಕುಲಕ್ಕೆ ಬೆಳಕಾಗಿ ಬಂದಂತಹ ಮಹಾನ್ ವ್ಯಕ್ತಿಗಳ ಜಯಂತಿಯನ್ನು ಆಚರಿಸುವುದರೊಂದಿಗೆ ಅವರ ಆದರ್ಶಗಳನ್ನು ಪಾಲನೆ ಮಾಡಬೇಕು.

ರೇಣುಕಾಚಾರ್ಯರ ತತ್ವ, ಸಿದ್ಧಾಂತ, ಮಾನವೀಯ ಮೌಲ್ಯ, ಆದರ್ಶ ಇಂದು ಹೆಮ್ಮರವಾಗಿ ನಮ್ಮೆಲ್ಲರ ಮನಸ್ಸಿನಲ್ಲಿ ಒಂದು ಫಲ ಕೊಡುವ ಮರವಾಗಿ ಬೆಳೆದಿದೆ.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ನಡೆದ ಶ್ರೀ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ರೇಣುಕಾಚಾರ್ಯರ ಭಾವಚಿತ್ರಕ್ಕೆ ಶ್ರೀ ಅರಮನೆಯ ಜಪದಕಟ್ಟೆ ಮಠದ ಶ್ರೀ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿ ಹಾಗೂ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಪುಷ್ಪಾರ್ಚನೆ ಮಾಡಿದರು.

ವೀರಶೈವ ಪರಂಪರೆಯಲ್ಲಿ ಇಡೀ ಸಮುದಾಯಕ್ಕೆ ಆದರ್ಶದಾಯಕ ಸಿದ್ಧಾಂತವನ್ನು ಪರಿಚಯಿಸಿದಂತಹ ಮಹನೀಯ ವ್ಯಕ್ತಿ ರೇಣುಕಾಚಾರ್ಯ. ಶ್ರೀ ರೇಣುಕಾಚಾರ್ಯರು ಎಂದಿಗೂ ಅಮರವಾಗಿ ಇರುತ್ತಾರೆ. ನಮ್ಮೆಲ್ಲರ ಜೀವನದಲ್ಲಿ ಆದರ್ಶವಾಗಿ ಇರುತ್ತಾರೆ ಎಂದು ಬಣ್ಣಿಸಿದರು.

ರಾಯಚೂರು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ನಿವೃತ್ತ ಪ್ರಾಧ್ಯಾಪಕರಾದ ಡಾ.ಮೀನಾಕ್ಷಿ ಖಂಡಿಮಠ ಅವರು ಮಾತನಾಡಿ, ಈ ಕಾರ್ಯಕ್ರಮವನ್ನು ರೇಣುಕಾಚಾರ್ಯರ ವ್ಯಕ್ತಿತ್ವವನ್ನು ಪರಿಚಯಿಸುವುದಕ್ಕಿಂತ ಅವರ ಬೋಧನೆಗಳನ್ನು ಮರೆತಿರುವ ಜನರಿಗೆ ಅವರ ತತ್ವಗಳನ್ನು ನೆನಪಿಸಬೇಕೆಂಬ ಕಾಳಜಿಯಿಂದ ಆಚರಿಸಲಾಗುತ್ತಿದೆ. ರೇಣುಕಾಚಾರ್ಯರ ತತ್ವಗಳನ್ನು ಜನರು ಆಧರಿಸಬೇಕು. ರೇಣುಕಾಚಾರ್ಯರು ಶಿವನ ಅಂಶ ಸಂಭೂತರು, ಅಗೋಚರ ಶಕ್ತಿಯೇ ತಾವಾಗಿ ಬಂದು ವ್ಯಕ್ತಿಯಾಗಿ ರೂಪಿತಗೊಂಡವರನ್ನು ಮಾತಿನಲ್ಲಿ ವರ್ಣಿಸಲು ಸಾಧ್ಯವಿಲ್ಲ. ಭಕ್ತಿ, ನಂಬಿಕೆ, ಶ್ರದ್ಧೆ ನಮ್ಮ ಧರ್ಮದ ಅಂತರ್ ಸತ್ವದ ಶಕ್ತಿ ಎಂದರು.

ರೇಣುಕಾಚಾರ್ಯರು ಸಮಾನತೆ ಎಂಬ ತತ್ವಕ್ಕೆ ಮಹತ್ವ ನೀಡಿದರು. ಅದರಲ್ಲಿ ಎಲ್ಲಾ ವರ್ಣಗಳು ಸಮಾನವೆಂಬ ನಂಬಿಕೆಯನ್ನು ಹರಡಿದರು. ಇಷ್ಟಲಿಂಗವನ್ನು ಧರಿಸುವ ಮೂಲಕ ನಿತ್ಯ ಶಿವನೊಂದಿಗೆ ಸಂಬಂಧವನ್ನು ಕಾಪಾಡಬೇಕೆಂಬ ತತ್ವವನ್ನು ಅವರು ಬೋಧಿಸಿದರು. ಎಲ್ಲಾ ಪೋಷಕರು ಶ್ರೀ ರೇಣುಕಾಚಾರ್ಯರ ತತ್ವ ಆದರ್ಶಗಳನ್ನು ತಮ್ಮ ಮಕ್ಕಳಿಗೆ ಹೇಳಿಕೊಡುವುದರ ಮೂಲಕ ತಮ್ಮ ಮಕ್ಕಳನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಅರಮನೆಯ ಜಪದಕಟ್ಟೆ ಮಠದ ಶ್ರೀ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ, ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಿ.ಎಸ್.ಶ್ರೀಶೈಲ, ಮುಖಂಡರಾದ ಹಿನಕಲ್ ಬಸವರಾಜು, ಅಶೋಕ್, ಜ್ಞಾನಶಂಕರ್ ಇತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ನಗರದ ಕೆರೆಗಳ ಸಂರಕ್ಷಣೆಗೆ ಮೈಗ್ರಾಪ ಆಗ್ರಹ



ಮೈಸೂರು ಗ್ರಾಹಕರ ಪರಿಷತ್ ನಿಯೋಗವು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧಿಕಾರಿ ದಯಾನಂದ್ ಅವರನ್ನು ಭೇಟಿ ಮಾಡಿ ಕುಕ್ಕರಹಳ್ಳಿ ಕೆರೆ, ಮೈಸೂರು ನಗರ ಕೆರೆಗಳ ರಕ್ಷಣೆಗಾಗಿ ಮನವಿ ಸಲ್ಲಿಸಿತು.

ಮೈಸೂರು,ಮಾ.1–ಮೈಸೂರು ಗ್ರಾಹಕರ ಪರಿಷತ್ ನಿಯೋಗವು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧಿಕಾರಿ ದಯಾನಂದ್ ಅವರನ್ನು ಭೇಟಿ ಮಾಡಿ ಕುಕ್ಕರಹಳ್ಳಿ ಕೆರೆಯ 4 ತಿಂಗಳ (ಫೆಬ್ರವರಿ ಅಂತ್ಯದವರೆಗೆ) ಕಲುಷಿತ ನೀರಿನ ಮಾದರಿ ವರದಿಯನ್ನು ಸಿದ್ಧಪಡಿಸುವಂತೆ ಮನವಿ ಸಲ್ಲಿಸಿತು.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಒಳಪಡುವ ಕೆರೆಯ ಹೂಳೆತ್ತುವ ಕಾರ್ಯ, ಕೆರೆಯ ಸಂರಕ್ಷಣೆ ಬಫರ್ ಜೋನ್, ಕೆರೆಯ ಒತ್ತುವರಿ ತಡೆಯುವಿಕೆ, ಕೆರೆಯನ್ನು ಅಭಿವೃದ್ಧಿಪಡಿಸಲು ಶೀಘ್ರದಲ್ಲೇ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರು, ಮೈಸೂರು ನಗರಪಾಲಿಕೆ ಆಯುಕ್ತರು ಹಾಗೂ ಜಿಲ್ಲಾಧಿಕಾರಿ ಗಮನಕ್ಕೆ ತಂದು ಶೀಘ್ರದಲ್ಲೇ ಸಭೆ ಕರೆಯಬೇಕೆಂದು ಇದೇ ವೇಳೆ ಮನವಿ ಮಾಡಲಾಯಿತು.

ತಜ್ಞರಾದ ರವಿಕುಮಾರ್, ಭಾಮಿ ವಿ.ಶೆಣೈ ಹಾಗೂ ಮೇಜರ್ ಜನರಲ್ ಒಂಬತ್ಕೆರೆ ಅವರು ಎನ್‌ಜಿಟಿ ನಿಯಮಗಳು, ಸುಪ್ರೀಂ ಕೋರ್ಟ್ ತೀರ್ಪುಗಳ ಅನುಸರಿಸಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕೆರೆಗಳ ಸಂರಕ್ಷಣೆ, ಅಭಿವೃದ್ಧಿ ಕಾರ್ಯ ಕೈಗೊಳ್ಳುವಂತೆ ಒತ್ತಾಯಿಸಲಾಯಿತು. ದಯಾನಂದ್ ಎಲ್ಲವನ್ನು ಪರಿಶೀಲಿಸಿ ಶೀಘ್ರದಲ್ಲೇ ಸಭೆ ನಡೆಸಿ ಸೂಕ್ತ ನಿರ್ಧಾರಕ್ಕೆ ಬರುವುದಾಗಿ ಭರವಸೆ ನೀಡಿದರು. ಪತ್ರಕರ್ತೆ ರಶ್ಮಿ ಕೋಟಿ, ಮೈಗ್ರಾಪ ಸಂಚಾಲಕ ಡಿ.ವಿ.ದಯಾನಂದ ಸಾಗರ್, ಉಪಸ್ಥಿತರಿದ್ದರು.

ಬುಡಕಟ್ಟು ಜನರ ಸ್ಥಿತಿಗತಿ ಅರಿತು ಅವರ ಪರ ನೀತಿಗಳ ರೂಪಿಸಬೇಕು



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕೇರಳದ ಪೋಕ್ಲ್ಯಾಂಡ್ ಇಂಟರ್ ನ್ಯಾಷನಲ್‌ನ ಅಧ್ಯಕ್ಷ ಡಾ.ವಿ.ಜಯರಾಜನ್ ಉದ್ಘಾಟಿಸಿದರು.

ಮೈಸೂರು,ಮಾ.1(ಎಂಟಿವೈ)– ಸ್ವಯಂ ಸೇವಾ ಸಂಸ್ಥೆಗಳು ಬುಡಕಟ್ಟು ಸಮುದಾಯಗಳಿಗೆ ಶಿಕ್ಷಣ, ಆರೋಗ್ಯ ಕೌಶಲಾಭಿವೃದ್ಧಿ ಅರಿವು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ ಎಂದು ಕೇರಳದ ಪೋಕ್ಲ್ಯಾಂಡ್ ಇಂಟರ್ ನ್ಯಾಷನಲ್‌ನ ಅಧ್ಯಕ್ಷ ಡಾ.ವಿ.ಜಯರಾಜನ್ ಪ್ರಶಂಸಿಸಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ 'ಬುಡಕಟ್ಟು ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ' ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬುಡಕಟ್ಟು ಸಮುದಾಯಗಳು ಅರಣ್ಯ ಸರಹದ್ದಿನ ಸಂಪರ್ಕ ರಹಿತ ಪ್ರದೇಶಗಳಲ್ಲಿ ವಾಸಿಸುತ್ತಿವೆ. ಇಂತಹ ಪ್ರದೇಶಗಳಿಗೆ ಯಾವುದೇ ಅಧಿಕಾರಿಗಳು ಹೋಗಿ ಕಾರ್ಯನಿರ್ವಹಿಸುವುದಿಲ್ಲ. ಇಂತಹ ಸಂದರ್ಭದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಮೊಬೈಲ್ ವ್ಯಾನ್‌ಗಳ ಮೂಲಕ ಆರೋಗ್ಯ ಸೇವೆ ಒದಗಿಸುತ್ತಿದ್ದಾರೆ. ಕೌಶಲಾಭಿವೃದ್ಧಿ ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿವೆ. ಭೂಮಿ ಹಕ್ಕು ಕಾನೂನು, ವಸತಿ, ನೀರು, ರಸ್ತೆ ಅಭಿವೃದ್ಧಿ ಹೀಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ವಿಭಾಗದ ಪ್ರೊ. ಚಂದ್ರಮೌಳಿ ಮಾತನಾಡಿ, ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರು ಅವರು ಆದಿವಾಸಿ ಜನರ ಅಭಿವೃದ್ಧಿಗೆ ಪಂಚಶೀಲ ತತ್ವಗಳನ್ನು ಜಾರಿಗೆ ತಂದಿದ್ದರೂ ಸಹ ಬುಡಕಟ್ಟು ಜನರು ಅಭಿವೃದ್ಧಿಯಾಗಿಲ್ಲ. ಸರ್ಕಾರದಲ್ಲಿ ಕಾಯಿದೆ ಮಾಡುವವರು ಬುಡಕಟ್ಟು ಜನರ ಅವಶ್ಯಕತೆಗಳನ್ನು ಅರಿತು ರೂಪಿಸಬೇಕು. ಸರ್ಕಾರವೇ ಎಲ್ಲವನ್ನು ಮಾಡಬೇಕು ಎನ್ನುವುದು ತಪ್ಪು. ಸ್ವಯಂ ಸೇವಾ ಸಂಸ್ಥೆಗಳು ಕೈಗಾರಿಕೋದ್ಯಮಿಗಳ ಮನವೊಲಿಸಿ ಸಿಎಸ್‌ಆರ್ ಅನುದಾನ ತಂದು ಅಭಿವೃದ್ಧಿಪಡಿಸಬೇಕು. ಹಾಡಿ ಜನರನ್ನು ಕರೆತಂದು ಪ್ರವಾಸಿ ತಾಣಗಳನ್ನು ತೋರಿಸಬೇಕು. ವಿಚಾರವಂತಿಕೆ ಹುಟ್ಟು ಹಾಕುವ ಶಿಕ್ಷಣ, ಒಳ್ಳೆಯ ಆಹಾರ, ವಸತಿ, ರಸ್ತೆಗಳನ್ನು ಅಭಿವೃದ್ಧಿಪಡಿಸಿದರೆ ಬದಲಾವಣೆ ಕಾಣಬಹುದು ಎಂದು ತಿಳಿಸಿದರು.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಸಿ.ಶಿವಕುಮಾರ್ ಮಾತನಾಡಿ, ಸೇವಾ ಮನೋಭಾವ ಇರುವ ಸ್ವಯಂ ಸೇವಾ ಸಂಸ್ಥೆಗಳು ಹೆಚ್ಚಾಗಬೇಕು. ಸರ್ಕಾರದ ಕಾರ್ಯಕ್ರಮಗಳು ಬುಡಕಟ್ಟು ಜನರಿಗೆ ತಲುಪುತ್ತಿದೆಯಾ ಎಂದು ನೋಡಿಕೊಳ್ಳಬೇಕು. ಬುಡಕಟ್ಟು ಜನರ ನಿಖರವಾದ ಸಮಸ್ಯೆಗಳನ್ನು ತಿಳಿದುಕೊಂಡು ಪರಿಹಾರ ನೀಡಲು ಪ್ರಯತ್ನಿಸಬೇಕು. ಅನುದಾನಕೋಸ್ಕರ ಸ್ವಯಂಸೇವಾ ಸಂಸ್ಥೆಗಳು ಕೆಲಸ ಮಾಡಬಾರದು ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ಮಾತನಾಡಿ, ಸರ್ಕಾರ ತಾಯಿ ಸ್ಥಾನದಲ್ಲಿ ನಿಂತು ಮಾಡುವ ಕೆಲಸವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ಕೊಟ್ಟಿದೆ. ಆ ನಂಬಿಕೆಯನ್ನು ಉಳಿಸಿಕೊಂಡು ಕೆಲಸ ಮಾಡಬೇಕು. ಸರ್ಕಾರದ ಬುಡಕಟ್ಟು ಜನರ ಮಕ್ಕಳು ಸ್ವಾವಲಂಬಿಗಳಾಗಲು ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡುವುದರೊಂದಿಗೆ ಸ್ಕಾಲರ್ ಶಿಪ್, ವಿದೇಶದಲ್ಲಿ ಓದಲು ಆರ್ಥಿಕ ಸಹಾಯ ನೀಡುತ್ತಿದೆ. ನಮ್ಮ ಸಂಸ್ಥೆ ಬುಡ ಕಟ್ಟು ಜನರ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ನಿಮ್ಮ ಅನಿಸಿಕೆಗಳನ್ನು ಸರ್ಕಾರಕ್ಕೆ ತಲುಪಿಸುತ್ತೇವೆ. ನಿಮ್ಮ ಆಲೋಚನೆಗಳು ಉತ್ತಮವಾಗಿರಲಿ ಎಂದು ಸಲಹೆ ನೀಡಿದರು.


ಕಾರ್ಯಕ್ರಮದಲ್ಲಿ ಡಾ. ಕೃಷ್ಣಮೂರ್ತಿ ಕೆ.ವಿ., ಸಂಶೋಧನಾ ತನಿಖಾಧಿಕಾರಿ ಡಾ.ಮಂಜುನಾಥ್ ಬಿ.ಆರ್., ಡಾ.ಮೋಹನ್‌ಕುಮಾರ್, ಡಾ.ಮಾದೇಗೌಡ ಸಿ., ಡಾ.ಕಲಾವತಿ, ಡಾ.ರವಿಕುಮಾರ್, ವೇಣುಕಾಂತ ಎಂ.ಸಿ., ಪ್ರಸನ್ನಕುಮಾರ್, ರಮೇಶ್ ಕೆ., ಪುಷ್ಪಲತಾ, ಮನೋಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಾ.13ರಿಂದ ವಿಷನ್ ಮೈಸೂರು–2050

ಮೈಸೂರು: ಮುಂದಿನ 25 ವರ್ಷಗಳ ಕಾಲಕ್ಕೆ ಸೂಕ್ತವಾಗುವಂತೆ ಮೈಸೂರಿನ ಅಭಿವೃದ್ಧಿ ಕುರಿತ ಕಾರ್ಯತಂತ್ರಗಳ ನೀಲನಕ್ಷೆ ಯನ್ನು ರೂಪಿಸಲು, ಮೈಸೂ ರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸ್‌ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್ ಮೆಂಟ್ ಸಂಸ್ಥೆ ಹಾಗೂ ಇತರ ಸಂಘ ಸಂಸ್ಥೆಗಳ ವತಿಯಿಂದ ಮಾ.13 ರಿಂದ 15ರವರೆಗೆ 'ವಿಶನ್ ಮೈಸೂರು–2050' ಕಾರ್ಯಕ್ರಮವನ್ನು ಸಿದ್ದಾರ್ಥನಗರ ದಲ್ಲಿರುವ ಸಂಸ್ಥೆಯಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಕಾಲೇಜು ವಿದ್ಯಾರ್ಥಿ ಗಳು, ಕಾರ್ಪೋರೇಟ್ ಮತ್ತು ಇಂಡಸ್ಟ್ರೀಗಳ ನಾಯಕರು, ಎನ್‌ಜಿಒಗಳು ಹಾಗೂ ಸಾರ್ವಜನಿಕರು ಭಾಗವಹಿ ಸಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ 0821–2429722, 2420490 ಗೆ ಸಂಪರ್ಕಿಸಬಹುದು ಎಂದು ಎಸ್‌ಡಿಎಂ ಇನ್ಸ್‌ಟಿಟ್ಯೂಟ್ ಫಾರ್ ಮ್ಯಾನೇಜ್ ಮೆಂಟ್ ಡೆವಲಪ್‌ಮೆಂಟ್‌ನ ಸಾರ್ವಜನಿಕ ಸಂಪರ್ಕ ಅಧಿಕಾರಿ ಗೌರಿ ಎಸ್.ಜೋಶಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಷನ್ ಮೈಸೂರು–2050ಕ್ಕೆ ವೀರೇಂದ್ರ ಹೆಗ್ಗಡೆ ರಾಯಭಾರಿ



ಮೈಸೂರು: ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸ್‌ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಕಾಲೇಜಿನ ವತಿಯಿಂದ ಮೈಸೂರು ನಗರ ಮುಂದಿನ 25 ವರ್ಷದಲ್ಲಿ ಹೇಗಿರಬೇಕು ಎಂಬುದರ ಬಗ್ಗೆ ಚರ್ಚಿಸಲು ರೂಪಿಸಿರುವ 'ವಿಷನ್ ಮೈಸೂರು–2050'ಗೆ ಶ್ರೀಧರ್ಮಸ್ಥಳದ ಧರ್ಮಾಧಿಕಾರಿ, ಎಸ್‌ಡಿಎಂ ಎಜ್ಯುಕೇಷನಲ್ ಟ್ರಸ್ಟ್ ಅಧ್ಯಕ್ಷರಾದ ಡಾ.ವೀರೇಂದ್ರಹೆಗ್ಗಡೆ ರಾಯಭಾರಿಯಾಗಿದ್ದಾರೆ.

ಮಕ್ಕಳನ್ನು ಪ್ರಜ್ಞಾವಂತರನ್ನಾಗಿ ಮಾಡಿ



ಭವಿಷ್ಯತ್ ಪಬ್ಲಿಕ್ ಶಾಲೆಯಲ್ಲಿ ನಡೆದ ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಸಂಶೋಧಕ ಡಾ.ಹುಲಿಕಲ್ ನಟರಾಜು ಭಾಗವಹಿಸಿ ಮಕ್ಕಳಿಂದ ಮಾಹಿತಿ ಪಡೆದರು.

ಪಾಂಡವಪುರ, ಮಾ.1– ಮಕ್ಕಳನ್ನು ವಿದ್ಯಾವಂತ, ಬುದ್ಧಿವಂತರನ್ನಾಗಿ ಮಾಡುವುದಕ್ಕಿಂತ ಪ್ರಜ್ಞಾವಂತರನ್ನಾಗಿ ಮಾಡುವುದು ಬಹಳ ಮುಖ್ಯ ಎಂದು ಸಂಶೋಧಕ ಡಾ.ಹುಲಿಕಲ್ ನಟರಾಜು ತಿಳಿಸಿದರು.

ಪಟ್ಟಣದ ಭವಿಷ್ಯತ್ ಪಬ್ಲಿಕ್ ಶಾಲೆಯಲ್ಲಿ ನಡೆದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಮೂಢನಂಬಿಕೆಗಳ ಬಗ್ಗೆ ಅರಿವು ಮೂಡಿಸಿ ಮಾತನಾಡಿದರು.

ವಿಜ್ಞಾನ, ತಂತ್ರಜ್ಞಾನ ಬಹಳ ವೇಗವಾಗಿ ಬೆಳೆಯುತ್ತಿದೆ ಅದಕ್ಕೆ ಹೊಂದಿಕೊಂಡು ಮಕ್ಕಳೂ ಸಹ ಅಪ್‌ಡೇಟ್ ಆಗುತ್ತಿರುವುದು ಒಂದಡೆಯಾದರೆ ಮಕ್ಕಳು ಮಾನಸಿಕ ಸ್ಥಿಮಿತ ಕಳೆದುಕೊಂಡು ಖಿನ್ನತೆಗೆ ಒಳಗಾಗುತ್ತಿದ್ದಾರೆ, ಸಾಧ್ಯವಾದಷ್ಟು ಮಕ್ಕಳನ್ನು ಮೊಬೈಲ್, ವ್ಯಾಟ್ಸಾಪ್ ಚಾಟಿಂಗ್, ಟಿವಿ, ಧಾರಾವಾಹಿಗಳಿಂದ ದೂರ ಇಟ್ಟು ಮಕ್ಕಳನ್ನು ಸಂಶೋಧನೆ, ಭಾಗವಹಿಸುವಿಕೆ, ಮಾಹಿತಿ ಸಂಗ್ರಹದ ಕಡೆಗೆ ಗಮನಹರಿಸುವಂತೆ ಮಾಡಬೇಕು, ಇದರಿಂದ ಮಕ್ಕಳ ಜ್ಞಾನವು ಬೆಳೆಯುತ್ತದೆ ವಿದ್ಯಾವಂತ, ಬುದ್ಧಿವಂತಿಕೆಗಿಂತ ಪ್ರಜ್ಞಾವಂತಿಕೆ ಬಹಳ ಮುಖ್ಯವಾಗುತ್ತದೆ ಎಂದು ಸಲಹೆ ನೀಡಿದರು.

ವಿಜ್ಞಾನ ಬೆಳೆದಂತೆಲ್ಲ ವಿಜ್ಞಾನವನ್ನೇ ಮರೆಮಾಚಿ ಮೌಢ್ಯಾಚರಣೆಗಳಿಂದ ಜನರಿಗೆ ಮೋಸ ಮಾಡುವ ಆಂತರಿಕ ಭಯೋತ್ಪಾದಕರು ಸಮಾಜದಲ್ಲಿದ್ದಾರೆ. ದೇವರಿಗೆ ಮೋಸ ಮಾಡುವ ಜನರಿದ್ದಾರೆ, ಇವರ ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕು, ಪೋಷಕರು, ಮಕ್ಕಳು ಮೂಢನಂಬಿಕೆ, ಮೌಢ್ಯಾಚರಣೆಗಳಿಗೆ ಹೆಚ್ಚು ಒಳಗಾಗಬಾರದು, ಪಂಚಾಂಗ, ಜ್ಯೋತಿಷಿಗಳು, ಡೋಂಗಿ ಮಂತ್ರವಾದಿಗಳಿಂದ ದೂರವಿರಬೇಕು. ಪಂಚಾಂಗ ಬಿಸಾಕಿ ಮನಸ್ಸಿನ ಪಂಚ ಅಂಗಗಳ ಬಗ್ಗೆ ಜಾಗೃತರಾಗಬೇಕು, ಮನೆ ವಾಸ್ತು ಬಿಟ್ಟು ಮನಸ್ಸಿನ ವಾಸ್ತುವನ್ನು ಗಟ್ಟಿಗೊಳಿಸಿಕೊಳ್ಳಬೇಕು, ಮನುಷ್ಯ ಹುಟ್ಟುವಾಗ ಉಸಿರು ಇರುತ್ತದೆ ಹೆಸರು ಇರೋದಿಲ್ಲ ಅದೇ ಮನುಷ್ಯ ಸತ್ತಾಗ ಹೆಸರು ಇರುತ್ತದೆ ಉಸಿರು ಇರೋದಿಲ್ಲ. ಇವುಗಳ ಮಧ್ಯ ಸಮಾಜದ ಸುಸ್ಥಿರತೆ ಕಾಪಾಡಿಕೊಳ್ಳುವ ಕಡೆಗೆ ಮುಂದಾಗಬೇಕು ಎಂದರು.

ಶಾಲಾ ಆವರಣದಲ್ಲಿ ನಡೆದ ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನವನ್ನು ವೀಕ್ಷಣೆ ಮಾಡಿ ಮಕ್ಕಳಿಂದ ಮಾಹಿತಿ ಪಡೆದರು. ಕಾರ್ಯಕ್ರಮದಲ್ಲಿ ಸಂಸ್ಥೆ ಅಧ್ಯಕ್ಷೆ ಹಾಗೂ ಪ್ರಾಂಶುಪಾಲೆ ಮಾನಸ, ಸಂಸ್ಥೆ ಕಾರ್ಯದರ್ಶಿ ಅನಿಲ್, ಆಡಳಿತಾಧಿಕಾರಿ ರಕ್ಷಿತ, ಸಲಹೆಗಾರ ನಾರಾಯಣ ಗೌಡ, ನಿವೃತ್ತ ಶಿಕ್ಷಣಾಧಿಕಾರಿ ಜೈಪ್ರಕಾಶ್, ಉಪ ಪ್ರಾಂಶುಪಾಲೆ ಲೀನ್, ಕೋಟಿನೆಟರ್ ಚಂದ್ರಕಲಾ ಸೇರಿದಂತೆ ಶಿಕ್ಷಕರು ಸಿಬ್ಬಂದಿಗಳು ಹಾಜರಿದ್ದರು.

ಧರ್ಮ–ಧರ್ಮಗಳ ನಡುವೆ ಕ್ಷುಲ್ಲಕ ಕಾರಣಕ್ಕೆ ಹೋರಾಟ

ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶಗೌಡ ವಿಷಾದ



ಭರತನಾಟ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ಗಣ್ಯರು ವಿತರಿಸಿದರು.

ಮಂಡ್ಯ, ಮಾ.1– ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟವಾಗಿತ್ತು. ಆದರೆ, ಇಂದು ಜಾತಿ–ಜಾತಿ ಮತ್ತು ಧರ್ಮ–ಧರ್ಮಗಳ ನಡುವೆ ಕ್ಷುಲ್ಲಕ ವಿಷಯಗಳಿಗೆ ಹೋರಾಟ ನಡೆಯುತ್ತಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶಗೌಡ ವಿಷಾದ ವ್ಯಕ್ತಪಡಿಸಿದ್ದಾರೆ.

ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಗುರುದೇವ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ವತಿಯಿಂದ ನಡೆದ ಸಾಧಕ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಣೆ ಘಟಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಮನುಷ್ಯ ಒತ್ತಡ ಸಿಲುಕಿ, ಕೇವಲ ಕ್ಷುಲ್ಲಕ ವಿಷಯಗಳಿಗೆ ಆದ್ಯತೆ ಕೊಟ್ಟು, ಗಲಾಟೆ, ಹೋರಾಟಗಳಿಗೆ ಆಸ್ಪದವಾಗುತ್ತಿದೆ ಎಂದರು.

ಸಂಗೀತ, ಸಾಹಿತ್ಯ ಮನುಷ್ಯನ ಮನಸ್ಸಿಗೆ ಮುದ ನೀಡುವುದರ ಜತೆಗೆ ಆತನನ್ನು ಪ್ರಫುಲ್ಲನನ್ನಾಗಿಸುತ್ತದೆ. ಆದ್ದರಿಂದ ಪೋಷಕರು ತಮ್ಮ ಮಕ್ಕಳಿಗೆ ಸಂಗೀತ, ನೃತ್ಯ ಹಾಗೂ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಬೇಕು. ಇದು ಅವರ ವಿದ್ಯಾಭ್ಯಾಸಕ್ಕೂ ಅನುಕೂಲವಾಗಲಿದೆ ಎಂದು ತಿಳಿ ಹೇಳಿದರು.

ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಹಾಯಕ ಪ್ರಾಧ್ಯಾಪಕಿ ಡಾ.ಪಿ.ಮಾನಸ ಮಾತನಾಡಿ, ಮಕ್ಕಳು ಗುರುಗಳನ್ನು ಅನುಸರಿಸಿದರೆ ಶಿಸ್ತು ಬರುತ್ತದೆ. ಪೋಷಕರು ತಮ್ಮ ಮಕ್ಕಳಿಗೆ ವಿದ್ಯೆಯ ಜತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಭಾಗವಹಿಸುವಂತೆ ಪ್ರೋತ್ಸಾಹ ಮತ್ತು ಸ್ಫೂರ್ತಿ ತುಂಬಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭ ಜೂನಿಯರ್, ಸೀನಿಯರ್, ಪ್ರೀ ವಿದ್ವತ್ ಹಾಗೂ ವಿದ್ವತ್ ಭರತನಾಟ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ಗಣ್ಯರು ವಿತರಿಸಿದರು. ಗುರುದೇವ ಅಕಾಡೆಮಿಯ ಆರಂಭಿಕ ಹಂತದ ವಿದ್ಯಾರ್ಥಿಗಳು ಭರತನಾಟ್ಯ ಪ್ರದರ್ಶಿಸಿಸಿದರು.

ಗುರುದೇವ ಅಕಾಡೆಮಿಯ ವಿದುಷಿ ಡಾ. ಚೇತನ ರಾಧಾಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಕಲಾವಿದ ಎಂ.ಎಲ್.ರಾಜನ್, ಬೆಂಗಳೂರು ಮನೋಜ್ಞ ನೃತ್ಯ ಕಲಾ ಅಕಾಡೆಮಿ ವ್ಯವಸ್ಥಾಪಕ ನಿರ್ದೇಶಕ ಮನು ಮೋಹನ್, ಲಾಸ್ಯಾಂಗ ನೃತ್ಯಾಲಯ ನಿರ್ದೇಶಕಿ ವಿದುಷಿ ಸಿಂಧುರಾವ್ ಭಾಗವಹಿಸಿದ್ದರು.

ಎಸ್‌ಟಿಜಿ ಶಾಲೆಯಲ್ಲಿ ಅತ್ಯಾಕರ್ಷಕ ವಿಜ್ಞಾನ ವಸ್ತುಪ್ರದರ್ಶನ

ಚಿನಕುರಳಿ: ಚಿನಕುರಳಿಯ ಎಸ್‌ಟಿಜಿ ಶಾಲೆಯಲ್ಲಿ ಶನಿವಾರ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ "ವಿಜ್ಞಾನ ವಸ್ತು ಪ್ರದರ್ಶನ" ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿಜ್ಞಾನ, ಗಣಿತ ಹಾಗೂ ಸಮಾಜಕ್ಕೆ ಸಂಬಂಧಿಸಿದ ವಸ್ತುಗಳ ಅತ್ಯಾಕರ್ಷಕ ಮಾದರಿಯನ್ನು ತಯಾರಿಸಿ, ಅವುಗಳ ವಿವರಣೆಯನ್ನು ನೀಡುವುದರ ಮೂಲಕ ವಸ್ತು ಪ್ರದರ್ಶನಕ್ಕೆ ಆಗಮಿಸಿದ್ದ ಮುಖ್ಯ ಅತಿಥಿಗಳು ಹಾಗೂ ಪೋಷಕರ ಗಮನ ಸೆಳೆದರು.



ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪಾಂಡವಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ನಿವೃತ್ತ ಉಪ ಪ್ರಾಂಶುಪಾಲರಾದ ತಿಮ್ಮೇಗೌಡ.ಡಿ ಮಾತನಾಡಿ, ಎಸ್‌ಟಿಜಿ ಶಾಲೆಯಲ್ಲಿ ವಿಜ್ಞಾನ ವಸ್ತುಪ್ರದರ್ಶನವನ್ನು ಏರ್ಪಡಿಸಿರುವುದು ನಿಜಕ್ಕೂ ಶ್ಲಾಘನೀಯ ಅದರಲ್ಲೂ ಈ ಕಾರ್ಯಕ್ರಮಕ್ಕೆ ನಾನು ಮುಖ್ಯ ಅತಿಥಿಯಾಗಿ ಬಂದಿರುವುದು ನನ್ನ ಸೌಭಾಗ್ಯ ಎಂದರು.

ಈ ವಸ್ತು ಪ್ರದರ್ಶನವನ್ನು ನೋಡುತ್ತಿದ್ದರೆ ಇದು ಜಿಲ್ಲಾ ಮಟ್ಟದ ವಸ್ತು ಪ್ರದರ್ಶನದ ರೀತಿ ಮಕ್ಕಳು ವಸ್ತುಗಳನ್ನು ತಯಾರಿಸಿದ್ದಾರೆ. ಅದಲ್ಲದೆ ಅವರ ವಿವರಣೆ ನಿಜವಾಗಲೂ ಪ್ರಶಂಸನೀಯವಾಗಿತ್ತು. ನನಗೆ ವಿದ್ಯಾರ್ಥಿಗಳು ಬಾಲ ವಿಜ್ಞಾನಿಗಳ ಹಾಗೆ ಕಾಣಿಸುತ್ತಿದ್ದರು ಎಂದು ಶಾಲೆ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ತಮ್ಮ ಅನುಭವವನ್ನು ಹಂಚಿಕೊಂಡರು.

ಈ ವಸ್ತು ಪ್ರದರ್ಶನಕ್ಕೆ ಸಾವಿರಾರು ಸಂಖ್ಯೆಯಲ್ಲಿ ಪೋಷಕರು ಆಗಮಿಸಿ ಎಸ್‌ಟಿಜಿ ಶಾಲೆಯಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ ಒಂದು ಹಬ್ಬದ ರೀತಿ ಇರುತ್ತದೆ. ಹಾಗೂ ತುಂಬಾ ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ ನಡೆಸುತ್ತಾರೆ. ಈ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ನಮ್ಮ ಮಕ್ಕಳು ಭಾಗವಹಿಸಿ ತಮ್ಮ ಪ್ರತಿಭೆ ಹಾಗೂ ಜ್ಞಾನವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಮ್ಮ ಮಕ್ಕಳು ಎಸ್ ಟಿ ಜಿ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಸುತ್ತಿರುವುದು ನಮಗೆ ಹೆಮ್ಮೆ ಎನಿಸುತ್ತದೆ. ನಮ್ಮ ಮಕ್ಕಳ ಉತ್ತಮ ಭವಿಷ್ಯ ನಮಗೆ ಈಗಲೇ ಕಾಣಿಸುತ್ತಿದೆ. ಎಂದು ಸಂಸ್ಥೆಯ ಸಂಸ್ಥಾಪಕರು, ಸಿಇಓ ಹಾಗೂ ಸಿಬ್ಬಂದಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀಮತಿ ಮಾಚಮ್ಮ, ಆಡಳಿತಾಧಿಕಾರಿ ಶ್ರೀಮತಿ ನಿವೇದಿತಾ ನಾಗೇಶ್, ಉಪ ಪ್ರಾಂಶುಪಾಲರಾದ ಶ್ರೀ ಲಿಂಗರಾಜು, ಸಿಬ್ಬಂದಿ ವರ್ಗ, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಜನಸಾಮಾನ್ಯರ ಜೇಬಿಗೆ ಕತ್ತರಿ : ಕುಮಾರಸ್ವಾಮಿ

ಶ್ರೀರಂಗಪಟ್ಟಣ: ರಾಜ್ಯ ಸರ್ಕಾರವು ಅಗತ್ಯ ಸೇವೆಗಳ ಮೇಲೆ ವಿಪರೀತ ತೆರಿಗೆ ವಸೂಲಿ ಮಾಡಿ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುವ ಮೂಲಕ ಆಘಾತವನ್ನೇ ನೀಡುತ್ತಿದೆ. ಎಂದು ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಪಾಲಹಳ್ಳಿಯಲ್ಲಿ ಶನಿವಾರ ನಡೆದ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ದೇವಸ್ಥಾನದ ಸಮುದಾಯ ಭವನವನ್ನು ಉದ್ಘಾಟಿಸಿ, ನಿಮಗೆ ಕೇವಲ 2 ಸಾವಿರ ನೀಡುತ್ತಿದ್ದಾರೆ. ಒಂದು ವೇಳೆ ನಾನು ಇಷ್ಟೊಂದು ತೆರಿಗೆ ವಸೂಲಿ ಮಾಡಿದ್ದರೆ, ಪ್ರತಿಯೊಬ್ಬರಿಗೂ ತಲಾ 5 ಸಾವಿರ ರೂ. ನೀಡುತ್ತಿದ್ದೆ, ಎಂದು ಹೇಳಿದರು.

ಈಗಾಗಲೇ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ 10 ಲಕ್ಷ ರೂ.ಗಳ ಧನಸಹಾಯ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಅಗತ್ಯ ಬಿದ್ದರೆ ಮತ್ತೆ 10 ಲಕ್ಷ ರೂಪಾಯಿ ನೀಡುವುದಾಗಿ ಅವರು ಭರವಸೆ ನೀಡಿದರು.

ತಾವು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರೈತರ ಹಿತರಕ್ಷಣೆಗೆ ನೀಡಿದ ಆದ್ಯತೆಯನ್ನು ಸ್ಮರಿಸಿ ಅಂದು ಸುಮಾರು 25 ಸಾವಿರ ಕೋಟಿ ರೂ.ಗಳ ರೈತರ ಸಾಲವನ್ನು ಮನ್ನಾ ಮಾಡುವ ಮೂಲಕ ಅನ್ನದಾತನ ಸಂಕಷ್ಟಕ್ಕೆ ಸ್ಪಂದಿಸಿದ್ದೆವು. ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದ ರೈತರ ಮನೆಗಳಿಗೆ ಖುದ್ದಾಗಿ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿ ನೈತಿಕ ಸ್ಥೈರ್ಯ ತುಂಬುವ ಕೆಲಸ ಮಾಡಿದ್ದೆವು. ಆದರೆ ಇಂದಿನ ಸರ್ಕಾರದ ನೀತಿಗಳು ಜನಸಾಮಾನ್ಯರಿಗೆ ಹೊರೆಯಾಗುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಾರ್ಯಕ್ರಮಕ್ಕೂ ಮುನ್ನ ಸಚಿವ ಕುಮಾರಸ್ವಾಮಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.



ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ದೇವಸ್ಥಾನಕ್ಕೆ ಕುಮಾರಸ್ವಾಮಿ ಭೇಟಿ ನೀಡಿದ್ದರು.

ವಾಹನ ಕಳ್ಳರ ಬಂಧನ; 6 ಬೈಕ್ ವಶ



ಶ್ರೀರಂಗಪಟ್ಟಣ, ಮಾ.1– ಪಟ್ಟಣದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಶ್ರೀರಂಗಪಟ್ಟಣ ಟೌನ್ ಪೊಲೀಸರು ಬಂಧಿಸಿ ಆರು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನ ಶಾಂತಿನಗರ ನಿವಾಸಿಗಳಾದ ಮೊಹಮ್ಮದ್ ಯಾಸೀನ್ ಮತ್ತು ಶಾಹೀಲ್ ಖಾನ್ ಬಂಧಿತ ಆರೋಪಿಗಳು. ಫೆ.3ರಂದು ಕಮಲ್ಯಾ ವಿಹಾರ್ ಬಡಾವಣೆಯ ಶ್ರೀನಿವಾಸ ಮತ್ತು ಗಂಜಾಂನ ಅಜೀಜ್ ಖಾನ್ ಎಂಬುವರು ತಮ್ಮ ವಾಹನ ಕಳ್ಳತನವಾಗಿರುವ ಬಗ್ಗೆ ದೂರು ನೀಡಿದ್ದರು. ಎಸ್‌ಪಿ ಶೋಭಾರಾಣಿ, ಎಎಸ್ಪಿಗಳಾದ ಸಿ.ವಿ.ತಿಮ್ಮಯ್ಯ, ಗಂಗಾಧರಸ್ವಾಮಿ, ಡಿವೈಎಸ್‌ಪಿ ಯು.ಡಿ.ಕೃಷ್ಣಕುಮಾರ್ ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಶ್ರೀರಂಗಪಟ್ಟಣ ಇನ್ಸ್‌ಪೆಕ್ಟರ್ ಕುಮಾರ ನೇತೃತ್ವದಲ್ಲಿ ಎಸ್‌ಐಗಳಾದ ಜನಾಬಾಯಿ ಕಡಪಟ್ಟಿ, ಗಂಗಾಧರ ಎಸ್.ಬಿ. ಮತ್ತು ಸಿಬ್ಬಂದಿ ಫೆ.21 ರಂದು ಆರೋಪಿಗಳನ್ನು ದಸ್ತಗಿರಿ ಮಾಡಿದೆ. ವಿಚಾರಣೆ ವೇಳೆ ಆರೋಪಿಗಳು ಶೋಕಿ, ವೀಲ್ಹಿಂಗ್ ಹಾಗೂ ಹಣಕ್ಕಾಗಿ ಶ್ರೀರಂಗಪಟ್ಟಣದ ಕಮಲ್ಯಾ ವಿಹಾರ ಮತ್ತು ಗಂಜಾಂನಲ್ಲಿ ತಲಾ 2, ಮೈಸೂರಿನ ಮೆಲ್ಲಹಳ್ಳಿಯಲ್ಲಿ 1 ಹಾಗೂ ಹುಣಸೂರಿನಲ್ಲಿ 1 ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪುಟ್ಟಸ್ವಾಮಿ ನಿಧನ



ಶ್ರೀರಂಗಪಟ್ಟಣ: ತಾಲೂಕಿನ ನಗುವಿನಹಳ್ಳಿ ಗ್ರಾಮದ ನಿವಾಸಿ ಪುಟ್ಟಸ್ವಾಮಿ(85) ಭಾನುವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ನಗುವಿನ ಹಳ್ಳಿಯ ನದಿ ಬಳಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಇರಾನ್ ಪರಮೋಚ್ಛ ನಾಯಕ ಖಮೇನಿ ಸಾವು

ಇರಾನ್ ಕ್ಷಿಪಣಿ ದಾಳಿ: ಖಮೇನಿ ಹತ್ಯೆ ಬಳಿಕವೂ ಇರಾನ್, ಇಸ್ರೇಲ್ ಹಾಗೂ ಗಲ್ಫ್ ಅರಬ್ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ದಾಳಿ ನಡೆಸಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸದಂತೆ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಒಂದು ವೇಳೆ ದಾಳಿ ಮಾಡಿದರೆ, ನಾವು ಹಿಂದೆಂದೂ ಕಂಡಿರದ ಬಲದೊಂದಿಗೆ ಪ್ರತ್ಯುತ್ತರ ನೀಡುತ್ತೇವೆ ಎಂದು ಗುಡುಗಿದ್ದಾರೆ.

ತುರ್ತು ಪರಿಸ್ಥಿತಿ ಘೋಷಣೆ: ಅಮೆರಿಕ ಮತ್ತು ಇಸ್ರೇಲ್ ಸೇನಾದಾಳಿಯಲ್ಲಿ ಖಮೇನಿ ಹತರಾದ ಬೆನ್ನಲ್ಲೇ ಇರಾನ್‌ನಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮಾಡಿ, ಶೋಕಾಚರಣೆಗೆ ಸ್ಥಳೀಯ ಆಡಳಿತ ಆದೇಶ ನೀಡಿದೆ. ತೀವ್ರ ದುಃಖದಿಂದ, ಇರಾನ್‌ನ ಉದಾತ್ತ ಜನರಿಗೆ ಮತ್ತು ಇಡೀ ಮುಸ್ಲಿಂ ಜಗತ್ತಿಗೆ ನಾವು ನಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತೇವೆ. ಆಘಾತಕಾರಿ ಆಕ್ರಮಣಕಾರಿ ಕೃತ್ಯದಲ್ಲಿ ಖಮೇನಿ ಕೊಲ್ಲಲ್ಪಟ್ಟ ನಂತರ ಸರ್ಕಾರವು ಮೂರು ದಿನಗಳ ಶೋಕಾಚರಣೆಯನ್ನು ಘೋಷಿಸಿದೆ ಎಂದು ಸರ್ಕಾರಿ ವಕ್ತಾರ ಬಾಸ್ಸೆಮ್ ಅಲ್–ಅವಾದಿ ತಿಳಿಸಿದ್ದಾರೆ. ಖಮೇನಿ ಹತ್ಯೆ ವಿರೋಧಿಸಿ ಬೃಹತ್ ಪರೇಡ್ ನಡೆಸಲಾಗುತ್ತಿದ್ದು, ಲಕ್ಷಾಂತರ ಇರಾನ್ ಪ್ರಜೆಗಳು ಬೀದಿಗಿಳಿದು ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದಾರೆ. ಮತ್ತೊಂದೆಡೆ ಅಚ್ಚರಿ ಎಂಬಂತೆ ಕೆಲ ನಾಗರೀಕರು ಪ್ರಮುಖವಾಗಿ ಯುವ ಮಹಿಳೆಯರು ಸಂಭ್ರಮಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ವೀಡಿಯೊ ಬಿಡುಗಡೆ: ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ 'ಆಪರೇಷನ್ ಎಪಿಕ್ ಫ್ಯೂರಿ' ಕಾರ್ಯಾಚರಣೆಯ ಮೊದಲ 24 ಗಂಟೆಗಳ ಘಟನೆಗಳ ಟೈಮ್‌ಲೈನ್ ಅನ್ನು ಇದೀಗ ಅಮೆರಿಕದ ರಕ್ಷಣಾ ಪಡೆ ಯುಎಸ್ ಸೆಂಟ್ರಲ್ ಕಮಾಂಡ್ ಭಾನುವಾರ ಅಧಿಕೃತ ಎಕ್ಸ್ ಖಾತೆಯಲ್ಲಿ ಬೆಳಗ್ಗೆ ಬಿಡುಗಡೆಗೊಳಿಸಿದೆ. ಒಂದು ವೀಡಿಯೊದಲ್ಲಿ ಅಮೆರಿಕದ ಸೈನಿಕರು ಯುದ್ಧಕ್ಕೆ ಸನ್ನದ್ಧವಾಗಿರುವ ಫೋಟೋಗಳಿದ್ದು ಮತ್ತೊಂದು ವೀಡಿಯೊದಲ್ಲಿ ಅಮೆರಿಕದ ಕ್ಷಿಪಣಿ ದಾಳಿಯ ಭೀಕರ ದೃಶ್ಯಗಳಿವೆ.

ಟೆಹ್ರಾನ್ ಕಾಲಮಾನದಲ್ಲಿ ಶನಿವಾರ(ಫೆ.28) ಬೆಳಗ್ಗೆ 9.30ರ ವೇಳೆಗೆ ಅಮೆರಿಕ ಮತ್ತು ಇಸ್ರೇಲ್ ಪಡೆಗಳಿಂದ ಇರಾನ್ ಮೇಲೆ ಏಕಕಾಲದಲ್ಲಿ ವೈಮಾನಿಕ ದಾಳಿ ಆರಂಭಿಸಿದ್ದು, ಟೆಹ್ರಾನ್ ಸೇರಿದಂತೆ ಇರಾನ್‌ನ ಪ್ರಮುಖ ನಗರಗಳಲ್ಲಿ ಸ್ಫೋಟದ ಸದ್ದು ಕೇಳಿಸಿದೆ. ಬೆಳಗ್ಗೆ 10ಕ್ಕೆ ಇರಾನ್‌ನ ಪರಮೋಚ್ಛ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ನಿವಾಸ ಮತ್ತು ಕಚೇರಿಗಳನ್ನು ಗುರಿಯಾಗಿರಿಸಿ ನಡೆಸಿದ ದಾಳಿಯಲ್ಲಿ, ಖಮೇನಿ ಹತರಾಗಿದ್ದಾರೆ ಎಂದು ಘೋಷಿಸಲಾಗಿದೆ. ಮಧ್ಯಾಹ್ನ 12ಕ್ಕೆ ಇರಾನ್ ಮೇಲೆ ಪ್ರಮುಖ ಸಮರ ಕಾರ್ಯಾಚರಣೆ ಆರಂಭವಾಗಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಅಧಿಕೃತ ಘೋಷಣೆ ಮಾಡಿದ್ದು, ಮಧ್ಯಾಹ್ನ 2ಕ್ಕೆ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಕೇಂದ್ರಗಳು, ಕ್ಷಿಪಣಿ ಉಡಾವಣಾ ತಾಣಗಳು ಮತ್ತು ನೌಕಾಪಡೆ ನೆಲೆಗಳ ಮೇಲೆ ಸುಮಾರು 900ಕ್ಕೂ ಹೆಚ್ಚು ದಾಳಿ ನಡೆಸಲಾಗಿದೆ. ಭಾನುವಾರ (ಮಾ.1) ಮುಂಜಾನೆ 1ಕ್ಕೆ ಇರಾನ್ ಕಡೆಯಿಂದ ಪ್ರತಿದಾಳಿಯಾಗಿ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ನೂರಾರು ಕ್ಷಿಪಣಿಗಳ ಉಡಾವಣೆ ಮಾಡಿದೆ. ಮುಂಜಾನೆ 3ಕ್ಕೆ 'ಆಪರೇಷನ್ ಲಯನ್ಸ್ ರೋರ್' ಎಂದು ಹೆಸರಿಸಿದ್ದು, ಇರಾನ್‌ನ ಪ್ರಮುಖ ಸೇನಾ ನಾಯಕರು ಈ ದಾಳಿಯಲ್ಲಿ ಹತರಾಗಿದ್ದಾರೆಂದು ಇಸ್ರೇಲ್ ರಕ್ಷಣಾ ಇಲಾಖೆ ಖಚಿತಪಡಿಸಿದೆ. ಬೆಳಗ್ಗೆ 6ಕ್ಕೆ ಅಮೆರಿಕಾ ಸೆಂಟ್ರಲ್ ಕಮಾಂಡ್, ವಿಮಾನವಾಹಕ ನೌಕೆಗಳಿಂದ ಫೈಟರ್ ಜೆಟ್‌ಗಳು ಹಾರಾಟ ನಡೆಸುತ್ತಿರುವ ಮತ್ತು ಕ್ಷಿಪಣಿ ದಾಳಿ ಮಾಡುತ್ತಿರುವ ದೃಶ್ಯಗಳನ್ನು ಅನಾವರಣ ಮಾಡಿದೆ.

ವಿಶ್ವದ ಹಲವಡೆ ಆಕ್ರೋಶ: ಖಮೇನಿ ಹತ್ಯೆ ಹಿನ್ನೆಲೆಯಲ್ಲಿ ವಿಶ್ವದ ಹಲವೆಡೆ ಅಮೆರಿಕ ಹಾಗೂ ಇಸ್ರೇಲ್ ವಿರುದ್ಧ ಆಕ್ರೋಶ ಭುಗಿಲೆದ್ದಿದೆ. ಖಮೇನಿ ಹತ್ಯೆಯಿಂದ ಪಾಕಿಸ್ತಾನದಲ್ಲಿ ಶೋಕದ ವಾತವರಣ ಸೃಷ್ಟಿಯಾಗಿದೆ. ಅಲ್ಲಿನ ಕರಾಚಿಯಲ್ಲಿರುವ ಅಮೆರಿಕಾದ ರಾಯಭಾರ ಕಚೇರಿಗೆ ನುಗ್ಗಿ ಧ್ವಂಸ ಮಾಡಿದ್ದಾರೆ. ಹಿಂಸಾಚಾರದಲ್ಲಿ 10 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಹಿಂಸಾತ್ಮಕ ಪ್ರತಿಭಟನೆಗಳಲ್ಲಿ ನಡೆಸುತ್ತಿದ್ದಾರೆ. ಈ ಪ್ರತಿಭಟನೆಯಲ್ಲಿ ಕಟ್ಟಡ ಕೆಲ ಭಾಗಗಳಿಗೆ ಬೆಂಕಿ ಹಚ್ಚಿ ಸುಟ್ಟಿದ್ದಾರೆ. ಇತ್ತ ಭಾರತದ ಜಮ್ಮು–ಕಾಶ್ಮೀರದಲ್ಲೂ ಖಮೇನಿ ಹತ್ಯೆಯನ್ನು ಖಂಡಿಸಿ ಪ್ರತಿಭಟನೆಗಳು ನಡೆಯುತ್ತಿವೆ. ಇಲ್ಲಿನ ರಾಂಬನ್ ಜಿಲ್ಲೆಯಲ್ಲಿ ಶಿಯಾ ಸಮುದಾಯದ ನಾಯಕ ಸೈಯದ್ ಸಮರ್ ಕಜ್ಮಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಫೋಟೋಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇರಾಕ್ ರಾಜಧಾನಿ ಬಾಗ್ದಾದ್‌ನಲ್ಲಿರುವ ಯುಎಸ್ ರಾಯಭಾರ ಕಚೇರಿ ಬಳಿ ಪ್ರತಿಭಟನೆಗಳು ನಡೆಯುತ್ತಿವೆ.

ಸುರಕ್ಷಿತ ಸ್ವರ್ಗದಲ್ಲೂ ಆತಂಕ: ದಶಕಗಳಿಂದ ಮಧ್ಯಪ್ರಾಚ್ಯದ ಅಸ್ಥಿರತೆಯ ನಡುವೆಯೂ ಸುರಕ್ಷಿತ ಸ್ವರ್ಗ ಎಂದು ಕರೆಯಲ್ಪಡುತ್ತಿದ್ದ ದುಬೈ ನಗರ ಈಗ ಯುದ್ಧದ ರಣರಂಗವಾಗಿ ಮಾರ್ಪಟ್ಟಿದೆ. ಅಮೇರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಗೆ ಪ್ರತಿಯಾಗಿ ಇರಾನ್ ನಡೆಸಿದ ಆಕ್ರಮಣದಲ್ಲಿ ದುಬೈ ನಗರವನ್ನೇ ಗುರಿಯಾಗಿಸಿಕೊಂಡಿರುವುದು ಜಾಗತಿಕ ಸಮುದಾಯವನ್ನು ಬೆಚ್ಚಿಬೀಳಿಸಿದೆ. ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಪ್ರವಾಸಿ ತಾಣಗಳಾದ ಪಾಮ್ ಐಲ್ಯಾಂಡ್ ಹಾಗೂ ಬುರ್ಜ್ ಅಲ್ ಅರಬ್ ಮೇಲೆ ದಾಳಿ ಮಾಡುವ ಮೂಲಕ ಇರಾನ್ ಜಾಗತಿಕ ಆರ್ಥಿಕತೆಯ ಬೆನ್ನೆಲುಬನ್ನು ಮುರಿಯಲು ಯತ್ನಿಸಿದೆ. ತನ್ನ ನಾಯಕನ ಸಾವಿಗೆ ಕಾರಣವಾದ ಶಕ್ತಿಗಳು ಎಲ್ಲಿಂದ ಕಾರ್ಯಾಚರಣೆ ನಡೆಸಿದ್ದವೋ, ಅದೇ ಜಾಗದ ಮೇಲೆ ಇರಾನ್ ಈಗ ಕೆಂಡ ಕಾರುತ್ತಿದೆ. ದಾಳಿಯಿಂದಾಗಿ ದುಬೈ ವಿಮಾನ ನಿಲ್ದಾಣ ಸ್ಥಗಿತಗೊಂಡಿದ್ದು, ಸಾವಿರಾರು ಪ್ರವಾಸಿಗರು ಅತಂತ್ರರಾಗಿದ್ದಾರೆ. ಸದಾ ಪ್ರವಾಸಿಗರಿಂದ ಕಂಗೊಳಿಸುತ್ತಿದ್ದ ದುಬೈನ ರಸ್ತೆಗಳಲ್ಲಿ ಈಗ ಸೈರನ್ ಸದ್ದು ಮತ್ತು ಸ್ಫೋಟದ ಭೀತಿ ಆವರಿಸಿದೆ.

ಖಮೇನಿ ಹತ್ಯೆ ಬಗ್ಗೆ ಮೌನ ವಹಿಸದಂತೆ ಭಾರತಕ್ಕೆ ಆಗ್ರಹ

ನವದೆಹಲಿ: ಅಮೆರಿಕಾ ಹಾಗೂ ಇಸ್ರೇಲ್ ಜಂಟಿ ದಾಳಿ ನಡೆಸಿ, ಇರಾನ್‌ನ ಸರ್ವೋಚ್ಛ ನಾಯಕ ಖಮೇನಿ ಅವರನ್ನು ಹತ್ಯೆ ಮಾಡಿರುವ ವಿಚಾರವಾಗಿ ಮೌನವಹಿಸದಂತೆ ಇರಾನ್ ಭಾರತಕ್ಕೆ ಆಗ್ರಹಿಸಿದೆ. ಭಾರತದಲ್ಲಿರುವ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ರಾಯಭಾರ ಕಚೇರಿಯು, ಪ್ರಪಂಚದಾದ್ಯಂತದ ಸ್ವತಂತ್ರ ಮತ್ತು ಸ್ವಾತಂತ್ರ್ಯವನ್ನು ಬಯಸುವ ಸರ್ಕಾರಗಳಿಗೆ ಈ ಸ್ಪಷ್ಟ ಅಪರಾಧವನ್ನು ಬಲವಾಗಿ ಖಂಡಿಸಬೇಕು ಮತ್ತು ಕಾನೂನುಬಾಹಿರತೆ ಮತ್ತು ಆಕ್ರಮಣದ ಮುಂದೆ ಮೌನವಾಗಿರಬಾರದು ಎಂದು ಮನವಿ ಮಾಡಿದೆ.

ಚಿಕ್ಕಬಳ್ಳಾಪುರದ ಅಲಿಪುರದಲ್ಲೂ ಮಡುಗಟ್ಟಿದ ಶೋಕ

ಚಿಕ್ಕಬಳ್ಳಾಪುರ: ಇರಾನ್‌ನ ಸರ್ವೋಚ್ಛ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆ ಬೆನ್ನಲ್ಲೇ ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರಿನ ಅಲಿಪುರ ಗ್ರಾಮದಲ್ಲಿ ಶೋಕ ಮಡುಗಟ್ಟಿದೆ. ಹತ್ಯೆ ವಿಚಾರ ತಿಳಿಯುತ್ತಿದ್ದಂತೆ ಗ್ರಾಮಸ್ಥರು ಸ್ವಯಂಪ್ರೇರಿತವಾಗಿ ಅಂಗಡಿ ಮುಂಗ್ಗಟ್ಟುಗಳನ್ನು ಬಂದ್ ಮಾಡಿ, ಶೋಕಾಚರಣೆ ನಡೆಸಿದ್ದಾರೆ. ಶಿಯಾ ಸಮುದಾಯದ ಸಾವಿರಾರೂ ಜನ ಬೃಹತ್ ಶೋಕಾಚರಣೆ ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ. ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಈ ವೇಳೆ ಹಲವರು ಬಿಕ್ಕಿ ಬಿಕ್ಕಿ ಅತ್ತ ದೃಶ್ಯಗಳು ವೈರಲ್ ಆಗಿವೆ. ಚಿಕ್ಕಬಳ್ಳಾಪುರಕ್ಕೂ ದೂರದ ಇರಾನ್‌ಗೂ ಎತ್ತಣಿಂದೆತ್ತ ಸಂಬಂಧವೆಂದರೆ 1986ರಲ್ಲಿ ಅಯತೊಲ್ಲಾ ಅಲಿ ಖಮೇನಿ, ಅತೀ ಹೆಚ್ಚು ಶಿಯಾ ಮುಸ್ಲಿಮರಿರುವ ಈ ಗ್ರಾಮಕ್ಕೆ ಬಂದಿದ್ದರು. ಪ್ರಭಾವಿತರಾಗಿರುವ ಸಾವಿರಾರು ಜನ, ಖಮೇನಿ ಅವರನ್ನು ಧರ್ಮಗುರುವೆಂದು ಗೌರವಿಸುತ್ತಾರೆ. ಅಲಿಪುರವನ್ನು 'ಮಿನಿ ಇರಾನ್' ಎಂದೂ ಕರೆಯಲಾಗುತ್ತದೆ.

60 ಮಂದಿ ದುಬೈನಲ್ಲಿ ಅತಂತ್ರ

ಹೋಟೆಲ್ ನಲ್ಲಿ ವಾಸ್ತವ್ಯ ಹೂಡಿದ್ದೇವೆ. ಸದ್ಯಕ್ಕೆ ನಮಗೆ ಯಾವುದೇ ತೊಂದರೆ ಆಗಿಲ್ಲ, ಸುರಕ್ಷಿತವಾಗಿದ್ದೇವೆ ಎಂದರು.

ಇಲ್ಲಿನ ಕಾಲಮಾನ ಬೆಳಿಗ್ಗೆ 8.30 ಗಂಟೆಯಲ್ಲಿ ಅಮೇರಿಕಾದ ಮಿಸೈಲ್ ಇಲ್ಲಿನ ಏರ್ ಪೋರ್ಟ್ ಬಳಿ ಅಪ್ಪಳಿಸಿತು. ಅದರ ಘೋರ ಶಬ್ಧ ನಮಗೂ ಕೇಳಿಸಿತು. ನಾವು ಧೈರ್ಯದಿಂದ ಇದ್ದರೂ ಇಲ್ಲಿರುವ ಬಹಳಷ್ಟು ಜನರು ಭಯಭೀತರಾಗಿದ್ದಾರೆ ಎಂದು ಹೇಳಿದರು. ಯಾರೂ ರಸ್ತೆಗಿಳಿಯಬಾರದು, ಓಡಾಡುವಂತಿಲ್ಲ ಎಂದು ಇಲ್ಲಿನ ಸರ್ಕಾರ ಕಟ್ಟಾಜ್ಞೆ ಮಾಡಿದೆ. ಇದರಿಂದ ದುಬೈ ನಗರದಲ್ಲಿನ ರಸ್ತೆಗಳು ಬಿಕೋ ಎನ್ನುತ್ತಿವೆ. ನಮ್ಮಂತಹ ಪ್ರವಾಸಿಗರು ಹೋಟೆಲ್ ನಲ್ಲಿ ಉಳಿದಿದ್ದರೆ, ಸ್ಥಳಿಯ ಜನರ ಮನೆಯಿಂದ ಹೊರಗೆ ಬರುತ್ತಿಲ್ಲ ಎಂದು ಪುಷ್ಪ ಅಮರನಾಥ್ ಅವರು ಅಲ್ಲಿನ ಪರಿಸ್ಥಿತಿ ಬಗ್ಗೆ ವಿವರಿಸಿದರು.

ಮಿಸೈಲ್‌ಗಳು ಬೀಳುತ್ತಿರುವ ಹಿನ್ನೆಲೆಯಲ್ಲಿ ಆಗಾಗೆ ಮೊಬೈಲ್‌ನಲ್ಲಿ ಅಲರ್ಟ್ ಬರುತ್ತಿದೆ. ಯಾರೂ ಹೊರಗೆ ಬರಬೇಡಿ, ಬಚ್ಚಿಟ್ಟುಕೊಳ್ಳಿ ಎಂಬ ಸೂಚನೆಗಳು ಬರುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ಹೋಟೆಲ್ ನಲ್ಲಿರುವ ಬಹಳಷ್ಟು ಜನರು ಆತಂಕಗೊಂಡಿದ್ದಾರೆ ಎಂದರು.

ಭಾರತದ ರಾಯಭಾರ ಕಚೇರಿಯವರು ನಮ್ಮನ್ನು ಸಂಪರ್ಕಿಸಿದ್ದು, ಯಾರೂ ಭಯ ಪಡಬೇಡಿ ಎಂದು ಅಭಯ ನೀಡಿದ್ದಾರೆ. ಯುದ್ಧದ ಪರಿಸ್ಥಿತಿ ಶಾಂತವಾದ ಕೂಡಲೇ ಭಾರತಕ್ಕೆ ವಿಮಾನ ಸಂಚಾರ ಆರಂಭವಾಗುತ್ತದೆ. ಆ ವೇಳೆ ನಿಮಗೆ ಮಾಹಿತಿ ನೀಡಿ ನಿಮ್ಮನ್ನು ಇಲ್ಲಿಂದ ಸುರಕ್ಷಿತವಾಗಿ ಭಾರತಕ್ಕೆ ಕಳುಹಿಸುತ್ತೇವೆ ಎಂದು ಭರವಸೆ ನೀಡಿದ್ದಾರೆ ಎಂದು ಪುಷ್ಪ ಅಮರನಾಥ್ ಅವರು ತಿಳಿಸಿದರು.

ಪತ್ರಿಕೋದ್ಯಮಿ ವಿಜಯ ಸಂಕೇಶ್ವರ್ ಸೇರಿದಂತೆ 60 ಮಂದಿ ಒಂದೇ ಹೋಟೆಲ್ ನಲ್ಲಿ ಇದ್ದಾರೆ. ವಿಮಾನ ಸಂಚಾರ ಪುನಾರಂಭವಾಗುವ ತನಕ ಅವರೆಲ್ಲಾ ಅಲ್ಲೆ ಇರುವ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ.

ಹತ್ಯೆಗೆ ಸಿಎಂ ಸಿದ್ದರಾಮಯ್ಯ ಖಂಡನೆ

ಯುದ್ಧದ ಹಿನ್ನಲೆಯಲ್ಲಿ ತೊಂದರೆಗೆ ಸಿಲುಕಿರುವ ಕನ್ನಡಿಗರ ರಕ್ಷಣೆಗೆ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ. ಅರಬ್ ದೇಶಗಳಲ್ಲಿ ಸಿಲುಕಿರುವ ಬಳ್ಳಾರಿಯ 30 ಜನರನ್ನು ವಾಪಸ್ಸು ಕರೆತರಲಾಗುವುದು. ದುಬೈನಲ್ಲಿರುವ ಭಾರತೀಯರು ಸುರಕ್ಷಿತವಾಗಿದ್ದಾರೆ. ದುಬೈನಿಂದ ವಿಮಾನ ಹಾರಾಟ ಪುನಾರಂಭವಾದ ಕೂಡಲೇ ಅವರನ್ನು ಭಾರತಕ್ಕೆ ಸುರಕ್ಷಿತವಾಗಿ ಕರೆತರಲು ವ್ಯವಸ್ಥೆ ಮಾಡಲಾಗುವುದು. ಎಂಎಲ್‌ಸಿ ಭೋಜೇಗೌಡರು ದುಬೈದಲ್ಲಿದ್ದು, ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ ಹೋಟೆಲಿನಲ್ಲಿ ಸುರಕ್ಷಿತವಾಗಿರುವುದಾಗಿ ಹೇಳಿದರು ಎಂದರು.

ಸದ್ಯಕ್ಕೆ ವಿದ್ಯುತ್ ದರ ಏರಿಕೆ ಇಲ್ಲ: ಏಪ್ರಿಲ್‌ನಲ್ಲಿ ವಿದ್ಯುತ್ ದರ ಏರಿಕೆ ಪ್ರಸ್ತಾಪದ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಸದ್ಯಕ್ಕೆ ಸರ್ಕಾರದ ಮುಂದೆ ಆ ಪ್ರಸ್ತಾಪವಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರಲ್ಲಿ ಪೊಲೀಸರ ಮ್ಯಾರಥಾನ್

ಭಾನುವಾರ ನಾನು ಬೇಗ ಎದ್ದೇಳುವುದಿಲ್ಲ. ಇಂದು ಪೊಲೀಸರು ನಡೆಸುತ್ತಿರುವ ಮ್ಯಾರಥಾನ್‌ನಲ್ಲಿ ಭಾಗವಹಿಸಲು ಬಂದಿದ್ದೇನೆ. ಇತ್ತೀಚೆಗೆ ದೊಡ್ಡ ಮಟ್ಟದಲ್ಲಿ ಡ್ರಗ್ಸ್ ಜಪ್ತಿ ಮಾಡಿರುವುದು ಸಂತಸದ ವಿಚಾರ ಎಂದರು. 5.ಕಿ.ಮೀ ಮತ್ತು 10 ಕಿ.ಮೀ ಮ್ಯಾರಥಾನ್‌ನಲ್ಲಿ ಪ್ರತ್ಯೇಕವಾಗಿ ಭಾಗವಹಿಸಿ ವಿಜೇತರಾದವರಿಗೆ ಆಕರ್ಷಕ ನಗದು ಮತ್ತು ಪದಕವನ್ನು ವಿತರಿಸಲಾಯಿತು. 5 ಕಿ.ಮೀ ಪ್ರಥಮ 5 ಸಾವಿರ ರೂ., ದ್ವಿತೀಯ 3 ಸಾವಿರ ರೂ., ತೃತೀಯ 2 ಸಾವಿರ ರೂ., ಹಾಗೂ 10 ಕಿಮೀ ವಿಜೇತರಿಗೆ ಪ್ರಥಮ 10 ಸಾವಿರ ರೂ., ದ್ವಿತೀಯ 5 ಸಾವಿರ ರೂ., ತೃತೀಯ 3 ಸಾವಿರ ರೂ ನೀಡಲಾಯಿತು.

ಈ ಸಂದರ್ಭದಲ್ಲಿ ನಟಿ ಅಮೃತ ಐಯ್ಯಂಗಾರ್, ಬೃಂದಾ ಆಚಾರ್, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಸಿಇಓ ಯುಕೇಶ್ ಸೇರಿದಂತೆ ಮತ್ತಿತರು ಪಾಲ್ಗೊಂಡಿದ್ದರು.

17 ಮಂದಿ ದುರ್ಮರಣ

ಸಂಭವಿಸಿದ ಸ್ಫೋಟದ ಘಟನೆ ಅತ್ಯಂತ ದುರದೃಷ್ಟಕರ. ಘಟನೆ ಸಂಭವಿಸಿದಾಗಿನಿಂದಲೂ ನಾನು ಸ್ಥಳೀಯ ಆಡಳಿತದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ. ಈಗಾಗಲೇ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಸ್ಥಳಕ್ಕೆ ತಲುಪಿ, ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಈವರೆಗೂ ಸುಮಾರು 17 ಜನ ಪ್ರಾಣ ಕಳೆದುಕೊಂಡಿದ್ದು, 18 ಜನರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ತಕ್ಷಣವೇ ನಾಗ್ಪುರಕ್ಕೆ ಸ್ಥಳಾಂತರಿಸಲಾಗಿದ್ದು, ಬೇಗ ಚೇತರಿಸಿಕೊಳ್ಳಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಸಿಎಂ ಫಡ್ನವೀಸ್ ಭಾವುಕರಾಗಿದ್ದಾರೆ.

ಪರಿಹಾರ ಘೋಷಣೆ: ಇನ್ನು ಪ್ರಧಾನ ಮಂತ್ರಿ ಕಚೇರಿ ದುರಂತದ ಬಗ್ಗೆ ದುಃಖ ವ್ಯಕ್ತಪಡಿಸಿದ್ದು, ಸಂತ್ರಸ್ತರಿಗೆ ಆರ್ಥಿಕ ನೆರವು ಘೋಷಿಸಿದೆ. ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಪರಿಹಾರ ಹಾಗೂ ಗಾಯಾಳುಗಳಿಗೆ ತಲಾ 50,000 ರೂ. ಆರ್ಥಿಕ ನೆರವನ್ನು ಘೋಷಿಸಿದೆ.

48 ನಾಯಕರ ಹತ್ಯೆ

ಇದೆ ಮತ್ತು ಉತ್ತಮ ಪ್ರಗತಿಯಲ್ಲಿದೆ ತಿಳಿಸಿದ್ದಾರೆ. ಇರಾನ್‌ನ ಹೊಸ ನಾಯಕತ್ವವು ಯುಎಸ್‌ನೊಂದಿಗೆ ಸಂಪರ್ಕದಲ್ಲಿದೆ. ಮಾತುಕತೆಗೆ ಒಪ್ಪಿಕೊಂಡಿದೆ. ಇರಾನಿನ ಹೊಸ ನಾಯಕರು ಮಾತನಾಡಲು ಬಯಸುತ್ತಾರೆ. ನಾನು ಮಾತನಾಡಲು ಒಪ್ಪಿಕೊಂಡಿದ್ದೇನೆ. ಇರಾನ್ ಇದನ್ನು ಮೊದಲೇ ಮಾಡಬಹುದಿತ್ತು. ಆದರೆ ಅವರು ಅತಿಯಾಗಿ ಬುದ್ಧಿವಂತರಾಗಿದ್ದಾರೆ. ಜನರು ಬೀದಿಗಳಲ್ಲಿ ಹುರಿದುಂಬಿಸುತ್ತಿದ್ದಾರೆ, ಆದರೆ ಅದೇ ಸಮಯದಲ್ಲಿ, ಬಹಳಷ್ಟು ಬಾಂಬ್‌ಗಳು ಬೀಳುತ್ತಿವೆ ಎಂದು ಅವರು ಹೇಳಿದ್ದಾರೆ.

ಅಮೆರಿಕ ಮತ್ತು ಇಸ್ರೇಲಿ ಜಂಟಿ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರು ಸಾವನ್ನಪ್ಪಿದ ನಂತರ ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಿರುವ ಸಮಯದಲ್ಲಿ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಇರಾನ್‌ಗೆ ಇದು ಅತ್ಯಂತ ದೊಡ್ಡ ಮತ್ತು ನಿರ್ಣಾಯಕ ಕ್ಷಣಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತಿದೆ

ಕೊಡಗಲ್ಲಿ ಕಾಡಾನೆ ದಾಳಿಗೆ ಪಿಯು ವಿದ್ಯಾರ್ಥಿನಿ ಬಲಿ

ಬಿದ್ದಿದ್ದಳು. ಕೂಡಲೇ ಆಕೆಯನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ಕರೆದೊಯ್ದರಾದರೂ ಪರೀಕ್ಷೆ ನಡೆಸಿದ ವೈದ್ಯರು ಆಕೆ ಮೃತ ಪಟ್ಟಿರುವುದಾಗಿ ದೃಢಪಡಿಸಿದರು. ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಯಿತು.

ಹೆದ್ದಾರಿ ತಡೆದು ಪ್ರತಿಭಟನೆ: ಕಾಡಾನೆ ದಾಳಿಗೆ ಸಿಲುಕಿ ಶಾಲಾ ವಿದ್ಯಾರ್ಥಿನಿ ಮೃತಪಟ್ಟ ಹಿನ್ನೆಲೆಯಲ್ಲಿ ಮಾಜಿ ಶಾಸಕ ಕೆ.ಜಿ. ಬೋಪಯ್ಯ ನೇತೃತ್ವದಲ್ಲಿ ಗ್ರಾಮಸ್ಥರು ಮತ್ತು ರೈತ ಸಂಘದ ಪ್ರಮುಖರು ಮದೆನಾಡು ಜಂಕ್ಷನ್ ನಲ್ಲಿ ರಾಷ್ಟ್ರೀಯ ಹೆದ್ದಾರಿ 275 ಅನ್ನು ತಡೆದು ಸುಮಾರು ಗಂಟೆಗಳ ಕಾಲ ಪ್ರತಿಭಟನೆ ನಡೆಸಿದರು. ಅರಣ್ಯ ಇಲಾಖೆ, ಶಾಸಕ ಎ.ಎಸ್.ಪೊನ್ನಣ್ಣ ಹಾಗೂ ರಾಜ್ಯ ಸರಕಾರದ ವಿರುದ್ದ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಸಿಸಿಎಫ್ ಆಗಮಿಸಬೇಕೆಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ಮಾಹಿತಿ ತಿಳಿದು ಸ್ಥಳಕ್ಕಾಗಮಿಸಿದ ಸಿಸಿಎಫ್ ಸೋನಲ್ ವೃಷ್ಟಿ ಅವರನ್ನು ಪ್ರತಿಭಟನಾಕಾರರು ತರಾಟೆಗೆ ತೆಗೆದುಕೊಂಡರು. ಈ ಭಾಗದಲ್ಲಿ ನಿರಂತರ ಕಾಡಾನೆಗಳು ಉಪಟಳ ನೀಡುತ್ತಿವೆ. ಅವುಗಳನ್ನು ಕಾಡಿಗಟ್ಟಲು ಯಾವುದೇ ಕ್ರಮ ಕೈಗೊಂಡಿಲ್ಲ. ಮಾತ್ರವಲ್ಲದೇ ಮೃತರ ಕುಟುಂ ಬಕ್ಕೆ ನೀಡಲಾದ ಪರಿಹಾರ ಚೆಕ್‌ಗೆ ಅರಣ್ಯ ಇಲಾಖೆ ಮೊಹರು ಹಾಕಿಲ್ಲ. ತಕ್ಷಣವೇ ಈ ಭಾಗದಲ್ಲಿ ಉಪಟಳ ನೀಡುತ್ತಿರುವ ಕಾಡಾನೆ ಯನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರ ಮಾಡಬೇಕು. ಒಟ್ಟು 11 ಕಾಡಾನೆಗಳನ್ನು ಕಾಡಿಗಟ್ಟಲು ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಸಿಎಫ್ ಸೋನಲ್ ವೃಷ್ಟಿ ಮೃತರ ಕುಟುಂಬಕ್ಕೆ ತಕ್ಷಣವೇ ಪರಿಹಾರದ ಚೆಕ್ ನೀಡಲಾಗುವುದು. ಕಾಡಾನೆಗಳನ್ನು ಕಾಡಿಗಟ್ಟಲು ಕ್ರಮ ಕೈಗೊಳ್ಳಲಾಗುತ್ತದೆ. ಇಂದಿನಿಂದಲೇ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಹೇಳಿದರು. ಅಧಿಕಾರಿ ಸೂಕ್ತ ಕ್ರಮದ ಭರವಸೆ ನೀಡಿದ ಹಿನ್ನೆಲೆಯಲ್ಲಿ ನಿರಂತರವಾಗಿ 3 ಗಂಟೆಗಳ ಕಾಲ ನಡೆಸಿದ ಹೆದ್ದಾರಿ ತಡೆ ಪ್ರತಿಭಟನೆಯನ್ನು ಕೈಬಿಟ್ಟರು. ರಸ್ತೆ ತಡೆ ನಡೆಸಿದ್ದರಿಂದಾಗಿ ಹೆದ್ದಾರಿಯ ಎರಡೂ ಕಡೆಗಳಲ್ಲಿ ಕಿ.ಮೀ ದೂರದವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಜನರ ಮೇಲೆ ದಾಳಿ ಮಾಡುತ್ತಿರುವ ಒಂಟಿ ಸಲಗವನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಬೇಕು. ಕುಟುಂಬಕ್ಕೆ ತಕ್ಷಣವೇ ಪರಿ ಹಾರದ ಮೊತ್ತವನ್ನು ನೀಡಬೇಕು. ಈ ಭಾಗದಲ್ಲಿ ಒಟ್ಟು 11 ಕಾಡಾನೆಗಳಿದ್ದು, ಅವುಗಳನ್ನು ಕಾಡಿಗಟ್ಟಬೇಕು ಎಂದು ಮಾಜಿ ಶಾಸಕ ಕೆ.ಜಿ. ಬೋಪಯ್ಯ ಸುದ್ದಿಗಾರರ ಬಳಿ ಮಾತನಾಡುತ್ತ ಒತ್ತಾಯಿಸಿದರು. ತೀರಾ ಬಡ ಕುಟುಂಬದ ಮೃತ ವಿದ್ಯಾರ್ಥಿನಿ ಪ್ರತಿಭಾವಂತೆಯಾಗಿದ್ದಳು. ಆದ್ದರಿಂದ ಆಕೆಯ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ಸರಕಾರಿ ಉದ್ಯೋಗ ನೀಡಲು ಅರಣ್ಯ ಇಲಾಖೆ ಸರಕಾರಕ್ಕೆ ಶಿಫಾರಸು ಮಾಡ ಬೇಕೆಂದು ಹೇಳಿದರು. ಈ ಭಾಗದಲ್ಲಿ ಪರಿಶಿಷ್ಟ ಜಾತಿ ಮತ್ತು ಸಮುದಾಯದ ಕಾಲೋನಿಗಳಿದ್ದು, ಅಲ್ಲಿ ಕಾಂಕ್ರೀಟ್ ರಸ್ತೆ ದುರಸ್ಥಿಗೆ ಅರಣ್ಯ ಇಲಾಖೆ ಅನುಮತಿ ನೀಡಬೇಕು. ಒಂದು ಕುಟುಂಬಕ್ಕೆ ಹಕ್ಕುಪತ್ರ ಇದ್ದರೂ ಕೂಡ ಕೃಷಿ ಮಾಡಿದ ಜಾಗದಲ್ಲಿದ್ದ ಕಾಫಿ ಗಿಡ ಗಳನ್ನು ಅರಣ್ಯ ಇಲಾಖೆ ಕಡಿದು ಹಾಕಿದೆ. ಈ ಪ್ರಕರಣದ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ದ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಿಸಿಎಫ್ ಅವರನ್ನು ಒತ್ತಾಯಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ಮತ್ತಷ್ಟು ದೊಡ್ಡ ಮಟ್ಟದ ಹೋರಾಟ ನಡೆಸಲಾಗುತ್ತದೆ ಎಂದು ಕೆ.ಜಿ ಬೋಪಯ್ಯ ಹೇಳಿದರು.

ಮಡಿಕೇರಿ ವಲಯ ಅರಣ್ಯ ಅಧಿಕಾರಿಗಳಿಗೆ ಕಳೆದ ವರ್ಷ ಆ.14ರಂದೇ ಊರಿನವರೆಲ್ಲ ಸೇರಿ ಆ ಭಾಗದಲ್ಲಿ ಆನೆ ಹಾವಳಿ ತಡೆಗಟ್ಟುವಂತೆ ಲಿಖಿತ ದೂರು ನೀಡಿದ್ದೆವು ಒಂದು ಬಾರಿ ಗ್ರಾಮಕ್ಕೆ ಬಂದು ಹೋದ ಅರಣ್ಯ ಅಧಿಕಾರಿಗಳು ಆನೆಗಳನ್ನು ಓಡಿಸುವಲ್ಲಿ ಯಾವುದೇ ಪ್ರಯತ್ನ ನಡೆಸಲಿಲ್ಲ. ಈ ಭಾಗದಲ್ಲಿ ಕಾಡಾನೆ ಓಡಾಡುತ್ತಿದ್ದು ಕಾಫಿ ತೋಟಗಳಲ್ಲಿ ಕೆಲಸ ಮಾಡಿಸಲು ಕೆಲಸಕ್ಕೆ ಹೋಗಲು ಕೂಡ ಭಯದ ವಾತಾವರಣ ಸೃಷ್ಟಿಯಾಗಿದೆ. ಹಲವಾರು ಬಾರಿ ಅರಣ್ಯ ಇಲಾಖೆಗೆ ದೂರು ನೀಡಿದರು ಕೂಡ ಈ ಭಾಗದ ಜನರಿಗೆ ಯಾವುದೇ ರೀತಿಯ ಅನುಕೂಲವನ್ನು ಕಲ್ಪಿಸಿಲ್ಲ, ಅರಣ್ಯ ಇಲಾಖೆಯ ನಿರ್ಲಕ್ಷ್ಯವೇ ನಿನ್ನೆಯ ಘಟನೆಗೆ ಕಾರಣ ಎಂದು ಪ್ರತಿಭಟನಾ ಗ್ರಾಮಸ್ಥರು ಆರೋಪಿಸಿದರು. ತಳೂರು ಕಿಶೋರ್ ಕುಮಾರ್, ಅಗೋಳಿ ಕಜೆ ಧನಂಜಯ, ದುರ್ಗೇಶ್, ಸಹಿತ ಮದೆನಾಡು, ಹರವ ನಾಡು, ಬೆಳಕುಮಾನಿ, ಕತ್ತೋರ್ಜೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಸೋಮವಾರ 2 ಮಾರ್ಚ್ 2026

ಚೆಯ್ಯಂಡಾಣೆಯಲ್ಲಿ ಅದ್ಧೂರಿ ಹಿಂದೂ ಸಂಗಮ ಯಾತ್ರೆ


ಚೆಯ್ಯಂಡಾಣೆಯಲ್ಲಿ ಹಿಂದೂ ಸಂಗಮ ಶೋಭಾ ಯಾತ್ರೆ ನಡೆಯಿತು

ನಾಪೋಕ್ಲು, ಮಾ.1(ದುಗ್ಗಳ)–ಹಿಂದೂಗಳು ಸಂಘಟನೆ ಮುಖಾಂತರ ಎಲ್ಲಾ ಹಿಂದೂ ಗಳನ್ನು ಸೇರಿಸಿಕೊಂಡು ನಮ್ಮ ಸಂಸ್ಕೃತಿ, ಸಂಪ್ರದಾಯ, ನಮ್ಮ ನಾಗರಿಕತೆ, ಪರಂಪರೆ ಯನ್ನು ಸ್ಮರಣೆ ಮಾಡಬೇಕಿದೆ ಎಂದು ವಿಶ್ವ ಹಿಂದೂ ಪರಿಷತ್ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪುವೆಲ್ ಹೇಳಿದ್ದಾರೆ.

ಸಮೀಪದ ಚೆಯ್ಯಂಡಾಣೆ ಹಿಂದೂ ಸಂಗಮ ಆಯೋಜನಾ ಸಮಿತಿ ಮಂಡಲದ ವತಿಯಿಂದ ಆಯೋಜಿಸಲಾಗಿದ್ದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಯುವ ಪೀಳಿಗೆಗೆ ನಮ್ಮ ಚಿಂತನೆಯ ಬಗ್ಗೆ ಜಾಗೃತಿಯನ್ನು ಮೂಡಿಸುವುದಕ್ಕಾಗಿ ಈ ರೀತಿಯಾಗಿ ಹಿಂದೂ ಸಂಗಮ ಕಾರ್ಯಕ್ರಮವನ್ನು ಆಚರಣೆ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ 3 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಈ ರೀತಿಯ ಕಾರ್ಯಕ್ರಮ ನಡೆದಿದೆ. ಎಂದರು.

ಚೆಯ್ಯಂಡಾಣೆ ಹಿಂದೂ ಸಂಗಮ ಮಂಡಲ ಅಧ್ಯಕ್ಷ ಪೋಕ್ಕೊಳಂಡ್ರ ಧನೋಜ್ ಮಾತನಾಡಿ, ಮುಂದಿನ ಯುವ ಪೀಳಿಗೆಗೆ ಧರ್ಮ, ಸಂಸ್ಕೃತಿ ಮಹತ್ವದ ಅರಿವು ಮೂಡಿಸುವ ಉದ್ದೇಶದಿಂದ ಈ ಹಿಂದೂ ಸಂಗಮ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹಿಂದೂ ಬಾಂಧವರು ಕಾರ್ಯ ಕ್ರಮದಲ್ಲಿ ಪಾಲ್ಗೊಂಡು ಒಗ್ಗಟ್ಟಿನ ಸಂದೇಶ ಸಾರಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಕ್ಯಾಪ್ಟನ್ ಬಿದ್ದಂಡ ನಾಣಿ ನಾಣಯ್ಯ ಮಾತನಾಡಿ, ನಮ್ಮ ಅಸ್ತಿತ್ವಕ್ಕೆ ಧಕ್ಕೆ ಬಂದಾಗ ನಾವು ಪ್ರತಿಭಟಿಸಬೇಕು. ಪ್ರತಿಭಟಿಸದಿದ್ದರೆ ಪ್ರಯೋಜನವಿಲ್ಲ. ಯಾರಿಗೆ ಕಣ್ಣಿಲ್ಲ ಅವರಿಗೆ ಕನ್ನಡಿ ಕೊಟ್ಟು ಪ್ರಯೋಜನವಿಲ್ಲ. ನೂರು ವರ್ಷದಿಂದ ದೇಶ, ಮಣ್ಣಿನ ರಕ್ಷಣೆಗಾಗಿ ಸ್ವಯಂಸೇವಕ ಸಂಘ ಸೇವೆ ಸಲ್ಲಿಸುತ್ತಾ ಬಂದಿದೆ ಎಂದು ಹೇಳಿದರು. ಸ್ಥಳೀಯ ಸಮಾಜ ಸೇವಕಿ ಹಾಗೂ ವಕೀಲೆ ಬಾಚಟಂಡ ಅನುಪಮಾ ಕಿಶೋರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೆ ಜಿ ಬೋಪಯ್ಯ, ತಳೂರು ಕಿಶೋರ್‌ಕುಮಾರ್, ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಪುದಿಯೋಕ್ಕಡ ರಮೇಶ್ ಗ್ರಾಪಂ. ಅಧ್ಯಕ್ಷೆ ಕೌಶಿ ಕಾವೇರಮ್ಮ, ಬಿದ್ದಂಡ ರಾಜೇಶ್ ಅಚ್ಚಯ್ಯ, ಚೇನಂಡ ಸಂಪ, ಐತಿಚಂಡ ಭೀಮಯ್ಯ ,ಬಿಳಿಯಂಡ್ರ ಪ್ರಸಾದ್, ಹಿಂದೂ ಸಂಗಮ ಮಂಡಲದ ಪದಾಧಿಕಾರಿಗಳು ಇದ್ದರು

ಚೆಯ್ಯಂಡಾಣೆ–ಚೇಲಾವರ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಶೋಭಾ ಯಾತ್ರೆಯ ಮೆರವಣಿಗೆಗೆ ಹಿಂದೂ ಸಂಘದ ಗಣ್ಯರು ಚಾಲನೆ ನೀಡಿದರು, ಮೆರವಣಿಗೆ ಲಕ್ಷ್ಮಿ ಮಹಿಳಾ ಸಮಾಜ ಸಮೀಪ ಸಮಾಪನಗೊಂಡಿತು. ವಿವಿಧ ವೇಷಧಾರಿ ಮಕ್ಕಳು ಭಾರತಾಂಬೆ ಭಾವಚಿತ್ರ ಒಳಗೊಂಡ ವಾಹನ, ಕಳಶ ಹೊತ್ತ ಮಹಿಳೆಯರು, ಕೊಡಗಿನ ವಾಲಗ ದೇಶಭಕ್ತಿ ಸಾರುವ ಪೋಸ್ಟರ್‌ಗಳು ವಿವಿಧ ಕಲಾ ತಂಡಗಳು ಮೆರವಣಿಗೆಯಲ್ಲಿ ಭಾಗಿಯಾಗಿ ಶೋಭಾ ಯಾತ್ರೆಯ ಮೆರುಗನ್ನು ಹೆಚ್ಚಿಸಿದವು. ಅಧಿಕ ಸಂಖ್ಯೆ ಹಿಂದೂ ಬಾಂಧವರು ಕೇಸರಿ ಬಾವುಟ ಹಿಡಿದು ಮೆರವಣಿಗೆಯಲ್ಲಿ ಸಾಗಿದರು. ಮೆರವಣಿಗೆ ಉದ್ದಕ್ಕೂ ಮಕ್ಕಳಿಂದ ಸಾಂಪ್ರದಾಯಕ ಭಜನೆ ನೃತ್ಯ ಪ್ರದರ್ಶನ ನಡೆಯಿತು

ಅಪ್ಪಚ್ಚಿರ ಗೌತಮ್‌ರ ಆರೋಗ್ಯ ವಿಚಾರಿಸಿದ ಸಂಸದ ಯದುವೀರ್


ಸಂಸದ ಯದುವೀರ್ ಜಿಲ್ಲಾಸ್ಪತ್ರೆಯಲ್ಲಿ ಅಪ್ಪಚ್ಚಿರ ಗೌತಮ್‌ರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಮಡಿಕೇರಿ,ಮಾ.1–ಹಿಂದೂ ಆಚರಣೆಗಳಿಗೆ ಅಡ್ಡಿಪಡಿಸುವ ಕೆಲಸ ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದು, ಕೋಮು ಕಿಡಿಗೇಡಿಗಳಿಗೆ ಇದೊಂದು ವೇದಿಕೆಯಾಗುತ್ತಿದೆ. ಇದು ಅತ್ಯಂತ ಖಂಡನೀಯ ಎಂದು ಸಂಸದ ಯದುವೀರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಾಪೋಕ್ಲುವಿನಲ್ಲಿ ಹಲ್ಲೆಗೆ ಒಳಗಾದ ಅಪ್ಪಚ್ಚಿರ ಗೌತಮ್ ಅವರನ್ನು ಜಿಲ್ಲಾಸ್ಪತ್ರೆಯಲ್ಲಿ ಭೇಟಿ ಮಾಡಿ ಅವರ ಆರೋಗ್ಯ ವಿಚಾರಿಸಿ ಸಾಂತ್ವನ ಮತ್ತು ಧೈರ್ಯ ತುಂಬಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ಯದುವೀರ್, ಹಿಂದೂ ಸಂಘಟನೆ ಕಾರ್ಯಕರ್ತ ಗೌತಮ್ ಮೇಲಿನ ಹಲ್ಲೆ ಗಂಭೀರ ಕೃತ್ಯವಾಗಿದೆ. ಪೊಲೀಸರು ಆರೋಪಿಗಳನ್ನು ಬಂಧಿಸಿರುವುದು ಸಂತೋಷ ತಂದಿದೆ. ಈ ಪ್ರಕರಣಕ್ಕೆ ತಾರ್ಕಿಕ ಅಂತ್ಯ ಮತ್ತು ನ್ಯಾಯ ಕೊಡಿಸಬೇಕಿದೆ. ಕೋಮು ಕಿಡಿಗೇಡಿಗಳಿಗೆ ಕಠಿಣ ಕಾನೂನು ಕ್ರಮದ ಮೂಲಕ ತಕ್ಕ ಪಾಠ ಕಲಿಸಬೇಕಿದೆ ಎಂದು ಹೇಳಿದರು. ಹಿಂದೂ ಸಮಾಜದ ಆಚರಣೆಗಳ ಮೇಲೆ ಕಲ್ಲು ತೂರಾಟ ಸಹಿತ ಗಲಾಟೆ ಮಾಡಿಸುವ ಕೆಲಸಗಳು ರಾಜ್ಯದ ಹಲವು ಭಾಗಗಳಲ್ಲಿ ನಡೆದಿದೆ. ಇದರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇದಕ್ಕೆ ಪ್ರೇರಣೆ ನೀಡುತ್ತಿರುವವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮಾಜಿ ಸಚಿವ ಅಪ್ಪಚ್ಚು ರಂಜನ್, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪಕ್ಷ ಪ್ರಮುಖರಾದ ಮಹೇಶ್ ಜೈನಿ, ಅರುಣ್ ಶೆಟ್ಟಿ, ಸುವಿನ್ ಗಣಪತಿ, ಬಿ.ಕೆ.ಅರುಣ್ ಕುಮಾರ್, ಉಮೇಶ್ ಸುಬ್ರಮಣಿ, ಬಿ.ಕೆ. ಜಗದೀಶ್, ಅನಿತಾ ಪೂವಯ್ಯ, ಕನ್ನಿಕೆ ಸೇರಿದಂತೆ ಮತ್ತಿತರರು ಹಾಜರಿದ್ದರು.

ಕ್ರೈಸ್ತ ಸಮಾಧಿ ಸ್ಥಳದಲ್ಲಿ ವಾಮಾಚಾರ ಪತ್ತೆ



ಮಡಿಕೇರಿ: ಚೆಟ್ಟಳ್ಳಿಯ ಕಾನನ್ ಕಾಡ್ ಸಮೀಪದಲ್ಲಿರುವ ಕ್ರೈಸ್ತ ಸಮುದಾಯದ ಸಮಾಧಿ ಸ್ಥಳದಲ್ಲಿ ವಾಮಾಚಾರ ನಡೆಸಿರುವ ಘಟನೆ ಕಂಡು ಬಂದಿದೆ. ಈ ಘಟನೆಯಿಂದ ಸ್ಥಳೀಯ ಕ್ರೈಸ್ತ ಸಮುದಾಯದ ಆತಂಕ ಹಾಗೂ ಅಸಮಾಧಾನಕ್ಕೆ ಕಾರಣವಾಗಿದೆ.

ಶನಿವಾರ ಸಂಜೆ ನಿವೃತ್ತ ಯೋಧ ಪೈಲ್ಲಿ ಎಂಬವರ ತಂದೆ ಫ್ರಾನ್ಸಿಸ್ ನಿಧನರಾದ ಹಿನ್ನಲೆಯಲ್ಲಿ ಸಮಾಧಿ ಸ್ಥಳದಲ್ಲಿ ಅಂತ್ಯಕ್ರಿಯೆಗೆ ಗುಂಡಿ ತೋಡುತ್ತಿದ್ದ ವೇಳೆ ಕೆಲವು ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿವೆ. ಸ್ಥಳದಲ್ಲಿ ಕೆಲವು ಮುಸ್ಲಿಂ ವ್ಯಕ್ತಿಗಳ ಫೋಟೋಗಳು, ಎಕ್ಕದ ಎಲೆಗಳಲ್ಲಿ ಬರೆಯಲ್ಪಟ್ಟ ಮುಸ್ಲಿಂ ಹೆಸರುಗಳು, ನಿಂಬೆಹಣ್ಣು, ತಗಡು, ಕುಂಕುಮ ಹಾಗೂ ಉಪ್ಪು ಕಂಡು ಬಂದಿವೆ. ಇದೊಂದು ವಾಮಾಚಾರ ಎಂಬುದು ದೃಢಪಟ್ಟ ಹಿನ್ನಲೆಯಲ್ಲಿ ಸ್ಥಳೀಯ ಕ್ರೈಸ್ತರಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಕಸ ಎಸೆದ ಲಾರಿಗೆ 10 ಸಾವಿರ ರೂ. ದಂಡ



ಮಡಿಕೇರಿ: ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಕಸ ಎಸೆದ ರಾಜಸ್ಥಾನಕ್ಕೆ ಸೇರಿದ ಲಾರಿಗೆ ಸ್ಥಳೀಯ ಪಂಚಾಯಿತಿ 10 ಸಾವಿರ ರೂ. ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸಿದೆ.

ಭಾನುವಾರ ಬೆಳಿಗ್ಗೆ ಮದೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕರ್ತೋಜಿ ಬಳಿ ರಾಜಸ್ಥಾನ್ ಮೂಲದ ಲಾರಿಯಲ್ಲಿ ಬಂದ ಹೊರ ರಾಜ್ಯದ ಚಾಲಕ ಮತ್ತು ಸಿಬ್ಬಂದಿ 30 ರಿಂದ 40 ಚೀಲದಷ್ಟು ಕಸ ಎಸೆಯುತ್ತಿದ್ದರು. ಇದನ್ನು ಗಮನಿಸಿದ ಸ್ಥಳೀಯರು ಲಾರಿಯವರ ಕೈಯಲ್ಲೇ ಹಾಕಿದಂತಹ ಕಸದ ಚೀಲವನ್ನು ವಾಪಸ್ಸು ಲಾರಿಗೆ ತುಂಬಿಸಿದ್ದಾರೆ. ಈ ಬಗ್ಗೆ ಮದೆ ಗ್ರಾಪಂಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಪಂಚಾಯಿತಿ ಸಿಬ್ಬಂದಿ ಲಾರಿಯವರಿಗೆ ದಂಡವನ್ನು ವಿಧಿಸಿದರು.

ತೊರೆನೂರು : ಎಡದಂಡೆ ನಾಲೆ ಆಧುನೀಕರಣ ಕಾಮಗಾರಿಗೆ ಚಾಲನೆ


ನಾಲೆಗಳ ಆಧುನೀಕರಣ ಕಾಮಗಾರಿಗೆ ಭಾನುವಾರ ಶಾಸಕ ಡಾ.ಮಂತರ್ ಗೌಡ ಚಾಲನೆ ನೀಡಿದರು.

ಕುಶಾಲನಗರ: ಸಮೀಪದ ಹಾರಂಗಿ ಜಲಾಶಯ ವ್ಯಾಪ್ತಿಯಲ್ಲಿ ರೂ.125 ಕೋಟಿ ಅನುದಾನದಲ್ಲಿ ಕೈಗೊಂಡಿರುವ ಎಡದಂಡೆ ನಾಲೆಯ ಮುಖ್ಯ ನಾಲಾ ಮತ್ತು ನಾಲೆಯ ವಿತರಣಾ ನಾಲೆಗಳ ಆಧುನೀಕರಣ ಕಾಮಗಾರಿಗೆ ಭಾನುವಾರ ಶಾಸಕ ಡಾ.ಮಂತರ್ ಗೌಡ ಚಾಲನೆ ನೀಡಿದರು.

ಕಾವೇರಿ ನೀರಾವರಿ ನಿಗಮ ನಿಯಮಿತ ಹಾಗೂ ಹಾರಂಗಿ ನೀರಾವರಿ ಇಲಾಖೆ ವತಿಯಿಂದ ತೊರೆನೂರು ಗ್ರಾಮದ ನೀರು ಬಳಕೆದಾರರ ಸಂಘದ ಆವರಣದಲ್ಲಿ ಏರ್ಪಡಿಸಿದ್ದ ಹಾರಂಗಿ ಎಡದಂಡೆ ನಾಲೆ ಮುಖ್ಯ ನಾಲಾ ಹಾಗೂ ಹಾರಂಗಿ ಎಡದಂಡೆ ನಾಲೆಯ ವಿತರಣಾ ನಾಲೆ ಆಧುನೀಕರಣ ಕಾಮಗಾರಿಯ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಜಲಾಶಯದ 42 ಕಿಮೀ ನಾಲೆಯನ್ನು ರೂ.72 ಕೋಟಿ ಹಾಗೂ 18 ವಿತರಣಾ ನಾಲೆ ಅಭಿವೃದ್ಧಿಗೆ ರೂ42 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ. ಸಾಲು ಕೊಪ್ಪಲು, ಚಿಕ್ಲಿಹೊಳೆ, ಕುಶಾಲನಗರ ಭಾಗಕ್ಕೆ ತಲಾ ರೂ.5 ಕೋಟಿ ಅನುದಾನದಲ್ಲಿ ರಸ್ತೆ ಅಭಿವೃದ್ಧಿಗೆ ಅನುದಾನ ಒದಗಿಸಲಾಗಿದೆ ಎಂದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಕೆಪಿಸಿಸಿ ವಕ್ತಾರ ಮೈಸೂರು ಲಕ್ಷ್ಮಣ್ ಮಾತನಾಡಿದರು. ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಎಂಜಿನಿಯರ್ ಸತೀಶ್, ಕಾರ್ಯಪಾಲಕ ಎಂಜಿನಿಯರ್ ಪುಟ್ಟಸ್ವಾಮಿ, ಸಹಾಯಕ ಎಂಜಿನಿಯರ್ ಕಿರಣ್, ಸೌಮ್ಯ, ತಹಶೀಲ್ದಾರ್ ಕಿರಣ್ ಜಿ.ಗೌರಯ್ಯ, ಶಿರಂಗಾಲ ನೀರು ಬಳಕೆದಾರರ ಸಂಘದ ಅಧ್ಯಕ್ಷ ಶ್ರೀಧರ್, ತೊರೆನೂರು ಸಂಘದ ಅಧ್ಯಕ್ಷ ಟಿ.ಕೆ.ಪಾಂಡುರಂಗ, ಹೆಬ್ಬಾಲೆ ಸಂಘದ ಅಧ್ಯಕ್ಷ ರವಿ, ಮುಖಂಡರಾದ ಎಚ್.ಕೆ.ನಟೇಶ್ ಗೌಡ, ಟಿ.ಬಿ.ಜಗದೀಶ್, ಎಚ್.ಎಸ್.ರಾಜಶೇಖರ್, ಮಂಜುನಾಥ್, ಶ್ರೀಕಾಂತ್, ಶಿರಂಗಾಲ ಬಸವರಾಜು, ಕೃಷ್ಣೇಗೌಡ,ರಮೇಶ್, ಎಸ್.ಎಸ್.ಚಂದ್ರಶೇಖರ್, ಅಳುವಾರ ಮೂರ್ತಿ, ಟಿಕೆವಸಂತ ನಿಂಗಜಮ್ಮ ಸಾವಿತ್ರಿ, ಲತಾಬಾಯಿ, ಸಂಜೀವಯ್ಯ, ದೇವರಾಜ್, ಟಿ.ಎಸ್.ಚಂದ್ರಶೇಖರ್, ಪುಟ್ಟರಾಜ, ರಾಧ, ಪಿ.ಡಿ.ರವಿಕುಮಾರ್, ರವಿಚಂದ್ರ ಇದ್ದರು.

ಯುದ್ಧ ಸಹಾಯವಾಣಿ ಸ್ಥಾಪನೆ

ಮಡಿಕೇರಿ, ಮಾ.1–ಮಧ್ಯ ಪ್ರಾಚ್ಯ ಹಾಗೂ ಕೊಲ್ಲಿ ದೇಶಗಳಲ್ಲಿ ಯುದ್ಧ ಸಂಭವಿಸಿದ್ದು ಅಪಾರ ಪ್ರಮಾಣದ ಸಾವು ನೋವು ಸಂಭವಿಸಿದೆ. ಕೊಡಗು ಜಿಲ್ಲೆಯ ಯಾರಾದರೂ ಈ ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿದ್ದರೆ, ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಮಾಹಿತಿ ನೀಡಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ. 08272–221077,08272–221099, ವಾಟ್ಸಾಪ್ ಸಂಖ್ಯೆ–8550001077 ಈ ಸಂಖ್ಯೆಗಳನ್ನು ಸಂಪರ್ಕಿಸಲು ಪ್ರಕಟಣೆ ಮನವಿ ಮಾಡಿದೆ.

ಸರಣಿ ಅಪಘಾತ: ಪ್ರಯಾಣಿಕರಿಗೆ ಗಾಯ



ವಿರಾಜಪೇಟೆ: ಪಟ್ಟಣದ ಮಠದ ಗದ್ದೆ ಬಳಿ ಮುಖ್ಯ ರಸ್ತೆಯಲ್ಲಿ ಖಾಸಗಿ ಬಸ್, ಸ್ವಿಫ್ಟ್ ಕಾರು, ಮತ್ತು ಬೊಲೇರ ವಾಹನಗಳ ನಡುವೆ ಸರಣಿ ಅಪಘಾತ ನಡೆದಿದ್ದು, ಕಾರಿನಲ್ಲಿದ್ದವರಿಗೆ ಅಲ್ಪಸ್ವಲ್ಪ ಪ್ರಮಾಣದಲ್ಲಿ ಗಾಯಗಳಾಗಿವೆ.

ವಿರಾಜಪೇಟೆಯಿಂದ ಮಡಿಕೇರಿ ಕಡೆಗೆ ಹೋಗುತ್ತಿದ್ದ ತ್ರಿಶೂಲ ಚಿಲ್ಲೀರಿ ಎಂಬ ಖಾಸಗಿ ಬಸ್ (ಕೆ.ಎ.20, ಬಿ, 7218) ವೇಗವಾಗಿ ಹೋಗುತ್ತಿರುವಾಗ ಮಹಿಳಾ ಸಮಾಜದ ಕಡೆಯಿಂದ ಎಡಬದಿ ತಿರುವಿನಲ್ಲಿ ಬರುತ್ತಿದ್ದ ಬೊಲೇರ ಕ್ಯಾಂಪರ್ ಕಾರಿ (ಕೆ.ಎ.05, ಎ.ಪಿ–6971)ಗೆ ಡಿಕ್ಕಿ ಹೊಡೆದಿದ್ದಲ್ಲದೆ, ಎದುರಿನಿಂದ ಬರುತಿದ್ದ ಸ್ವಿಫ್ಟ್ ಕಾರಿಗೆ (ಕೆ.ಎ.12, ಜಡ್–9194) ಡಿಕ್ಕಿ ಹೊಡೆದು ನಿಂತಿದೆ. ಸರಣಿ ಅಪಘಾತ ಸಂಭವಿಸಿದ ಪರಿಣಾಮ ರಸ್ತೆ ಮಧ್ಯೆ ವಾಹನಗಳು ನಿಂತಿದ್ದರಿಂದಾಗಿ ಪಟ್ಟಣಕ್ಕೆ ಮತ್ತು ಕೋರ್ಟ್ ಕಛೇರಿಗಳಿಗೆ 11–30ರ ಸಮಯದಲ್ಲಿ ಬರುತ್ತಿದ್ದ ವಾಹನಗಳು ಮುಖ್ಯ ರಸ್ತೆಯಲ್ಲೇ ಸಾಲುಗಟ್ಟಿ ನಿಂತುಕೊಳ್ಳಬೇಕಾಯಿತು. ಪೊಲೀಸರು ಅಪಘಾತಕ್ಕೀಡಾಗಿದ್ದ ವಾಹನಗಳನ್ನು ಠಾಣೆಗೆ ಕೊಂಡೊಯ್ದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಈ ಸಂಬಂಧ ವಿರಾಜಪೇಟೆ ನಗರ ಠಾಣೆ ಪೊಲೀಸರು ಖಾಸಗಿ ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಬ್ರೇಕ್ ವಿಫಲ: ವಿದ್ಯುತ್ ಕಂಬಕ್ಕೆ ಅಪ್ಪಳಿಸಿದ ಬಸ್

ಮಡಿಕೇರಿ: ಬ್ರೇಕ್ ವಿಫಲಗೊಂಡ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿದ ಸಾರಿಗೆ ಬಸೊಂದು ರಸ್ತೆ ಬದಿಯ ಚರಂಡಿಗೆ ಬಿದ್ದು ವಿದ್ಯುತ್ ಕಂಬಕ್ಕೆ ಅಪ್ಪಳಿಸಿದ ಘಟನೆ ಕಾಟಕೇರಿ–ಮಡಿಕೇರಿ ಮುಖ್ಯ ರಸ್ತೆಯಲ್ಲಿ ನಡೆದಿದೆ.

ಚಾ.ನಗರದಲ್ಲಿ ‘ನಮ್ಮ ಪೊಲೀಸ್– ನಮ್ಮ ಹೆಮ್ಮೆ’ ಮ್ಯಾರಾಥಾನ್

- ಪೊಲೀಸರು ಸಾರ್ವಜನಿಕರು ಭಾಗಿಯಾಗಿ ಸಾರ್ವಜನಿಕರಲ್ಲಿ ಅರಿವು
- ಮಾದಕ ವಸ್ತುಗಳು, ಸೈಬರ್ ಅಪರಾಧ ತಡೆ ಕುರಿತು ಜಾಗೃತಿ


ಚಾಮರಾಜನಗರದಲ್ಲಿ ಆಯೋಜಿಸಿದ್ದ 5 ಕಿ.ಮೀ. ಬೃಹತ್ ಮ್ಯಾರಾಥಾನ್ ಓಟಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಚಾಲನೆ ನೀಡಿದರು.

ಚಾಮರಾಜನಗರ, ಮಾ.1 – ಕರ್ನಾಟಕ ಪೊಲೀಸ್ ರನ್ ಅಭಿಯಾನಡಡಿ ಜನಸ್ನೇಹಿ ಪೊಲೀಸ್, ಮಾದಕ ವಸ್ತುಗಳ ಬಗ್ಗೆ ಜಾಗೃತಿ ಹಾಗೂ ಸೈಬರ್ ಅಪರಾಧಗಳ ಕುರಿತು ಅರಿವು ಮೂಡಿಸುವ ಸಂಬಂಧ ನಗರದಲ್ಲಿ ಆಯೋಜಿಸಿದ್ದ 5 ಕಿ.ಮೀ. ಬೃಹತ್ ಮ್ಯಾರಾಥಾನ್ ಓಟಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಚಾಲನೆ ನೀಡಿದರು.

ಚಾಮರಾಜನಗರ ಜಿಲ್ಲಾ ಪೊಲೀಸ್ ವತಿಯಿಂದ ನಗರದ ಪೊಲೀಸ್ ಕವಾಯತು ಮೈದಾನದಲ್ಲಿಂದು ಬೆಳಿಗ್ಗೆಯೇ ನಮ್ಮ ಪೊಲೀಸ್–ನಮ್ಮ ಹೆಮ್ಮೆ, ಎಲ್ಲರಿಗೂ ಫಿಟ್ನೆಸ್–ಮಾದಕ ಮುಕ್ತ ಕರ್ನಾಟಕ ಘೋಷಣೆಯೊಂದಿಗೆ ಹಮ್ಮಿಕೊಳ್ಳಲಾಗಿದ್ದ ಬೃಹತ್ ಮ್ಯಾರಾಥಾನ್ ಓಟದಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ವಿದ್ಯಾರ್ಥಿಗಳು, ಯುವಜನರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ನಾಗರಿಕರಲ್ಲಿ ಜಾಗೃತಿ ಮೂಡಿಸಿ ಗಮನ ಸೆಳೆದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಎಲ್ಲರಿಗೂ ಶಾರೀರಿಕ ಸುಸ್ಥಿತಿ ಅತೀ ಅಗತ್ಯವಾಗಿದೆ. ದೇಹ–ಮನಸ್ಸಿನ ಸಮತೋಲನಕ್ಕಾಗಿ ಪ್ರತಿಯೊಬ್ಬರು ಫಿಟ್ನೆಸ್ ಕಾಪಾಡಿಕೊಳ್ಳಬೇಕು. ಮಾದಕ ವಸ್ತುಗಳ ದುಷ್ಪರಿಣಾಮ, ಸೈಬರ್ ಅಪರಾಧಗಳ ಬಗ್ಗೆ ಜಾಗೃತಿಗಾಗಿ ಮ್ಯಾರಾಥಾನ್ ಆಯೋಜಿಸಲಾಗಿದೆ. ಓಟದಲ್ಲಿ ಗ್ರಾಮೀಣ ಭಾಗದ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ನಗರ ಪ್ರದೇಶದ ಮಕ್ಕಳು, ಯುವಜನರು, ಸಾರ್ವಜನಿಕರು ಭಾಗವಹಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಮಾದಕ ವ್ಯಸನ ಮುಕ್ತ ಕರ್ನಾಟಕಕ್ಕಾಗಿ ಹಾಗೂ ಸೈಬರ್ ಅಪರಾಧಗಳ ಅರಿವು ಎಲ್ಲರಿಗೂ ಬೇಕಾಗಿದೆ. ಸೈಬರ್ ಅಪರಾಧಗಳು ಇಂದು ಎಲ್ಲೆಡೆ ಹೆಚ್ಚಾಗುತ್ತಿದ್ದು, ಇದಕ್ಕೆ ಮುಗ್ಧ ನಾಗರಿಕರು ಹೆಚ್ಚಾಗಿ ಸಿಲುಕುತ್ತಿರುವುದು ವಿಪರ್ಯಾಸವಾಗಿದೆ. ಅಂತರ್ಜಾಲ ಬಳಕೆಯಲ್ಲಿ ಪ್ರತಿಯೊಬ್ಬರು ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಅವರು ಮಾತನಾಡಿ ಈ ಹಿಂದೆ ಪೊಲೀಸ್ ಅಂದರೆ ಸಾರ್ವಜನಿಕರು ದೂರ ಉಳಿಯುತ್ತಿದ್ದರು. ಪೊಲೀಸ್ ವ್ಯವಸ್ಥೆಯನ್ನು ಜನಸ್ನೇಹಿಯಾಗಿಸುವ ಉದ್ದೇಶದಿಂದ ಪೊಲೀಸರೊಂದಿಗೆ ಸಾರ್ವಜನಿಕರ ಓಟ ಏರ್ಪಡಿಸಲಾಗಿದೆ. ಎಲ್ಲರು ಸದೃಢ ದೇಹ ಮತ್ತು ಮನಸ್ಸು ಹೊಂದಬೇಕು. ಆಗಮಾತ್ರ ಸ್ವಾಸ್ಥ್ಯ ಸಮಾಜ ಕಟ್ಟಬಹುದಾಗಿದೆ ಎಂದರು.

ಬಳಿಕ ಆರಂಭವಾದ ಬೃಹತ್ ಮ್ಯಾರಾಥಾನ್ ಓಟಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಬಂದೂಕಿನಲ್ಲಿ ಗುಂಡು ಹಾರಿಸಿ ಹಸಿರು ನಿಶಾನೆ ತೋರಿದರು. ಜಿಲ್ಲಾ ಪೊಲೀಸ್ ಕವಾಯತು ಮೈದಾನದಿಂದ ಆರಂಭವಾದ ಮ್ಯಾರಾಥಾನ್ ಬಿ. ರಾಚಯ್ಯ ಜೋಡಿರಸ್ತೆ – ಭುವನೇಶ್ವರಿ ವೃತ್ತ – ಸಂತೇಮರಹಳ್ಳಿ ವೃತ್ತ – ಪಾಲಿಟೆಕ್ನಿಕ್ ಕಾಲೇಜು (ಯೂ ಟರ್ನ್)ನಿಂದ ಪುನಹ – ಸಂತೇಮರಹಳ್ಳಿ ವೃತ್ತ – ಭುವನೇಶ್ವರಿ ವೃತ್ತ – ಜೋಡಿರಸ್ತೆ ಮಾರ್ಗವಾಗಿ ವಾಪಸ್ಸು ಬಂದು ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಮುಕ್ತಾಯಗೊಂಡಿತು. ಮ್ಯಾರಾಥಾನ್ ಓಟದಲ್ಲಿ ಸ್ವತಹ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಇತರೆ ಗಣ್ಯರು ಪಾಲ್ಗೊಂಡು ವಿದ್ಯಾರ್ಥಿಗಳು, ಯುವಜನರು ಹಾಗೂ ಸಾರ್ವಜನಿಕರಲ್ಲಿ ಹುರುಪು ತುಂಬಿದರು.

ಮ್ಯಾರಾಥಾನ್ ವಿಜೇತರಿಗೆ ಪ್ರಥಮ ಬಹುಮಾನವಾಗಿ ಸೈಕಲ್, ದ್ವಿತೀಯ 5 ಸಾವಿರ ರೂ. ನಗದು ಬಹುಮಾನ, ತೃತೀಯ 3 ಸಾವಿರ ರೂ. ನಗದು ಬಹುಮಾನವನ್ನು ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ನಿಗದಿ ಮಾಡಲಾಗಿತ್ತು. ಮೊದಲು ಗುರಿ ತಲುಪಿದ 10 ಓಟಗಾರರಿಗೆ ಪದಕ, ಪ್ರಮಾಣ ಪತ್ರವನ್ನು ನೀಡಿ ಪ್ರೋತ್ಸಾಹಿಸಲಾಯಿತು.

ಪುರುಷರ ವಿಭಾಗದಲ್ಲಿ ಗುಂಡ್ಲುಪೇಟೆ ತಾಲೂಕಿನ ಹೊರೆಯಾಲ ಗ್ರಾಮದ ಮಣಿಕಂಠ ಅವರು 17 ನಿಮಿಷ 12 ಸೆಕೆಂಡುಗಳಲ್ಲಿ ಗುರಿ ತಲುಪಿ ಪ್ರಥಮ ಸ್ಥಾನ ಪಡೆದರು. 17 ನಿಮಿಷ 33 ಸೆಕೆಂಡುಗಳಲ್ಲಿ ಗುರಿ ತಲುಪಿದ ಭೀಮಪ್ಪ ಅವರು ದ್ವಿತೀಯ ಸ್ಥಾನ ಹಾಗೂ 18 ನಿಮಿಷ 45 ಸೆಕೆಂಡುಗಳಲ್ಲಿ ಗುರಿ ತಲುಪಿದ ವೆಂಕಟಯ್ಯನ ಛತ್ರದ ಯೋಗೇಶ್ ತೃತೀಯ ಸ್ಥಾನ ಪಡೆದರು. ಮಹಿಳೆಯರ ವಿಭಾಗದಲ್ಲಿ ಕೊಳ್ಳೇಗಾಲ ತಾಲೂಕಿನ ತೆಳ್ಳನೂರಿನ ಡಿ.ಆರ್. ಪ್ರೀತಿ, ದ್ವಿತೀಯ ಸ್ಥಾನ ನದಿಯಾ ಹಾಗೂ ಚಂದ್ರಮ್ಮ ಅವರು ತೃತೀಯ ಸ್ಥಾನ ಪಡೆದರು. ಮೊದಲು ಗುರಿ ತಲುಪಿದ 10 ಮಂದಿ ಮಹಿಳಾ ವಿಜೇತರಲ್ಲಿ ಒಂದೇ ಶಾಲೆಯ 8 ಮಂದಿ ವಿದ್ಯಾರ್ಥಿನಿ ಯರು ಮ್ಯಾರಾಥಾನ್‌ನ ವಿಶೇಷವಾಗಿತ್ತು.

ಹೆಚ್ಚುವರಿ ಜಿಲ್ಲಾ ಅಧೀಕ್ಷರಾದ ಎಂ.ಎನ್. ಶಶಿಧರ್, ಡಿವೈಎಸ್‌ಪಿ ಸ್ನೇಹರಾಜ್, ಜಿಲ್ಲಾ ಮೀಸಲು ಪೊಲೀಸ್ ವಿಭಾಗದ ಡಿವೈಎಸ್‌ಪಿ ಸೋಮಣ್ಣ, ಪಡೆಯ ಚಾಮೂಲ್ ವ್ಯವಸ್ಥಾಪಕ ನಿರ್ದೇಶಕರಾದ ರಾಜ್ ಕುಮಾರ್, ಬ್ಯಾಂಕ್ ಆಫ್ ಬರೋಡಾದ ಶ್ರೀಧರ್, ಇತರರು ಕಾರ್ಯಕ್ರಮದಲ್ಲಿ ಇದ್ದರು.

ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಎಐ ಕ್ಯಾಮೆರಾ ಅಳವಡಿಕೆ

- ಬಂಡೀಪುರದಲ್ಲಿ ಹೊಸ ಯೋಜನೆ
- ಸುಮಾರು 10 ಕಿ.ಮೀ ವ್ಯಾಪ್ತಿಯಲ್ಲಿ ಗ್ರಹಿಸುವ ಕ್ಯಾಮರಾ



ಚಾಮರಾಜನಗರ, ಮಾ.1– ಮಾನವ ಹಾಗೂ ವನ್ಯಜೀವಿ ಸಂಘರ್ಷವನ್ನು ತಡೆಯಲು ಅರಣ್ಯ ಇಲಾಖೆಯು ಎಐ (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನ ಆಧಾರಿತ ಥರ್ಮಲ್ ಕ್ಯಾಮೆರಾ ಅಳವಡಿಕೆ ಮಾಡಿದೆ.

ಬಂಡೀಪುರ ಅರಣ್ಯ ಅಧಿಕಾರಿಗಳು ಜಿ.ಎಸ್. ಬೆಟ್ಟ ವಲಯದ ಆಯಕಟ್ಟಿನ ಎತ್ತರದ ಪ್ರದೇಶದಲ್ಲಿ ಈ ಅತ್ಯಾಧುನಿಕ ಎಐ ಹಾಗೂ ಥರ್ಮಲ್ ಕ್ಯಾಮೆರಾ ಅಳವಡಿಸಲಾಗಿದೆ.

ಕಾಡಿನಿಂದ ನಾಡಿನತ್ತ ಬರುವ ವನ್ಯ ಪ್ರಾಣಿಗಳನ್ನು ದೂರದಿಂದಲೇ ಈ ಕ್ಯಾಮೆರಾವು ಗ್ರಹಿಸಿ ಕೂಡಲೇ ಕಮಾಂಡ್ ಸೆಂಟರ್‌ಗೆ ಪ್ರಾಣಿಗಳ ಚಿತ್ರಸಹಿತ ಸ್ಥಳದ ಮಾಹಿತಿ ನೀಡಲಿದೆ. ಇದರಿಂದ ಹುಲಿ, ಚಿರತೆ, ಆನೆ ಸಹಿತ ಕಾಡು ಪ್ರಾಣಿಗಳು ಕಾಡುಬಿಟ್ಟು ನಾಡಿನತ್ತ ನುಗ್ಗಲು ಯತ್ನಿಸಿದರೆ ಅಥವಾ ಅರಣ್ಯದೊಳಗೆ ಯಾರಾದರು ಅತಿಕ್ರಮಣ ಪ್ರವೇಶಿಸಿದರೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಲು ಅನುಕೂವಾಗಲಿದೆ.

ದೇಶದಲ್ಲೇ ಮೊದಲು ಬಳಕೆ: ಎಐ ಹಾಗೂ ಥರ್ಮಲ್ ತಂತ್ರಜ್ಞಾನವನ್ನು ಬಂಡೀಪುರ ಅರಣ್ಯದಲ್ಲಿ ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗಿದೆ. ವನ್ಯಜೀವಿಗಳು ಕಾಡಿನಿಂದ ನಾಡಿನತ್ತ ಬಾರದಂತೆ ತಡೆದು ಮಾನವ– ಪ್ರಾಣಿ ಸಂಘರ್ಷ ತಡೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿದೆ ಎಂದು ಪತ್ರಿಕೆಗೆ ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪ್ರಭಾಕರನ್ ಮಾಹಿತಿ ನೀಡಿದರು.

ಕಾಡು ಪ್ರಾಣಿಗಳ ಮೇಲೆ ನಿಗಾ: ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮಾನವ –ವನ್ಯಜೀವಿ ಸಂಘರ್ಷ ಹೆಚ್ಚಾಗಿದೆ. ದಿನನಿತ್ಯ ಒಂದಲ್ಲ ಒಂದು ಭಾಗದಲ್ಲಿ ಕಾಡುಪ್ರಾಣಿಗಳ ಉಪಟಳದ ವರದಿ ಕೇಳಿ ಬರುತ್ತಿದೆ. ನೂರಾರು ಜಾನುವಾರುಗಳು ಹಾಗೂ ಕೆಲವು ರೈತರು ವನ್ಯಪ್ರಾಣಿಗಳ ದಾಳಿಗೆ ಬಲಿಯಾಗಿದ್ದಾರೆ. ರೈತರ ಬೆಳೆ ಹಾನಿಯಾಗುತ್ತಿದೆ. ಪ್ರತಿಕಾರದ ದ್ವೇಷಕ್ಕೆ ಕಾಡು ಪ್ರಾಣಿಗಳು ಸಹ ಬಲಿಯಾಗುತ್ತಿದ್ದು, ಮಾನವ– ವನ್ಯಜೀವಿ ಸಂಘರ್ಷ ತಡೆಯುವುದೇ ಅರಣ್ಯ ಇಲಾಖೆಗೆ ದೊಡ್ಡಸವಾಲಾಗಿದೆ

ಈ ಹಿನ್ನೆಲೆಯಲ್ಲಿ ನಾಡಿನತ್ತ ಬರುವ ಕಾಡು ಪ್ರಾಣಿಗಳ ಮೇಲೆ ಹದ್ದಿನ ಕಣ್ಣಿಟ್ಟು ಅವುಗಳನ್ನು ಸಕಾಲದಲ್ಲಿ ಹಿಮ್ಮೆಟ್ಟಿಸಲು ಬಂಡೀಪುರ ಹುಲಿ ಸಂರಕ್ಷಿತಾರಣ್ಯ ಪ್ರದೇಶದಲ್ಲಿ ಹೊಸ ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ಎಐ ತಂತ್ರಜ್ಞಾನದ ಮೊರೆ ಹೋಗಿರುವ ಬಂಡೀಪುರ ಅರಣ್ಯಾಧಿಕಾರಿಗಳು ಜಿ.ಎಸ್. ಬೆಟ್ಟ ವಲಯದ ಎತ್ತರದ ಪ್ರದೇಶದಲ್ಲಿ ಪ್ರಾಯೋಗಿಕವಾಗಿ ಎಐ ಹಾಗೂ ಥರ್ಮಲ್ ಜೂಮ್ ಕ್ಯಾಮೆರಾ ಅಳವಡಿಸಿದ್ದಾರೆ.

10 ಕಿ.ಮೀ. ದೂರ ಗ್ರಹಿಕೆ: ಕಾಡಿನಿಂದ ಹೊರಬರುವ ವನ್ಯಪ್ರಾಣಿಗಳನ್ನು ಸುಮಾರು 10 ಕಿ.ಮೀ. ದೂರದಿಂದಲೇ ಗ್ರಹಿಸುವ ಹಾಗೂ 360 ಡಿಗ್ರಿಯು ತಿರುಗುವ ಎಐ ಕ್ಯಾಮೆರಾ ತಕ್ಷಣವೇ ಸಂಬಂಧಿಸಿದ ಅರಣ್ಯಾಧಿಕಾರಿಗಳಿಗೆ ಪ್ರಾಣಿಗಳ ಛಾಯಾಚಿತ್ರ ಸಮೇತ ಎಸ್‌ಎಂಎಸ್ ಹಾಗೂ ಜಿಪಿಎಸ್ ಮೂಲಕ ಲೋಕೇಷನ್ ರವಾನಿಸಲಿದೆ. ರಾತ್ರಿ ವೇಳೆಯಲ್ಲೂ ನಿಖರವಾದ ಮಾಹಿತಿ ನೀಡುತ್ತದೆ. ಇದರಿಂದ ಪ್ರಾಣಿಗಳು ಅರಣ್ಯದ ಗಡಿ ದಾಟಿ ನಾಡಿಗೆ ಬರುವ ಮೊದಲೇ ಅಧಿಕಾರಿಗಳಿಗೆ ಮಾಹಿತಿ ಸಿಗಲಿದ್ದು, ಅನಾಹುತಗಳನ್ನು ತಡೆಯಲು ಸಾಧ್ಯವಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ಅನಾಹುತ ತಡೆಯಲು ಸಹಕಾರಿ: ಕಾಡು ಪ್ರಾಣಿಗಳ ಉಪಟಳದ ಬಗ್ಗೆ ಅರಣ್ಯಾಧಿಕಾರಿಗಳಿಗೆ ಮಾಹಿತಿ ದೊರತು ಅವರು ಸಮಸ್ಯೆಗೆ ಸ್ಪಂದಿಸಲು ಸಾಕಷ್ಟು ಸಮಯ ಹಿಡಿಯುತ್ತಿತ್ತು. ಈ ಅವಧಿಯಲ್ಲಿ ಸಾಕಷ್ಟು ಅನಾಹುತಗಳು ಸಂಭವಿಸುತ್ತಿತ್ತು. ಆದರೆ ಎಐ ಹಾಗೂ ಥರ್ಮಲ್ ತಂತ್ರಜ್ಞಾನದಲ್ಲಿ ವನ್ಯಜೀವಿಗಳಾದ ಆನೆ, ಹುಲಿ, ಚಿರತೆ, ಕಾಡುಹಂದಿ ಹೀಗೆ ಹಲವಾರು ಪ್ರಾಣಿಗಳು ಅರಣ್ಯದ ಗಡಿ ಭಾಗಗಳಿಗೆ ಬರುತ್ತಿರುವಾಗಲೇ ಕ್ಯಾಮೆರಾ ಮೂಲಕ ಕಂಟ್ರೋಲ್ ರೂಮ್‌ಗೆ ಮಾಹಿತಿ ಬರುವುದರಿಂದ ಅರಣ್ಯದ ಗಡಿ ದಾಟುವ ಮೊದಲೇ ಅರಣ್ಯಾಧಿಕಾರಿಗಳಿಗೆ ಮಾಹಿತಿ ದೊರೆಯಲಿದೆ. ಇದರಿಂದ ತಕ್ಷಣ ಕಾರ್ಯ ಪ್ರವೃತ್ತರಾಗಿ ಕಾಡು ಪ್ರಾಣಿಗಳನ್ನು ಹಿಮ್ಮೆಟ್ಟಿಸಲು ಹಾಗೂ ಸಂಭಾವ್ಯ ಅನಾಹುತಗಳನ್ನು ತಡೆಗಟ್ಟಲು ಸಾಧ್ಯವಾಗುತ್ತದೆ.

ಪ್ರಾಣಿಗಳಷ್ಟೇ ಅಲ್ಲದೇ ಯಾರಾದರು ಕಳ್ಳ ಬೇಟೆಗಾರರು ಸಹ ಕಾಡಿನೊಳಗೆ ಅತಿಕ್ರಮ ಪ್ರವೇಶ ಮಾಡಿದರೆ ಛಾಯಾಚಿತ್ರ ಸಮೇತ ಕಂಟ್ರೋಲ್ ರೂಮ್‌ಗೆ ಮಾಹಿತಿ ಬರುವುದರಿಂದ ಅಪರಾಧಗಳನ್ನು ತಡೆಯಬಹುದು ಎನ್ನುತ್ತಾರೆ ಅಧಿಕಾರಿಗಳು.



> ದೇಶದಲ್ಲೇ ಪ್ರಥಮ ಬಾರಿಗೆ ಈ ಪ್ರಯೋಗ ನಡೆಸಲಾಗುತ್ತಿದ್ದು, ಜಿ.ಎಸ್.ಬೆಟ್ಟ ವಲಯದಲ್ಲಿ ಇದು ಯಶಸ್ವಿಯಾದರೆ, ಮುಂದಿನ ದಿನಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಿರುವ ಬಂಡೀಪುರದ ಇತರ ವಲಯಗಳಿಗೂ ಈ ತಂತ್ರಜ್ಞಾನವನ್ನು ವಿಸ್ತರಿಸಲು ನಿರ್ಧರಿಸಲಾಗಿದೆ.
> **ಪ್ರಭಾಕರನ್,** ಡಿಸಿಎಫ್ಒ

ರಾಮಸಮುದ್ರ ಕ್ರಿಸ್ತರಾಜ ಬಾಲರ ಪಟ್ಟಣ ಶಾಲೆಯಲ್ಲಿ ಗುರುವಂದನಾ, ಸ್ನೇಹ ಸಮ್ಮಿಲನ



ಚಾಮರಾಜನಗರ: ನಗರದ ರಾಮಸಮುದ್ರ ಕ್ರಿಸ್ತರಾಜ ಬಾಲರಪಟ್ಟಣ ವಿದ್ಯಾಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಂದ ಗುರುಗಳಿಗೆ ನಮನ, ಸಿಆರ್ ಬಿಪಿಗೆ ವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ ಭಾನುವಾರ ಅರ್ಥಪೂರ್ಣವಾಗಿ ನಡೆಯಿತು.

25 ವರ್ಷಗಳ ಬಳಿಕ ವಿದ್ಯಾರ್ಥಿಗಳ ಸಮಾಗಮ, ಹಳೇ ದಿನಗಳ ಮೆಲುಕು, ಶಾಲಾ ಕ್ಷಣಗಳ ಸ್ಮರಣೆಯು ಭಾವ ಸ್ಪರ್ಶಿ ಕ್ಷಣಗಳಿಗೆ ಸಾಕ್ಷಿಯಾಯಿತು.

1997–1998 ರ ಸಾಲಿನ ಏಳನೇ ತರಗತಿ ಮತ್ತು 2000–2001 ರ ಸಾಲಿನ ಹತ್ತನೇ ತರಗತಿಯ ಹಳೆಯ ವಿದ್ಯಾರ್ಥಿಗಳು ಒಂದೆಡೆ ಸೇರಿ ಸಂಭ್ರಮದಲ್ಲಿ ಮಿಂದೆದ್ದರು.

ಗುರುಗಳಿಗೆ ಗೌರವ ಸಮರ್ಪಣೆ: ನಿವೃತ್ತ ಶಿಕ್ಷಕರಾದ ಜೋಸೆಫ್ ರಾಜ್, ಸುಜಯ್ ಕುಮಾರ್, ಪುಟ್ಟವೀರಪ್ಪ, ನಿರಂಜನ್ ಕುಮಾರ್, ನಿರ್ಮಲಮೇರಿ, ಎಲಿಜಬೆತ್ ಮೇರಿ, ನಾಗರಾಜು, ಸರ್ವಮಂಗಳ, ಸವಿತಾ, ಫ್ರಾನ್ಸಿಸ್ ಬಾಬು, ನರಸಿಂಹಯ್ಯ, ಫಿಲೋಮಿನ, ನಟರಾಜು, ಯೂಸೆಫ್, ಫಿಲೋಮಿನ ಮೆಂಥೋರ್, ರೂಲ್ಡ್ ಮೇರಿ, ಚಿನ್ನಯ್ಯ, ಮೂರ್ತಿ, ಲಕ್ಷ್ಮಣ್, ಪುಷ್ಪಕುಮಾರಿ, ಸ್ಟೆಲಾಮೇರಿ, ಜೋಸೆಫ್, ಸಿಂಥೆ ಅಲುವೇರ, ಶಿವನಂಜಯ್ಯ, ಮಾರ್ಗರೇಟ್, ಜಾನ್ಪೀಟರ್, ಶಾಂತಕುಮಾರಿ, ಮೇರಿ, ಡ್ಯಾನಿ, ನಾಗರಾಜು ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

ಬ್ರದರ್ ಜಾನ್ ಪೀಟರ್, ಬ್ರದರ್ ಚಾರ್ಲ್ಸ್ ಅವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಎಲ್ಲಾ ವಿದ್ಯಾರ್ಥಿಗಳು ಶುಭ ಕೋರಿದರು. ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಮುಖ್ಯ ಶಿಕ್ಷಕ ಸುಜಯ್ ಕುಮಾರ್, ನಿವೃತ್ತ ಶಿಕ್ಷಕ ನಿರಂಜನ್ ಕುಮಾರ್ ಮಾತನಾಡಿದರು.

ಗುರು– ಹಿರಿಯರಿಗೆ, ಪೋಷಕರಿಗೆ, ಮಹಿಳೆಯರಿಗೆ ಗೌರವ ಕೊಡುವ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಅದನ್ನು ನಿಮ್ಮ ಮಕ್ಕಳಿಗೂ ಕಲಿಸಬೇಕು ಎಂದು ಸಲಹೆ ನೀಡಿದರು.

ವಿದ್ಯಾಸಂಸ್ಥೆ ಸಂಸ್ಥಾಪಕರಾದ ರೆ.ಬ್ರದರ್ ರೋಮಲಸ್ ಅವರ ಪುಣ್ಯ ಸ್ಮರಣೆ ಪ್ರಯುಕ್ತ ವಿದ್ಯಾರ್ಥಿಗಳು ಮೊಂಬತ್ತಿಹಚ್ಚಿ ಒಂದು ನಿಮಿಷ ಮೌನಾಚರಣೆ ಮಾಡಿ ಗೌರವ ಸಲ್ಲಿಸಲಾಯಿತು. ಸಾಗರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರಕಾಶ್ ನಿರೂಪಿಸಿದರು, ಶಿವಕುಮಾರ್ ಸ್ವಾಗತಿಸಿದರು, ಡಾ.ನಾಗೇಂದ್ರ ಪ್ರಸಾದ್ ವಂದಿಸಿದರು. ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರು ಮಿತ್ರ ಸೋಮವಾರ 2 ಮಾರ್ಚ್ 2026

ಗೊರವನಹಳ್ಳಿಯಲ್ಲಿ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿ

ಕ್ರೀಡಾ ಸ್ಫೂರ್ತಿಯೊಂದಿಗೆ ಪಾಲ್ಗೊಂಡು ಯಶಸ್ಸು ಗಳಿಸಿ

ಕ್ರೀಡಾಪಟುಗಳಿಗೆ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ಸಲಹೆ

ತಿ.ನರಸೀಪುರ, ಮಾ.1– ಕ್ರೀಡಾಪಟುಗಳು ಸೋಲೇ ಗೆಲುವಿನ ಮೆಟ್ಟಿಲು ಎಂದು ಭಾವಿಸಿದಾಗ ಮಾತ್ರ ಸಾಧನೆ ಮಾಡಲು ಸಾಧ್ಯ. ಸೋತಾಗ ಕುಗ್ಗದೇ, ಗೆದ್ದಾಗ ಹಿಗ್ಗದೇ ಕ್ರೀಡಾ ಸ್ಫೂರ್ತಿಯೊಂದಿಗೆ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಯಶಸ್ಸು ಗಳಿಸಬೇಕು ಎಂದು ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ತಾಲೂಕಿನ ಗೊರವನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಯುವಕರ ಸಂಘದಿಂದ ಆಯೋಜಿಸಿದ್ದ ಪ್ರೀಮಿಯರ್ ಲೀಗ್–1ರ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕೆಲವರಿಗೆ ಕ್ರೀಡೆಯಲ್ಲಿ ಯಶಸ್ಸು ಬೇಗ ಲಭಿಸುತ್ತದೆ. ಇನ್ನೂ ಕೆಲವರಿಗೆ ವಿಳಂಬವಾಗುತ್ತದೆ. ವಿಳಂಬದಿಂದ ನಿರಾಸೆ ಅನುಭವಿಸಬೇಕಿಲ್ಲ. ನಿರಂತರ ಪ್ರಯತ್ನಗಳ ಮೂಲಕ ಯಶಸ್ಸನ್ನು ಸಾಧಿಸಬಹುದಾಗಿದೆ ಎಂಬುದನ್ನು ಪ್ರತಿಯೊಬ್ಬ ಕ್ರೀಡಾಪಟುಗಳು ಅರಿತುಕೊಳ್ಳಬೇಕು. ಕ್ರೀಡೆ ವ್ಯಕ್ತಿಯ ದೈಹಿಕ, ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗುವುದಲ್ಲದೇ ಶಿಸ್ತು ಬೆಳೆಸುವ ಜೊತೆಗೆ ಭಾವನಾತ್ಮಕ ಅನುಭವಗಳನ್ನು ನೀಡುತ್ತದೆ. ಪ್ರತಿ ಹಂತದಲ್ಲಿ ಪ್ರೇರಣೆ ಪಡೆದು ಕ್ರೀಡೆಯಲ್ಲಿ ಯಶಸ್ಸು ಸಾಧಿಸಬೇಕು ಎಂದರು.

ಕ್ರೀಡೆಯಲ್ಲಿ ಸೋಲು ಗೆಲುವು ಸಹಜ. ಅದರಿಂದ ಸಿಗುವ ಅನುಭವ ನಮ್ಮನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುತ್ತದೆ. ನಿರಂತರ ಪ್ರಯತ್ನ ಅಂತಾರಾಷ್ಟ್ರೀಯ ಮಟ್ಟಕ್ಕೂ ಬೆಳೆಸುತ್ತದೆ. ಕ್ರೀಡೆಯನ್ನು ಪ್ರೀತಿಸಿ ಅದರಲ್ಲಿ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿಕೊಂಡಾಗ ಮಾತ್ರ ಯಶಸ್ಸು ದೊರೆಯುತ್ತದೆ ಎಂದು ಹೇಳಿದರು.

ಒಬ್ಬರಿಂದ ಗೆಲುವು ಸಾಧ್ಯವಿಲ್ಲ: ಕಬಡ್ಡಿ ಆಟವನ್ನು ತಂಡದ ಒಬ್ಬ ಸದಸ್ಯನಿಂದ ಗೆಲ್ಲುವುದು ಸಾಧ್ಯವಿಲ್ಲ. 7 ಆಟಗಾರರು ಉತ್ತಮವಾಗಿ ಆಡಿದಾಗ ಮಾತ್ರ ತಂಡದ ಗೆಲುವು ಸಾಧ್ಯ. ಹಾಗಾಗಿ ಎಲ್ಲರೂ ಒಟ್ಟಾಗಿ ತಂಡದ ಗೆಲುವಿಗೆ ಶಕ್ತಿಮೀರಿ ಶ್ರಮಿಸಬೇಕು. ಸೋತವರು ಯಾರೂ ನಿರಾಶರಾಗದೇ ಮರಳಿ ಯತ್ನ ಮಾಡು ಎಂಬಂತೆ ನಿರಂತರವಾದ ಶ್ರಮ ಹಾಕಿ ಗೆಲುವನ್ನು ಪಡೆಯಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಗ್ರಾಮೀಣ ಪ್ರತಿಭೆಗಳು ಬೆಳೆಯಬೇಕು: ಕ್ರೀಡಾಪಟುಗಳು ತಮ್ಮ ಗುರಿ ತಲುಪಲು ಶ್ರದ್ಧೆ, ಶಿಸ್ತು ಮತ್ತು ತ್ಯಾಗ ಸಹಕಾರಿಯಾಗಿದೆ. ಅದನ್ನು ನಾವು ಶ್ರೇಷ್ಠ ಗುರುವಿನ ಗುಣಗಳೊಂದಿಗೆ ಹೋಲಿಸಬಹುದು. ಶಿಕ್ಷಣ ಮತ್ತು ಕ್ರೀಡೆಗಳ ಸಮನ್ವಯವು ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ಕ್ರೀಡಾವಲಯ ಇಂದು ವಿಶ್ವಾದ್ಯಂತ ಉತ್ತಮ ಹಂತದಲ್ಲಿದ್ದು, ಭಾರತೀಯ ಪಟುಗಳು ಹೆಚ್ಚು ಕ್ರೀಡೆಗಳನ್ನು ಗೆಲ್ಲುವ ಮೂಲಕ ವಿಶ್ವಮಟ್ಟದಲ್ಲಿ ಹೆಸರು ಗಳಿಸುತ್ತಿದ್ದಾರೆ. ಅವರ ಹಾದಿಯಲ್ಲೇ ಗ್ರಾಮೀಣ ಪ್ರತಿಭೆಗಳು ಸಾಧನೆ ಮಾಡಬೇಕಿದೆ ಎಂದರು.

ಇದೇ ವೇಳೆ ಆದಿಶಕ್ತಿ ಗುರುಕುಲ ಸಂಸ್ಥೆ ಸಂಸ್ಥಾಪಕ ಬೋಳಪ್ಪ ಗುರೂಜಿ ಮಾತನಾಡಿದರು. ಆರ್.ಚೆಲುವರಾಜು ಅವರನ್ನು ವಿಶ್ವೇಶ್ವರಯ್ಯ ಯುವಕರ ಸಂಘದ ಸದಸ್ಯರು ಭಾರೀ ಗಾತ್ರದ ಬಾದಾಮಿ ಹಾರ ಹಾಕಿ, ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು.


ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಹನುಮನಾಳು ಡೈರಿ ಅಧ್ಯಕ್ಷ ಮರಿಗೌಡ, ಗೊರವನಹಳ್ಳಿ ಡೈರಿ ಅಧ್ಯಕ್ಷ ಪುಟ್ಟಸ್ವಾಮಿ, ಬೀಡನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಪುರಸಭೆ ಮಾಜಿ ಅಧ್ಯಕ್ಷ ರಾಮಲಿಂಗೇಗೌಡ, ಕಬಡ್ಡಿ ಪಂದ್ಯಾವಳಿ ಆಯೋಜಕ ದೇವರಾಜ್, ಗ್ರಾಪಂ ಮಾಜಿ ಸದಸ್ಯ ಅಶೋಕ್, ಮುಖಂಡರಾದ ಸಂತೋಷ್, ಶಂಕರ್, ಜಯರಾಮು, ಬಾಣಗವಾಡಿ ನಾಗೇಶ್, ಅಭಿವೃದ್ಧಿ ಅಧಿಕಾರಿ ಮಹೇಶ್ ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಸಂಘದ ಯುವಕರು ಹಾಗೂ ಗ್ರಾಮಸ್ಥರು ಹಾಜರಿದ್ದರು.



ಕಬಡ್ಡಿ ಪಂದ್ಯಾವಳಿಯಲ್ಲಿ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ಅವರನ್ನು ಸನ್ಮಾನಿಸಲಾಯಿತು.

> ಕಬಡ್ಡಿ ಪಂದ್ಯಾವಳಿ ಸ್ಪರ್ಧಿಗಳು ಯುವಕರಿದ್ದೀರಿ. ಬಿಸಿ ರಕ್ತ ಪಂದ್ಯಾವಳಿ ವೇಳೆ ನಿಮ್ಮನ್ನು ಕೆರಳಿಸಬಹುದು. ಆದರೆ ಯಾರೂ ಕೂಡ ಗಲಾಟೆ ಮಾಡಿಕೊಳ್ಳದೇ ಅಂಪೈರ್‌ಗಳು ನೀಡುವ ತೀರ್ಪಿಗೆ ಬದ್ಧರಾಗಿ ನಡೆದುಕೊಳ್ಳುವ ಮೂಲಕ ಕ್ರೀಡಾ ಸ್ಫೂರ್ತಿ ಮೆರೆಯಬೇಕು. ಇಲ್ಲಿ ಭಾಗವಹಿಸುವ ಎಷ್ಟೋ ಯುವಕರು ಮುಂದೆ ರಾಜ್ಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಹೆಸರು ಮಾಡಬಹುದು. ಹೀಗಾಗಿ ಯಾರೂ ತಾಳ್ಮೆ ಕಳೆದುಕೊಳ್ಳಬಾರದು.
> –ಆರ್.ಚೆಲುವರಾಜು,
> ಮೈಮುಲ್ ಮಾಜಿ ಅಧ್ಯಕ್ಷ.

ಪಿರಿಯಾಪಟ್ಟಣ ಕಸಬಾ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷ ಅವಿರೋಧ ಆಯ್ಕೆ



ಕಸಬಾ ಪಿಎಸಿಎಸ್ ಅಧ್ಯಕ್ಷರಾಗಿ ಪಿ.ಕೆ.ಕುಮಾರ್, ಉಪಾಧ್ಯಕ್ಷೆಯಾಗಿ ಶೋಭಾ ಆಯ್ಕೆಯಾಗಿದ್ದಾರೆ.

ಪಿರಿಯಾಪಟ್ಟಣ, ಮಾ.1– ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಪಿ.ಕೆ.ಕುಮಾರ್ ಹಾಗೂ ಉಪಾಧ್ಯಕ್ಷೆಯಾಗಿ ಶೋಭಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ–ಉಪಾಧ್ಯಕ್ಷರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಪಿ.ಕೆ.ಕುಮಾರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶೋಭಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆ ಅಭಿವೃದ್ಧಿ ಅಧಿಕಾರಿ ಹಿತೇಂದ್ರ ಘೋಷಿಸಿದರು.

ನೂತನ ಅಧ್ಯಕ್ಷ ಪಿ.ಕೆ.ಕುಮಾರ್ ಮಾತನಾಡಿ, ಸಂಘದ ಆರ್ಥಿಕ ಸ್ಥಿತಿ ಮತ್ತಷ್ಟು ಬಲಪಡಿಸುವುದು ತಮ್ಮ ಮೊದಲ ಆದ್ಯತೆ ಎಂದರು. ಮೈಮುಲ್ ಮಾಜಿ ಅಧ್ಯಕ್ಷ ಪ್ರಸನ್ನ ಮಾತನಾಡಿ, ಮಾಜಿ ಶಾಸಕ ಕೆ.ಮಹದೇವ್ ಅವರ ನೇತೃತ್ವದಲ್ಲಿ ಕಳೆದ 20 ವರ್ಷಗಳಿಂದ ರೈತರ ಸಹಕಾರ ದೊಂದಿಗೆ ಸಂಘ ಉತ್ತಮವಾಗಿ ಬೆಳವಣಿಗೆ ಕಂಡಿದೆ. ರೈತರಿಗೆ ಸಮಯಕ್ಕೆ ಸರಿಯಾದ ಸಾಲ ಸೌಲಭ್ಯ ದೊರಕುತ್ತಿದೆ. ಮುಂದೆಯೂ ಇದೇ ಬಾಂಧವ್ಯ ಮತ್ತು ಅಭಿವೃದ್ಧಿ ಮುಂದುವರಿಯಲಿ ಎಂದು ಆಶಿಸಿದರು.

ಇದೇ ವೇಳೆ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು. ಮುಖಂಡರಾದ ರಾಮು, ಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ರಮೇಶ್, ಸಂಘದ ಮಾಜಿ ಅಧ್ಯಕ್ಷ ಬಿ.ಆರ್.ಸತೀಶ್ ಕುಮಾರ್, ನಿರ್ದೇಶಕರಾದ ರಮೇಶ್, ರಾಮೇಗೌಡ, ಸೈಯದ್ ಜಮೀಲ್, ವೆಂಕಟೇಶ್, ಗೀತಾ, ನಳಿನಿ, ಕರಿನಾಯಕ, ರಾಮಕೃಷ್ಣ, ಸಂಘದ ಸಿಇಓ ಪ್ರವೀಣ್ ಕುಮಾರ್, ಸಿಬ್ಬಂದಿಗಳಾದ ಜ್ಯೋತಿ, ಸಾಗರ್, ಕುಮಾರ್, ಮನು, ನಾಗರಾಜ್ ಸೇರಿದಂತೆ ಹಲವರಿದ್ದರು.

ಪೌರ ಕಾರ್ಮಿಕರ ಸೇವೆ ಶ್ಲಾಘನೀಯ: ವಾಟಾಳುಶ್ರೀ

ತಿ.ನರಸೀಪುರ, ಮಾ.1– ಪಟ್ಟಣದ ಸ್ವಚ್ಛತೆ ಹಾಗೂ ಸುಂದರ ಪರಿಸರಕ್ಕಾಗಿ ಶ್ರಮಿಸುವ ಪೌರ ಕಾರ್ಮಿಕರ ಸೇವೆ ಶ್ಲಾಘನೀಯ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಶ್ರೀಸಿದ್ಧಲಿಂಗಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಇಂದಿರಾ ಕ್ಯಾಂಟೀನ್ ಬಳಿ ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ನೇತೃತ್ವದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರಿಗೆ ಸಮವಸ್ತ್ರ ವಿತರಿಸಿ ಮಾತನಾಡಿದ ಅವರು, ಪೌರ ಕಾರ್ಮಿಕರು ಮಳೆ, ಚಳಿ, ಬಿಸಿಲು ಲೆಕ್ಕಿಸದೇ ಕಸ, ಚರಂಡಿ ಸ್ವಚ್ಛತೆ ಮಾಡುವ ಮೂಲಕ ಪಟ್ಟಣವನ್ನು ಸುಂದರವಾಗಿಡಲು ಶ್ರಮಿಸುತ್ತಿದ್ದಾರೆ. ಅವರ ಸುರಕ್ಷತೆ ಮತ್ತು ಆರೋಗ್ಯ ಕಾಪಾಡುವುದು ಬಹು ಮುಖ್ಯ. ಈ ನಿಟ್ಟಿನಲ್ಲಿ ಮಾದೇಶ್ ಅವರು ಪೌರ ಕಾರ್ಮಿಕರಿಗೆ ಸಮವಸ್ತ್ರ ವಿತರಣೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ ಎಂದು ಪ್ರಶಂಸಿಸಿದರು.

ಯಾವ ಕೆಲಸವೂ ಚಿಕ್ಕದಲ್ಲ ಪ್ರತಿಯೊಂದು ಕಾರ್ಯಕ್ಕೂ ಅದರದೇ ಆದ ಘನತೆ–ಗೌರವ ಇರುತ್ತದೆ. ನಾವು ಮಾಡುವ ಕೆಲಸವನ್ನು ಗೌರವಿಸಬೇಕು. ಪೌರ ಕಾರ್ಮಿಕರು ತಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು. ವಿಶೇಷವಾಗಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಮುಖಂಡ ಮೂಗೂರು ಕುಮಾರಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ 20 ಪೌರಕಾರ್ಮಿಕರಿಗೆ ಸಮವಸ್ತ್ರ ವಿತರಿಸಲಾಯಿತು. 25 ಮಂದಿ ಟೆಂಪೋ ಚಾಲಕರು, ಜೀವ ರಕ್ಷಕ ಈಜುಗಾರರ ಸದಸ್ಯರು, 12 ಮಂದಿ ಅಪಘಾತ ರಹಿತ ಚಾಲಕರನ್ನು ಸನ್ಮಾನಿಸಲಾಯಿತು. ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆ ನೀಡಿದ ಡಾ.ನವೀನ್ ಅವರನ್ನು ಸನ್ಮಾನಿಸಲಾಯಿತು. ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ, ವಿಚಾರವಾದಿ ಪ್ರಭುಸ್ವಾಮಿ, ಕನ್ನಡಸೇನೆ ಪುಟ್ಟಸ್ವಾಮಿ, ವಾಸುದೇವ್, ಕಿರಗಸೂರು ಶಂಕರ್, ಪ್ರಸಾದ್ ನಾಯಕ್, ವಾಚ್ ಕುಮಾರ್, ಅಪ್ಪಣ್ಣ ಸೇರಿದಂತೆ ಇತರರಿದ್ದರು.



ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಆಸ್ಪತ್ರೆಯಲ್ಲಿ ಉತ್ತಮ ಆರೋಗ್ಯ ಸೇವೆ ಒದಗಿಸಲು ಕ್ರಮ

ನಂಜನಗೂಡು, ಮಾ.1– ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಬಡವರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ಸಲುವಾಗಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಜೊತೆಗೂಡಿ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ 1.60 ಕೋಟಿ ವೆಚ್ಚದ ಸ್ಕ್ಯಾನಿಂಗ್, ಎಕ್ಸರೇ ಮೆಷಿನ್ ಸೇರಿದಂತೆ ಅತ್ಯಾಧುನಿಕ ತಪಾಸಣಾ ಯಂತ್ರೋಪಕರಣಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾರ್ವಜನಿಕ ಆಸ್ಪತ್ರೆಯಲ್ಲಿ ಆರೋಗ್ಯ ಸೇವೆ ಉತ್ತಮ ಪಡಿಸುವ ಸಲುವಾಗಿ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿಯ ಸಿಎಸ್‌ಆರ್ ಅನುದಾನ 35 ಲಕ್ಷ ವೆಚ್ಚದಲ್ಲಿ ಸ್ಕ್ಯಾನಿಂಗ್ ಮಿಷಿನ್, 35 ಲಕ್ಷ ವೆಚ್ಚದಲ್ಲಿ ಸಿಬಿ ನಾಟ್ ಟಿವಿ ತಪಾಸಣಾ ಯಂತ್ರ, 15 ಲಕ್ಷ ವೆಚ್ಚದಲ್ಲಿ ಆಲ್ಟ್ರಾ ಪೋರ್ಟಬಲ್ ಹ್ಯಾಂಡಲ್ ಡಿಜಿಟಲ್ ಎಕ್ಸ್‌ರೇ ಮಷಿನ್, ಅಲ್ಲದೇ ಆರೋಗ್ಯ ಸೇತು ಯೋಜನೆ ಅಡಿ ಒಂದು ವಾಹನ ಖರೀದಿಸಲಾಗಿದೆ ಎಂದರು.

ಶಾಸಕ ದರ್ಶನ್ ಮಾತನಾಡಿ, ಕಳೆದ ವರ್ಷವೂ ನಾಗಾರ್ಜುನ ಕಂಪನಿಯವರು ತಮ್ಮ ಸಿಎಸ್‌ಆರ್ ಅನುದಾನದಲ್ಲಿ 2 ಡಯಾಲಿಸಿಸ್ ಯಂತ್ರಗಳನ್ನು ವಿತರಿಸಿದ್ದರು. ಈಗ 35 ಲಕ್ಷ ವೆಚ್ಚದ ಅಲ್ಟ್ರಾ ಸ್ಕ್ಯಾನಿಂಗ್ ಮಿಷಿನ್ ನೀಡಿದ್ದಾರೆ. ಇದರಿಂದ ಗರ್ಭಾವಸ್ಥೆಯಲ್ಲಿ ಮಗುವಿನ ಹೃದಯ, ಕಿಡ್ನಿ ಸೇರಿದಂತೆ ಹಲವು ಸಮಸ್ಯೆಗಳನ್ನು ತಪಾಸಣೆ ನಡೆಸಿ ಪರಿಹಾರ ಕಂಡುಕೊಳ್ಳಲು ಸಹಕಾರಿಯಾಗಲಿದೆ. ಜೊತೆಗೆ ಸಿಬಿ ನಾಟ್ ಮಿಷನ್ ಮೂಲಕ ಟಿಬಿ ಕಾಯಿಲೆಯನ್ನು ಡಿಎನ್‌ಎ ಹಂತದಲ್ಲಿಯೇ ಪತ್ತೆ ಹಚ್ಚಿ ನಿರ್ಮೂಲನೆ ಮಾಡಲು ಸಹಕಾರಿಯಾಗಲಿದೆ. ಅಲ್ಲದೆ ಆರೋಗ್ಯ ಸೇತು ಕಾರ್ಯಕ್ರಮದಡಿ ಗ್ರಾಮೀಣ ಜನರ ಮತ್ತು ಹಿರಿಯರ ಮನೆ ಬಾಗಿಲಿಗೆ ಆರೋಗ್ಯ ಸೇವೆ ಒದಗಿಸಲು ವಾಹನವನ್ನು ವಿತರಿಸಲಾಗಿದೆ. ಇದರಿಂದ ವಯಸ್ಸಾದ ಹಿರಿಯರಿಗೆ ಮತ್ತು ಬಸ್ ಸೌಕರ್ಯಗಳಿಲ್ಲದ ಗ್ರಾಮೀಣ ಪ್ರದೇಶದವರಿಗೆ ಆರೋಗ್ಯ ಸೇವೆ ಮನೆ ಬಾಗಿಲಿಗೆ ದೊರಕಲಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಆರೋಗ್ಯ ಸೇತು ವಾಹನ, ಸಿಬಿ ನಾಟ್ ಮಿಷನ್, ಡಿಜಿಟಲ್ ಸ್ಕ್ಯಾನಿಂಗ್ ಮಿಷನ್, ಅಲ್ಟ್ರಾ ಪೋರ್ ಡಬಲ್ ಹ್ಯಾಂಡಲ್ ಡಿಜಿಟಲ್ ಎಕ್ಸರೇ ಮೆಷಿನ್ ಉದ್ಘಾಟಿಸಿ ಜನರ ಸೇವೆಗೆ ಸಮರ್ಪಿಸಲಾಯಿತು. ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠಸ್ವಾಮಿ, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ರಂಗಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮ್, ಮುಖಂಡರಾದ ಮುದ್ದು ಮಾದೇಗೌಡ, ಗಿರೀಶ್, ಬಸವರಾಜು, ರವಿಪ್ರಕಾಶ್, ಗಾಯತ್ರಿ, ಜಿಲ್ಲಾ ಆರೋಗ್ಯಾಧಿಕಾರಿ ಕುಮಾರಸ್ವಾಮಿ, ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶಿವಪ್ರಸಾದ್, ಸೇರಿದಂತೆ ಆಸ್ಪತ್ರೆ ಸಿಬ್ಬಂದಿ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.



ಕಾರ್ಯಕ್ರಮವನ್ನು ಎಂಎಲ್‌ಸಿ ಡಾ.ಯತೀಂದ್ರ ಉದ್ಘಾಟಿಸಿದರು.

ಗುರುಭವನದ ಅವ್ಯವಹಾರಗಳ ತನಿಖೆಗೆ ಆಗ್ರಹಿಸಿ

ಕೋಟೆಯಲ್ಲಿ ಶಿಕ್ಷಕರಿಂದ ಮೌನ ಪ್ರತಿಭಟನೆ



ಗುರುಭವನದ ಅವ್ಯವಹಾರ ತನಿಖೆಗೆ ಒತ್ತಾಯಿಸಿ ಶಿಕ್ಷಕರು ಮೌನ ಪ್ರತಿಭಟನೆ ನಡೆಸಿದರು.

> ಗುರು ಭವನಕ್ಕೆ ಸಂಬಂಧಿಸಿದಂತೆ ಸಂಪೂರ್ಣ ವಿವರಣೆ ನೀಡುವಂತೆ ಕಾರ್ಯದರ್ಶಿಗೆ ನೋಟಿಸ್ ನೀಡಿದ್ದೇನೆ. ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. ಈ ಸಂಬಂಧ ಇನ್ನೊಂದು ಸಭೆ ನಡೆಸಿ ಸಂಪೂರ್ಣ ವಿವರ ಪಡೆದು ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದು.
> – ರಾಜು, ಕ್ಷೇತ್ರ ಶಿಕ್ಷಣಾಧಿಕಾರಿ.

ಹೆಚ್.ಡಿ.ಕೋಟೆ, ಮಾ.1– ಪಟ್ಟಣದ ಕೇಂದ್ರ ಸ್ಥಾನದಲ್ಲಿರುವ ಗುರು ಭವನದ ಅವ್ಯವಹಾರಗಳ ಸಮಗ್ರ ತನಿಖೆಗೆ ಆಗ್ರಹಿಸಿ ಪಟ್ಟಣದಲ್ಲಿ ಶಿಕ್ಷಕರು ಮೌನ ಪ್ರತಿಭಟನೆ ನಡೆಸಿದರು.

ಪಟ್ಟಣದ ಗುರು ಭವನದ ಆವರಣದ ಎದುರು ಜಮಾಯಿಸಿದ ಶಿಕ್ಷಕರು ಮೌನ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆ ನೌಕರರ ಸಂಘದ ತಾಲೂಕು ಅಧ್ಯಕ್ಷ ಹೆಚ್.ಜಿ.ಚಿಕ್ಕದೇವು ಮಾತನಾಡಿ, ಶಿಕ್ಷಕರ ಪರಿಶ್ರಮದಿಂದ ನಿರ್ಮಾಣಗೊಂಡ ಗುರುಭವನ ಹಲವು ವರ್ಷಗಳಿಂದ ಯಾವುದೇ ನಿರ್ವಹಣೆ ಇಲ್ಲದೆ ಶಿಥಿಲಾವಸ್ಥೆ ತಲುಪುತ್ತಿದೆ. ಆದರೂ ಗುರುಭವನದಲ್ಲಿ ನಡೆಯುವ ಶುಭ ಕಾರ್ಯ ಹಾಗೂ ಹಲವು ಖಾಸಗಿ ಕಂಪನಿಗಳ ವಸ್ತುಗಳ ವ್ಯಾಪಾರಕ್ಕೆ ತಿಂಗಳುಗಟ್ಟಲೆ ಬಾಡಿಗೆಗೆ ನೀಡಿದ್ದರೂ ಎಷ್ಟು ಹಣ ಬಂತು. ಇಲ್ಲಿವರೆಗೆ ಎಷ್ಟು ಕಾರ್ಯಕ್ರಮ ನಡೆದಿದೆ. ಅದರಲ್ಲಿ ಬಂದ ಹಣ ಎಷ್ಟು ಖರ್ಚಾಗಿದೆ ಎನ್ನುವುದಕ್ಕೆ ಯಾವುದೇ ದಾಖಲಾತಿಗಳಿಲ್ಲ. ಇದು ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ ಎಂದು ಆರೋಪಿಸಿದರು.

ಕಳೆದ 3 ತಿಂಗಳಿಂದ ಗುರು ಭವನದ ಲೆಕ್ಕಚಾರ ಮತ್ತು ಸಮಿತಿ ಸದಸ್ಯರ ಮಾಹಿತಿ ನೀಡುವಂತೆ ಲಿಖಿತವಾಗಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೆವು. ಅದರಂತೆ ಗುರುಭವನದ ಕಾರ್ಯದರ್ಶಿಗಳಿಗೆ ವಿವರ ನೀಡುವಂತೆ ಬಿಇಓ ನೋಟೀಸು ಜಾರಿಗೊಳಿಸಿದಾಗ ಗುರುಭವನ ಸಮಿತಿ ರಚನೆ ಆಗಿಲ್ಲ. ಹಣಕಾಸಿನ ವಿಚಾರ ನನಗೆ ತಿಳಿದಿಲ್ಲ ಎನ್ನುವ ಉತ್ತರ ಕಾರ್ಯದರ್ಶಿಗಳು ನೀಡಿದ್ದಾರೆ. ಈ ನಿಟ್ಟಿನಲ್ಲಿ ಗುರುಭವನ ಉಳಿಸಬೇಕಾದ ಜವಾಬ್ದಾರಿ ಕೋಟೆ ಮತ್ತು ಸರಗೂರು ತಾಲೂಕು ಶಿಕ್ಷಕರ ಮೇಲಿದೆ. ಗುರುಭವನದ ಅವ್ಯವಹಾರಗಳ ಸಮಗ್ರ ತನಿಖೆಯಾಗಬೇಕು. ಆ ಮೂಲಕ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಸಮಿತಿ ರಚಿಸಿ ಗುರುಭವನದ ಲೆಕ್ಕಪತ್ರಗಳನ್ನು ನಿಭಾಯಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಗುರುಭವನದ ಉಳಿವಿಗಾಗಿ ತಾಲೂಕಿನ ಶಿಕ್ಷಕರು ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಗೌರವಾಧ್ಯಕ್ಷ ಎನ್.ವಿ.ಸುರೇಶ್, ಮಾಜಿ ಅಧ್ಯಕ್ಷ ಚಂದ್ರಕುಮಾರ್, ತಾಲೂಕು ಉಪಾಧ್ಯಾಯರ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಗಿರೀಶ್ ಮೂರ್ತಿ, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಿ.ಎಸ್.ಮಂಜುನಾಥ್, ಬಡ್ತಿ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ಬಿ. ಸೋಮಸುಂದರ್, ಸಾವಿತ್ರಿ ಬಾಪುಲೆ ಶಿಕ್ಷಕಿಯರ ಸಂಘದ ಅಧ್ಯಕ್ಷೆ ಪ್ರತಿಭಾ, ಶಿಕ್ಷಕರಾದ ಪ್ರಸನ್ನ, ರಂಗಸ್ವಾಮಿ ಶೆಟ್ಟಿ, ಕೃಷ್ಣಪ್ಪ, ಮಹದೇವಸ್ವಾಮಿ, ಮಗ್ಗೆ ಮಹೇಶ್, ರೂಪ ಪ್ರಮೋದ್, ನಾಗೇಂದ್ರ, ಮಧು, ಶೇಖರ್, ಧರ್ಮೇಂದ್ರ ಇದ್ದರು.

ಅವೈಜ್ಞಾನಿಕ ಒಳ ಮೀಸಲಾತಿ ವಿರೋಧಿಸಿ ಪ್ರತಿಭಟನೆ

ನಂಜನಗೂಡು, ಮಾ.1– ಅವೈಜ್ಞಾನಿಕವಾಗಿರುವ ಪ.ಜಾತಿ ಒಳ ಮೀಸಲಾತಿ ರದ್ದುಪಡಿಸಬೇಕು ಹಾಗೂ ಪ.ಜಾತಿಯವರಿಗೆ ನೀಡುತ್ತಿರುವ ಹೊಸ ಜಾತಿ ಪ್ರಮಾಣ ಪತ್ರ ನಿಲ್ಲಿಸಿ ಹಳೆ ಮೀಸಲಾತಿಯನ್ವಯ ಉದ್ಯೋಗಾವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿ ಪ.ಜಾತಿ ಬಲಗೈ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಪ್ರತಿಭಟಿಸಿ ಬಳಿಕ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ನಗರದ ತಾಲೂಕು ಕಚೇರಿ ಮುಂಭಾಗ ಜಮಾಯಿಸಿದ ನೂರಾರು ಪ್ರತಿಭಟನಾಕಾರರು, ನ್ಯಾಯಕ್ಕೆ ಒತ್ತಾಯಿಸಿ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಕಳೆದ ಒಂದು ತಿಂಗಳಿನಿಂದ ಉದ್ಯೋಗ ಆಯ್ಕೆ ಪ್ರಕ್ರಿಯೆಯಲ್ಲಿ ಪ.ಜಾತಿ ಒಳ ಮೀಸಲಾತಿ ಹಂಚಿಕೆಯಲ್ಲಿ ಉಂಟಾಗಿರುವ ಗೊಂದಲ ಹಾಗೂ ಬಲಗೈ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯ ವಿರೋಧಿಸಿ ರಾಜ್ಯವ್ಯಾಪ್ತಿ ನಡೆದ ಪ್ರತಿಭಟನೆ ಗಮನಿಸಿರುವ ರಾಜ್ಯ ಸರ್ಕಾರ ಒಳ ಮೀಸಲಾತಿ ಪರಿಷ್ಕರಣೆಯಾಗುವವರೆಗೆ ಹಳೆ ಮೀಸಲಾತಿ ಮಾದರಿಯಲ್ಲಿಯೇ ಉದ್ಯೋಗ ನೇಮಕಾತಿಗೆ ಮುಂದಾಗುವುದಾಗಿ ರಾಜ್ಯ ಸಚಿವ ಸಂಪುಟ ತೆಗೆದುಕೊಂಡಿರುವ ತೀರ್ಮಾನವನ್ನು ಬಲಗೈ ಸಮುದಾಯ ಸ್ವಾಗತಿಸುತ್ತದೆ. ಆದರೆ ಇದು ಬಲಗೈ ಸಮುದಾಯದ ಕಣ್ಣೊರೆಸುವ ತಂತ್ರವಾಗಬಾರದು. ಬದಲಾಗಿ ಸಮುದಾಯದ ಜನರಿಗೆ ಶಿಕ್ಷಣ ಹಾಗೂ ಉದ್ಯೋಗಕ್ಕೆ ನೆರವಾಗಬೇಕು ಮತ್ತು ಅವೈಜ್ಞಾನಿಕವಾಗಿರುವ ಒಳ ಮೀಸಲಾತಿ ರದ್ದುಪಡಿಸುವ ಜೊತೆಗೆ ಈಗ ನೀಡುತ್ತಿರುವ ಹೊಸ ಜಾತಿ ಪ್ರಮಾಣ ಪತ್ರ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಬಲಗೈ ಸಂಘಟನೆಗಳ ಒಕ್ಕೂಟದ ಬಸವಣ್ಣ, ಸುರೇಶ್, ಅಭಿ ನಾಗಭೂಷಣ್, ಲಿಂಗಯ್ಯ, ವಿಜಯ್ ಕುಮಾರ್, ಮಂಜು, ಶಿವಣ್ಣ, ಶಿವರಾಜು, ಸೋಮಣ್ಣ, ಮಹದೇವಸ್ವಾಮಿ, ಚಂದ್ರಶೇಖರ್ ಇತರರಿದ್ದರು.



ಪರಿಶಿಷ್ಟ ಜಾತಿ ಬಲಗೈ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ಕೆ.ಆರ್.ನಗರದ ರೇಡಿಯೋ ಮೈದಾನದಲ್ಲಿ ನಡೆದ ಕೆವಿಎಲ್ ಸೀಸನ್–1ರ ಜೈ ಭೀಮ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಸಚಿವ ಸಾ.ರಾ.ಮಹೇಶ್ ಚಾಲನೆ ನೀಡಿದರು. ಈ ವೇಳೆ ತಾಪಂ ಮಾಜಿ ಸದಸ್ಯ ತಮ್ಮಣ್ಣ, ತಾಲೂಕು ಯುವ ಜೆಡಿಎಸ್ ಎಸ್‌ಸಿ ಘಟಕದ ಅಧ್ಯಕ್ಷ ಸೂರಿ, ದಲಿತ ಮುಖಂಡ ಕೀರ್ತಿ, ಆಯೋಜಕರಾದ ದುಶ್ಯಂತ್, ಪ್ರಮೋದ್, ಉದಯ್, ಅಕ್ಷಯ್, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ವಿಕಾಸ್, ಮುಖಂಡ ವಜಿ ಇತರರಿದ್ದರು.


ಚಿರತೆ ದಾಳಿಗೆ ಜಿಂಕೆ ಬಲಿ



ಸರಗೂರು: ಚಿರತೆ ದಾಳಿಗೆ ಜಿಂಕೆ ಬಲಿಯಾಗಿರುವ ಘಟನೆ ಪಟ್ಟಣದ 2ನೇ ವಾರ್ಡ್‌ನಲ್ಲಿ ಭಾನುವಾರ ಮುಂಜಾನೆ ನಡೆದಿದೆ. ಇಂದು ಮುಂಜಾನೆ ಪಟ್ಟಣದ 2ನೇ ವಾರ್ಡ್‌ನ ನಿವಾಸಿ ಜವರಯ್ಯ ಎಂಬುವರ ಮನೆ ಎದುರು ಶಬ್ದವಾಗುತ್ತಿದೆ ಎಂದು ನೋಡಿದಾಗ ಚಿರತೆ ಜಿಂಕೆಯನ್ನು ಬೇಟೆಯಾಡಿ ಹೊತ್ತೊಯ್ಯುತ್ತಿರುವುದು ಕಂಡು ಬಂದಿದೆ. ಈ ವೇಳೆ ಜವರಯ್ಯ ಕುಟುಂಬದವರು ಗಾಬರಿಯಿಂದ ಚೀರಿದಾಗ ಅಕ್ಕಪಕ್ಕದ ಮನೆಯವರು ಸ್ಥಳಕ್ಕೆ ಆಗಮಿಸುವಷ್ಟರಲ್ಲಿ ಚಿರತೆ ಜಿಂಕೆಯನ್ನು ಬಿಟ್ಟು ಪರಾರಿಯಾಗಿದೆ.


ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲಿಸಿದರು. ಈ ವೇಳೆ ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದೆ. ನಂತರ ಪ್ರತಿಕ್ರಿಯಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ರಾತ್ರಿ ವೇಳೆ ಹೆಚ್ಚಾಗಿ ಓಡಾಡಬೇಡಿ ಎಂದು ಎಚ್ಚರಿಕೆ ನೀಡಿದ ಅವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಚಿರತೆ ಸೆರೆ ಹಿಡಿಯಲಾಗುವುದು ಎಂದರು.

ಜವರಮ್ಮ ನಿಧನ



ಭೇರ್ಯ, ಮಾ.1– ಗ್ರಾಮದ ನಿವಾಸಿ, ಉಪ್ಪಾರ ಸಮಾಜದ ದಿ.ರಾಜೇಗೌಡರ ಪತ್ನಿ ಜವರಮ್ಮ(60) ಶನಿವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಸಂಜೆ ಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಂಜಮ್ಮ



ಪಿರಿಯಾಪಟ್ಟಣ, ಮಾ.1– ಪತ್ರಕರ್ತ ಡಿ.ದೇವಣ್ಣ ಅವರ ತಾಯಿ ನಂಜಮ್ಮ(88) ಭಾನುವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ನಗರಕ್ಕೆ ಅರ್ಜುನಹಳ್ಳಿ ರಾಜಯ್ಯ ಮಾದರಿಯಾಗಿದ್ದರು

ನುಡಿ ನಮನದಲ್ಲಿ ಕೆಪಿಸಿಸಿ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್

ಕೆ.ಆರ್.ನಗರ, ಮಾ.1– ರಾಜಕಾರಣದ ಸಹನಾಶೀಲತೆ ಹಾಗೂ ಸರಳ ಸಜ್ಜನಿಕೆಯಲ್ಲಿ ಅರ್ಜುನಹಳ್ಳಿ ರಾಜಯ್ಯ ಅವರು ಕೆ.ಆರ್.ನಗರ ಕ್ಷೇತ್ರದಲ್ಲಿ ಎಲ್ಲರಿಗೂ ಮಾದರಿಯಾಗಿದ್ದರು ಎಂದು ಕೆಪಿಸಿಸಿ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ತಿಳಿಸಿದರು.

ತಾಲೂಕಿನ ಅರ್ಜುನಹಳ್ಳಿ ಗ್ರಾಮದ ಸಂತೆ ಮೈದಾನದ ಎಪಿಎಂಸಿ ಆವರಣದಲ್ಲಿ ದಿ. ಜಿಪಂ ಮಾಜಿ ಸದಸ್ಯ ಅರ್ಜುನಹಳ್ಳಿ ರಾಜಯ್ಯ ಹಾಗೂ ಅವರ ಪತ್ನಿ ಗೌರಮ್ಮನವರ ನುಡಿ ನಮನ ಕಾರ್ಯಕ್ರಮದಲ್ಲಿ ದಿವಂಗತರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಕೆ.ಆರ್.ನಗರದಲ್ಲಿ ರಾಜಯ್ಯನವರು ಶಾಸಕರು, ಸಂಸದರಾಗುವ ಎಲ್ಲಾ ಅರ್ಹತೆ ಇದ್ದರೂ, ಅದು ಸಾಧ್ಯವಾಗಲಿಲ್ಲ. ದಲಿತ ಚಳವಳಿಗಳ ಮೂಲಕ ಬೆಳೆದು ಬಂದಿದ್ದು ಅವರು ಮೆಚ್ಚುಗೆ ಗಳಿಸಲು ಕಾರಣ. ಹೀಗಾಗಿ ಅವರು ಎಲ್ಲಾ ವರ್ಗದವರಿಗೂ ಇಷ್ಟವಾಗುತ್ತಿದ್ದರು ಎಂದರು.

ನನ್ನ ವಿದ್ಯಾರ್ಥಿ ದೆಸೆಯಲ್ಲಿ ಹೋರಾಟ, ಸಂಘಟನೆಯಲ್ಲಿ ತೊಡಗಿದ್ದ ವೇಳೆ ಅರ್ಜುನಹಳ್ಳಿ ರಾಜಯ್ಯ ಅವರನ್ನು ಹತ್ತಿರದಿಂದ ನೋಡಿದ್ದೇನೆ. 1998–99ರಲ್ಲಿ ನಾನು ಸ್ಟೂಡೆಂಟ್ ಲೀಡರ್ ಆಗಿದ್ದ ವೇಳೆ ಎಂಎಲ್‌ಸಿ ಹೆಚ್.ವಿಶ್ವನಾಥ್, ಅಡಗೂರು ಚನ್ನಬಸಪ್ಪ, ಗಂಗಯ್ಯ, ಕೆಂಪೂವಯ್ಯ, ಜಿ.ಆರ್.ರಾಮೇಗೌಡ, ಕಾಟ್ನಾಳು ಕೃಷ್ಣಪ್ಪ, ಸಿದ್ದಪ್ಪ, ಎಸ್.ಸಿದ್ದೇಗೌಡ ಅವರು ಹಿರಿಯರಾದ ಅರ್ಜುನಹಳ್ಳಿ ರಾಜಯ್ಯ ಅವರ ಸಮಕಾಲೀನರಾಗಿದ್ದರು.

ಅಡಗೂರು ಹೆಚ್.ವಿಶ್ವನಾಥ್ ಮತ್ತು ದಿ.ಶ್ರೀನಿವಾಸ್ ಪ್ರಸಾದ್ ಅವರ ಗರಡಿಯಲ್ಲಿ ಬೆಳೆದ ಅರ್ಜುನಹಳ್ಳಿ ರಾಜಯ್ಯ ಅವರು ರಾಜಕೀಯವಾಗಿ ಜಿಪಂ, ತಾಪಂ ಸದಸ್ಯರಾಗಿ ಜನಪರ ಆಡಳಿತ ನೀಡಿ ಜನಮನ್ನಣೆ ಗಳಿಸಿದ್ದರು. ಶಾಸಕ.ಡಿ.ರವಿಶಂಕರ್ ಮಾತನಾಡಿ, ಅರ್ಜುನಹಳ್ಳಿ ರಾಜಯ್ಯ ಅವರು ಕಾಂಗ್ರೆಸ್‌ನ ದೊಡ್ಡ ಆಸ್ತಿಯಾಗಿದ್ದವರು. ಪಕ್ಷದ ಕಚೇರಿಯಲ್ಲಿ ನಡೆಸಬೇಕಾದ ನುಡಿ ನಮನ ಕಾರ್ಯಕ್ರಮವನ್ನು ಅರ್ಜುನಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿದೆ ಎಂದರು.

ದಿ.ಅರ್ಜುನಹಳ್ಳಿ ರಾಜಯ್ಯ ಅವರ ಪುತ್ರ ವಕೀಲ ಹಾಗೂ ಜಿಲ್ಲಾ ಪ್ರದೇಶ ಕಾಂಗ್ರೆಸ್ ಕಾನೂನು ಸಮಿತಿ ಅಧ್ಯಕ್ಷ ಎ.ಆರ್.ಕಾಂತರಾಜ್ ಅವರೊಂದಿಗೆ ಪಕ್ಷದಲ್ಲಿ ನಾನು ಮತ್ತು ಮುಖಂಡರು ಸೇರಿದಂತೆ ಎಲ್ಲರೂ ಜೊತೆಗಿರುತ್ತೇವೆ. ಜೊತೆಗೆ ಪಕ್ಷದ ಜವಾಬ್ದಾರಿ ಕೊಡಲು ಬದ್ಧನಾಗಿರುತ್ತೇನೆ ಎಂದ ಶಾಸಕರು ಕಾಂತರಾಜ್ ಅವರ ಜೊತೆ ಏನೇ ಬಂದರೂ ಬೆನ್ನೆಲುಬಾಗಿ ನಿಲ್ಲುವೆ ಎಂದು ತಿಳಿಸಿದರು.

ಅರ್ಜುನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ರಸ್ತೆ ಅಥವಾ ವೃತ್ತಕ್ಕೆ ಅರ್ಜುನಹಳ್ಳಿ ರಾಜಯ್ಯ ಹಾಗೂ ಗೌರಮ್ಮ ಅವರ ಹೆಸರನ್ನು ನಾಮಕರಣ ಮಾಡಲಾಗುವುದು ಎಂದು ಪ್ರಕಟಿಸಿದರು.

ದಲಿತ ಮುಖಂಡ ನಾಗರಾಜ್ ಮಾತನಾಡಿದರು. ಮಾಜಿ ಮೇಯರ್ ಪುರುಷೋತ್ತಮ್, ಜಿಪಂ ಮಾಜಿ ಅಧ್ಯಕ್ಷ ಸಿದ್ದಪ್ಪ, ಸದಸ್ಯ ಶಿವರಾಂ, ದಲಿತ ಮುಖಂಡ ವೇಣು, ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಎಸ್.ಸಿದ್ದೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯ್ ಶಂಕರ್, ಕಾಂಗ್ರೆಸ್ ತಾಲೂಕು ವಕ್ತಾರ ಸಯ್ಯದ್ ಜಾಬೀರ್, ರಕ್ಷಾ ಸಮಿತಿ ಸದಸ್ಯ ಮಧುಕುಮಾರ್, ರವಿಕುಮಾರ್, ಚಂದ್ರು, ರಾಜಯ್ಯ, ನಂಜಪ್ಪ ಸೇರಿದಂತೆ ಇತರರಿದ್ದರು.



ಅರ್ಜುನಹಳ್ಳಿ ಗ್ರಾಮದ ಸಂತೆ ಮೈದಾನದ ಎಪಿಎಂಸಿ ಆವರಣದಲ್ಲಿ ರಾಜಯ್ಯ ಹಾಗೂ ಅವರ ಪತ್ನಿ ಗೌರಮ್ಮನವರಿಗೆ ನುಡಿ ನಮನ ಸಲ್ಲಿಸಲಾಯಿತು.

ಮೈಸೂರು ಮಿತ್ರ ಸೋಮವಾರ 2 ಮಾರ್ಚ್ 2026

ನಾಳೆ ಚಂದ್ರ ಗ್ರಹಣ; ಬಹುತೇಕ ದೇವಸ್ಥಾನಗಳು ಬಂದ್

- ಗ್ರಹಣ ವೇಳೆ ಚಾಮುಂಡಿಬೆಟ್ಟದ ಚಾಮುಂಡಿ ದೇಗುಲದಲ್ಲಿ ಭಕ್ತರಿಗಿಲ್ಲ ಪ್ರವೇಶ
- ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿಲ್ಲ ಭಕ್ತರಿಗೆ ನಿರ್ಬಂಧ

ಮೈಸೂರು,ಮಾ.1(ಪಿಎಂ)–ಅಪರೂಪದ ಚಂದ್ರ ಗ್ರಹಣ ಮಾರ್ಚ್ 3ರಂದು ಸಂಭವಿಸಲಿದ್ದು, ಭೂಮಿಯ ನೆರಳಿಂದಾಗಿ ಚಂದ್ರನ ಮೇಲ್ಮೈ ಕೆಂಪು ಮತ್ತು ತ್ರಾಮದ ಬಣ್ಣಗಳಿಂದ ಗೋಚರವಾಗಲಿದೆ. ಗ್ರಹಣದ ವೇಳೆಯಲ್ಲಿ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಬಹುತೇಕ ದೇವಸ್ಥಾನಗಳನ್ನು ಮುಚ್ಚಲಾಗುತ್ತಿದೆ.

ಮೈಸೂರಿನ ಪ್ರಮುಖ ದೇವಾಲಯಗಳಾದ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಅಂದು ಗ್ರಹಣದ ಸಮಯದಲ್ಲಿ ಭಕ್ತರಿಗೆ ದೇವಿಯ ದರ್ಶನಕ್ಕೆ ನಿರ್ಬಂಧ ಇದ್ದರೆ, ದಕ್ಷಿಣ ಕಾಶಿ ಎಂದೇ ಹೆಸರಾದ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಯಾವುದೇ ನಿರ್ಬಂಧ ಇಲ್ಲದೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಚಾಮುಂಡಿಬೆಟ್ಟ: ಅಂದು ವರ್ಷದ ಮೊದಲ ಚಂದ್ರಗ್ರಹಣದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಭಕ್ತರು ದೇವಾಲಯ ಪ್ರವೇಶಿಸಲು ನಿರ್ಬಂಧ' ಇದೆಯಾದರೂ ವಿವಿಧ ಪೂಜಾ ವಿಧಿವಿಧಾನಗಳು ನಡೆಯಲಿವೆ. ಪ್ರತಿನಿತ್ಯ ಸಾವಿರಾರು ಭಕ್ತರು ಭೇಟಿ ನೀಡುವ ಚಾಮುಂಡೇಶ್ವರಿ ದೇವವಸ್ಥಾನಕ್ಕೆ ದೇಶ–ವಿದೇಶದಿಂದಲೂ ಪ್ರವಾಸಿಗರು ಭೇಟಿ ನೀಡುತ್ತಾರೆ. ಅಂದು ದೇವಾಲಯಕ್ಕೆ ಗ್ರಹಣ ಸಮಯದಲ್ಲಿ ದೇವಿ ದರ್ಶನಕ್ಕೆ ಅವಕಾಶ ಇಲ್ಲವಾಗಲಿದೆ.

ಗ್ರಹಣದ ಸಮಯದಲ್ಲಿ ಚಾಮುಂಡಿ ತಾಯಿಯ ದರ್ಶನಕ್ಕೆ ಭಕ್ತರಿಗೆ ಅವಕಾಶ ಇಲ್ಲವಾಗಿದ್ದು, ಪ್ರತಿದಿನ ಮಧ್ಯಾಹ್ನ 2 ಗಂಟೆಗೆ ದೇಗುಲ ಮುಚ್ಚಿ, ಮತ್ತೆ ಮಧ್ಯಾಹ್ನ 3.30ಕ್ಕೆ ತೆರೆಯುವ ಪರಂಪರೆ ನಡೆದು ಬಂದಿದೆ. ಆದರೆ ಅಂದು ಗ್ರಹಣದ ಕಾರಣ ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ದೇವಸ್ಥಾನದ ಮುಖ್ಯದ್ವಾರವನ್ನು ಮುಚ್ಚಲಾಗುತ್ತದೆ.

ಇದೇ ವೇಳೆಗೆ ದೇವಾಲಯದ ಒಳಗೆ ಪ್ರಧಾನ ಅರ್ಚಕ ಡಾ.ಶಶಿಶೇಖರ ದೀಕ್ಷಿತ್ ನೇತೃತ್ವದಲ್ಲಿ ಚಾಮುಂಡಿ ತಾಯಿಗೆ ವಿಶೇಷ ಪೂಜೆ ನಡೆಯಲಿದೆ. ಯಾವುದೇ ಗ್ರಹಣವಾದರೂ ಆ ಸಮಯದಲ್ಲಿ ತಾಯಿಗೆ ವಿಶೇಷ ಅಭಿಷೇಕ ಮಾಡುವ ಸಂಪ್ರದಾಯ ಇಲ್ಲಿ ನಡೆದು ಬಂದಿದೆ. ಅಂದು ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 8.30ರವರೆಗೆ ಭಕ್ತರ ದೇವಾಲಯ ಪ್ರವೇಶಕ್ಕೆ ನಿರ್ಬಂಧ ಇರಲಿದ್ದು, ರಾತ್ರಿ 8.30ರ ನಂತರ ದೇಗುಲದ ಶುದ್ಧೀಕರಣ ನಡೆಯಲಿದೆ. ಆ ಬಳಿಕ ದೇವಿಗೆ ವಿಶೇಷ ಅಲಂಕಾರ ಮಾಡಿ, ಭಕ್ತರು ದೇವಿ ದರ್ಶನ ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ.





ದೇವಸ್ಥಾನಗಳನ್ನು ಮುಚ್ಚುವ ಅಗತ್ಯವಿಲ್ಲ...

ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರ ದೇವಾಲಯದಲ್ಲಿ ಅಂದು ಎಂದಿನಂತೆ ಪೂಜಾ ಕೈಂಕರ್ಯಗಳು ನಡೆಯಲಿವೆ. ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅಮೃತೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಮೈಕುಮಾರ್, ಅಂದು ಹಗಲು ಗ್ರಹಣವಾದ ಕಾರಣ ಹೆಚ್ಚಿನ ನಿರ್ಬಂಧದ ಅಗತ್ಯವಿಲ್ಲ. ಬೇರೆ ಗ್ರಹಣದ ಸಂದರ್ಭದಲ್ಲಿ ಆಹಾರ ಕ್ರಮ ಹಾಗೂ ದೇವಾಲಯದ ವಿಧಿವಿಧಾನಗಳಲ್ಲಿ ಬದಲಾವಣೆ ಮಾಡಲಾಗುತ್ತದೆ. ಆದರೆ ಈ ಗ್ರಹಣ ಕೇವಲ 20 ನಿಮಿಷ ಮಾತ್ರ ಗೋಚರಿಸಲಿದೆ. ಹಾಗಾಗಿ ನಮ್ಮ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಎಂದಿನಿಂದ ಪೂಜಾ ವಿಧಿವಿಧಾನಗಳು ನಡೆಯಲಿವೆ. ಆಗಮಕ್ಕೆ ಸಂಬಂಧಿಸಿದ ಯಾವುದೇ ದೇವಸ್ಥಾನಗಳನ್ನು ಈ ಗ್ರಹಣದಲ್ಲಿ ಮುಚ್ಚುವ ಅಗತ್ಯವಿಲ್ಲ ಎಂದು ತಿಳಿಸಿದರು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಡಾ.ಶಶಿಶೇಖರ ದೀಕ್ಷಿತ್, ಯಾವುದೇ ಗ್ರಹಣದ ಸ್ಪರ್ಶಕಾಲ ಹಾಗೂ ಮೋಕ್ಷಕಾಲದಲ್ಲಿ ಪೂಜೆ ವಿಧಿವಿಧಾನ ನಡೆಸುವುದು ನಮ್ಮ ದೇವಸ್ಥಾನದಲ್ಲಿ ನಡೆದುಬಂದಿದೆ. ಅದೇ ರೀತಿಯಲ್ಲಿ ಮಾ.3ರಂದು ಗ್ರಹಣದ ಸ್ಪರ್ಶಕಾಲವಾದ ಮಧ್ಯಾಹ್ನ 3 ಗಂಟೆಗೆ ಪೂಜಾ ಕೈಂಕರ್ಯ ಆರಂಭಿಸಿ, ರಾತ್ರಿ 8.30ರವರೆಗೆ ನಡೆಸಲಾಗುವುದು. ಆ ಬಳಿಕ ಭಕ್ತರು ದೇವಿ ದರ್ಶನ ಮಾಡಲು ಅವಕಾಶ ನೀಡಲಾಗುವುದು. ಹಾಗೆಯೇ ಮಾರನೇ ದಿನ ಬೆಳಗ್ಗೆ 7.30ರಿಂದ ಎಂದಿನಂತೆ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಅಂದು ಮಹಾಬಲೇಶ್ವರ ದೇವಸ್ಥಾನ ಸೇರಿದಂತೆ ಬೆಟ್ಟದ ಎಲ್ಲಾ ದೇವಸ್ಥಾನಗಳಲ್ಲಿ ಇದೇ ವಿಧಿವಿಧಾನ ಅನುಸರಿಸಲಾಗುತ್ತದೆ ಎಂದು ವಿವರಿಸಿದರು.

ಭಕ್ತರಿಗಿಲ್ಲ ನಿರ್ಬಂಧ: ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಯಾವುದೇ ಗ್ರಹಣವಾದರೂ ದೇಗುಲ ಪ್ರವೇಶಕ್ಕೆ ಭಕ್ತರಿಗೆ ನಿರ್ಬಂಧ ವಿಧಿಸುವ ಪರಂಪರೆ ಇಲ್ಲವಾಗಿದೆ. ಗ್ರಹಣದ ವೇಳೆಯಲ್ಲಿ ಇಲ್ಲಿ ಶಿವಲಿಂಗಕ್ಕೆ ಅಭಿಷೇಕ ಸೇರಿದಂತೆ ವಿಶೇಷ ಪೂಜೆ ನೆರವೇರಿಸಲಾಗುತ್ತದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಸಿ.ಜಿ.ಕೃಷ್ಣ, ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಯಾವುದೇ ಗ್ರಹಣವಾದರೂ ಭಕ್ತರಿಗೆ ನಿರ್ಬಂಧ ವಿಧಿಸುವ ಪದ್ಧತಿ ಇಲ್ಲ. ಅಂದು ಗ್ರಹಣದ ಸ್ಪರ್ಶಕಾಲ ಮತ್ತು ಮೋಕ್ಷಾಕಾಲದಲ್ಲಿ ಶಿವಲಿಂಗಕ್ಕೆ ಅಭಿಷೇಕ ನಡೆಯಲಿದ್ದು, ಈ ನಡುವೆ ಭಕ್ತರಿಗೆ ದರ್ಶನವೂ ನಿರಂತರವಾಗಿ ಇರಲಿದೆ. ಬೆಳಗ್ಗೆ 12 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಭಕ್ತರಿಗೆ ಫಲಹಾರದ ವ್ಯವಸ್ಥೆ ಇದ್ದು, ಗ್ರಹಣ ಕಾಲದಲ್ಲಿ ಆಹಾರ ಸೇವನೆ ಮಾಡಬಾರದು ಎಂಬ ನಂಬಿಕೆ ಇರುವ ಹಿನ್ನೆಲೆಯಲ್ಲಿ ಮಧ್ಯಾಹ್ನದ ಪ್ರಸಾದ ಹಾಗೂ ಸಂಜೆಯ ಪ್ರಸಾದ ವ್ಯವಸ್ಥೆ ಕೈಬಿಡಲಾಗಿದೆ ಎಂದು ಮಾಹಿತಿ ನೀಡಿದರು.

ಸೋಮವಾರ ಪ್ರಕಟಣೆ: ಮುಜರಾಯಿ ಇಲಾಖೆ ವ್ಯಾಪ್ತಿಯ ಜಿಲ್ಲೆಯ ದೇವಸ್ಥಾನಗಳ ಪೈಕಿ ಕೆಲವು ಗ್ರಹಣದ ಸಮಯದಲ್ಲಿ ಮುಚ್ಚಲಿವೆ. ಅಂದು ಯಾವ್ಯಾವ ಮುಜರಾಯಿ ದೇವಸ್ಥಾನಗಳಲ್ಲಿ ಗ್ರಹಣದ ವೇಳೆ ಭಕ್ತರಿಗೆ ಪ್ರವೇಶ ಇಲ್ಲವೆಂಬ ಸಂಬಂಧ ಸೋಮವಾರ ಪ್ರಕಟಣೆ ಮೂಲಕ ತಿಳಿಸಲಾಗುವುದು ಎಂದು ಮುಜರಾಯಿ ಇಲಾಖೆ ತಹಸೀಲ್ದಾರ್ ಬಸವರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮೈಸೂರಿನ ಮಾತೃಮಂಡಳಿ ವೃತ್ತದಲ್ಲಿರುವ ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಕೂಡ ಅಂದು ಬಾಗಿಲು ಮುಚ್ಚಲಿದೆ. ಈ ಸಂಬಂಧ ಮಾಹಿತಿ ನೀಡಿದ ದೇವಸ್ಥಾನದ ಕಾರ್ಯದರ್ಶಿ ಕೆ.ಎಸ್.ಎನ್. ಪ್ರಸಾದ್, ಅಂದು ಬೆಳಗ್ಗೆ 10.30ಕ್ಕೆ ದೇವಸ್ಥಾನದ ಬಾಗಿಲು ಮುಚ್ಚಲಾಗುತ್ತದೆ. ಮಾರನೇ ದಿನ ಬೆಳಗ್ಗೆ 6.30ಕ್ಕೆ ದೇವಾಲಯ ತೆರೆದು ಶುದ್ಧಪುಣ್ಯದ ವಿಧಿವಿಧಾನ ನೆರವೇರಿಸಿ ಅಭಿಷೇಕ, ನವಗ್ರಹ ಶಾಂತಿ ಹೋಮ ನೆರವೇರಿಸಲಾಗುತ್ತದೆ ಎಂದರು.

ವಿವಿ ಮೊಹಲ್ಲಾದ ಕೆಆರ್‌ಎಸ್ ರಸ್ತೆ ಶ್ರೀ ಲಕ್ಷ್ಮಿವೆಂಕಟರಮಣ ಸ್ವಾಮಿ ದೇವಸ್ಥಾನವನ್ನು ಗ್ರಹಣದ ಕಾರಣ ಅಂದು ಬೆಳಗ್ಗೆ 11ಕ್ಕೆ ಮುಚ್ಚಿ, ರಾತ್ರಿ 8ಕ್ಕೆ ಮತ್ತೆ ತೆರೆಯಲಾಗುತ್ತದೆ. ಆ ಬಳಿಕ ಭಕ್ತರಿಗೆ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಪ್ರತಿನಿತ್ಯ ಮಧ್ಯಾಹ್ನ 1ರವರೆಗೆ ದೇಗುಲ ತೆರೆಯಲಾಗುತ್ತದೆ. ಆದರೆ ಗ್ರಹಣ ಕಾರಣ ಸಮಯದಲ್ಲಿ ಬದಲಾವಣೆ ಮಾಡಲಾಗಿದೆ. ದೇವಸ್ಥಾನದ ಧರ್ಮದರ್ಶಿ ರಾಮಕೃಷ್ಣ ಪತ್ರಿಕೆಯೊಂದಿಗೆ ಮಾತನಾಡಿ ಈ ವಿಷಯ ತಿಳಿಸಿದರು. ಮೈಸೂರಿನ ರಾಜೀವ್‌ನಗರ 2ನೇ ಹಂತದ ಶ್ರೀ ಸೂರ್ಯನಾರಾಯಣಸ್ವಾಮಿ ದೇವಸ್ಥಾನ ಸಹ ಅಂದು ಬಾಗಿಲು ಹಾಕಲಿದೆ. ಗ್ರಹಣದ ಹಿನ್ನೆಲೆಯಲ್ಲಿ ಅಂದು ಇಡೀ ದಿನ ದೇಗುಲ ಮುಚ್ಚುವುದಾಗಿ ದೇವಸ್ಥಾನದ ಅರ್ಚಕ ಕಿರಣ್‌ಭಟ್ ತಿಳಿಸಿದರು.

ಶ್ರೀ ಯೋಗನರಸಿಂಹಸ್ವಾಮಿ ದೇಗುಲ: ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಗ್ರಹಣ ಸಂಬಂಧ ವಿಧಿವಿಧಾನ ನಡೆಯಲಿದೆ. ಅಂದು ಬೆಳಗ್ಗೆ 11ಕ್ಕೆ ದೇಗುಲದ ಬಾಗಿಲು ಮುಚ್ಚಿ, ನಂತರ ರಾತ್ರಿ 7.30ಕ್ಕೆ ತೆರೆಯಲಾಗುತ್ತದೆ. ಆ ಬಳಿಕ ದೇವರಿಗೆ ಅಭಿಷೇಕ ಸೇರಿದಂತೆ ವಿವಿಧ ಪೂಜಾ ವಿಧಿವಿಧಾನ ನೆರವೇರಿಸಿ ಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಡಾ.ಎನ್.ಶ್ರೀನಿವಾಸ ಸ್ವಾಮೀಜಿ ಮಾಹಿತಿ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ –1 ಪ್ರದರ್ಶನ (ಕ), ಫೋರ್ತ್ ಫ್ಲೋರ್–3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಯಗ್ರೀವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ವೀರ ಕಂಬಳ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸೂರಿ ಅಣ್ಣ (ಕ)	4 ಪ್ರದರ್ಶನಗಳು

ಪುಸ್ತಕ ಪ್ರೀತಿಯನ್ನು ಜನರು ಸಂಪೂರ್ಣವಾಗಿ ತ್ಯಜಿಸಿಲ್ಲ

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಭಿಪ್ರಾಯ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ನಡೆದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಮಾ.1(ಬಿಎಲ್‌ಯು)– ಇತ್ತೀಚಿಗೆ ಪುಸ್ತಕಗಳನ್ನು ಓದುವವರ ಸಂಖ್ಯೆ ಕಡಿಮೆ ಆಗಿರಬಹುದು, ಆದರೆ ಪುಸ್ತಕ ಪ್ರೀತಿಯನ್ನು ಜನರು ಸಂಪೂರ್ಣವಾಗಿ ತ್ಯಜಿಸಿಲ್ಲ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಭಿಪ್ರಾಯಪಟ್ಟರು.

ಮೈಸೂರಿನ ಕೃಷ್ಣಮೂರ್ತಿಪುರಂನ ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ ಅವರ ಮನೆಯಲ್ಲಿ ಇಂದು ಆಯೋಜಿಸಿದ್ದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪುಸ್ತಕಗಳು ನಮ್ಮ ಜ್ಞಾನವನ್ನು ಇಮ್ಮಡಿಗೊಳಿಸುವ ಮಿತ್ರ ಎಂಬುದನ್ನು ಯಾರೂ ಮರೆಯಬಾರದು ಎಂದು ಸಲಹೆ ನೀಡಿದರು.

ಪುಸ್ತಕಗಳಿಗೆ ಇಂದೂ ಕೂಡ ಮಹತ್ವವಿದೆ. ಆದರೆ ಪುಸ್ತಕ ಓದನ್ನು ನಾವು ಉತ್ತೇಜಿಸಬೇಕು, ಪುಸ್ತಕಗಳ ಮಹತ್ವವನ್ನು ಮನದಟ್ಟು ಮಾಡಬೇಕು. ಓದುಗರಿಲ್ಲ ಎಂಬ ಸಾಹಿತಿಗಳ ಹಾಗೂ ಪ್ರಕಾಶಕರ ಬೇಸರವನ್ನು ದೂರ ಮಾಡಬೇಕು ಎಂದು ಹೇಳಿದರು.

ಪುಸ್ತಕಗಳ ಓದನ್ನು ಉತ್ತೇಜಿಸುವ ಕನ್ನಡ ಪುಸ್ತಕ ಪ್ರಾಧಿಕಾರದ ಕಾರ್ಯ ನಾಲ್ಕು ಗೋಡೆಗಳಿಗೆ ಸೀಮಿತವಾಗಬಾರದು. ಈ ಹಿನ್ನೆಲೆಯಲ್ಲಿ ಮನೆಗೊಂದು ಗ್ರಾಂಥಾಲಯ ಯೋಜನೆಯನ್ನು ರೂಪಿಸಿದ್ದು, ಕನಿಷ್ಠ ಒಂದು ಲಕ್ಷ ಮನಗಳಲ್ಲಿ ಇದನ್ನು ಸಾಕಾರ ಗೊಳಿಸುವ ಉದ್ದೇಶ ಹೊಂದಿದ್ದೇನೆ ಎಂದು ಮಾನಸ ತಿಳಿಸಿದರು.

ಪ್ರೊ.ಕಾಳೇಗೌಡ ನಾಗವಾರ, ಕನ್ನಡ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ರಾಜಶೇಖರ ಕದಂಬ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಭಾರತದಲ್ಲಿ ಸುಮಾರು 25 ನಿಮಿಷ ಗೋಚರ

ಮೈಸೂರು ಸೈನ್ಸ್ ಫೌಂಡೇಷನ್ ಪ್ರಧಾನ ಕಾರ್ಯದರ್ಶಿ ಜಿ.ಬಿ.ಸಂತೋಷ್‌ಕುಮಾರ್ ಮಾಹಿತಿ

ಮೈಸೂರು,ಮಾ.1(ಪಿಎಂ)– ಈ ವರ್ಷದಲ್ಲಿ ನಡೆಯುತ್ತಿರುವ ಪೂರ್ಣ ಚಂದ್ರಗ್ರಹಣ ಇದು. ಅಂದು ಸಂಜೆ 6.22ರಿಂದ 6.47ರವರೆಗೆ ಸುಮಾರು 25 ನಿಮಿಷ ಭಾರತದಲ್ಲಿ ಗೋಚರಿಸಲಿದೆ. ಭಾಹ್ಯಾಕಾಶದ ಈ ಅಪರೂಪದ ವಿದ್ಯಮಾನವನ್ನು ನೋಡಲು ಯಾವುದೇ ಉಪಕರಣದ ಅಗತ್ಯವಿಲ್ಲವೆಂದು ಮೈಸೂರು ಸೈನ್ಸ್ ಫೌಂಡೇಷನ್ ಪ್ರಧಾನ ಕಾರ್ಯದರ್ಶಿ ಜಿ.ಬಿ. ಸಂತೋಷ್ ಕುಮಾರ್ ತಿಳಿಸಿದರು.

ಮಾಚ್ 3ರಂದು ಸಂಭವಿಸುವ ಚಂದ್ರ ಗ್ರಹಣದ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಈ ವರ್ಷದಲ್ಲಿ ನಡೆಯುತ್ತಿರುವ ಪೂರ್ಣ ಚಂದ್ರ ಗ್ರಹಣ ಇದು. ಸೂರ್ಯ ಮತ್ತು ಭೂಮಿ ಎರಡರ ನಡುವೆ ಚಂದ್ರ ಬರಲಿದೆ. ಹಾಗಾಗಿ ಇದು ಪೂರ್ಣ ಚಂದ್ರ ಗ್ರಹಣ ಆಗಲಿದೆ. ಮಧ್ಯಾಹ್ನ 3.20ರಿಂದ ಸಂಜೆ 6.47ರವರೆಗೆ ಗ್ರಹಣ ನಡೆಯಲಿದೆ. ಆದರೆ ಭಾರತದಲ್ಲಿ ಮಧ್ಯಾಹ್ನದ ಸಂದರ್ಭದಲ್ಲಿ ಗ್ರಹಣ ಗೋಚರಿಸುವುದಿಲ್ಲ. ದೇಶದಲ್ಲಿ ಚಂದ್ರನ ಉದಯ ಕಾಲವು ಸಂಜೆ 6.20ರಿಂದ ಪ್ರಾರಂಭವಾಗಲಿದೆ ಹಾಗಾಗಿ ಅಂದು ಸಂಜೆ 6.22ಕ್ಕೆ ಗ್ರಹಣ ಗೋಚರಿಸಲಿದೆ ಎಂದರು.

ಸಂಜೆ 6.22ರಿಂದ 6.47ರವರೆಗೆ ಅಂದರೆ 25 ನಿಮಿಷ ಗೋಚರಿಸಲಿದೆ. ಮಧ್ಯಾಹ್ನ 3.20ಕ್ಕೆ ಗ್ರಹಣ ಪ್ರಾರಂಭವಾದರೂ ಭಾರತದಲ್ಲಿ ಆವರೆಗೆ ಗ್ರಹಣ ಗೋಚರಿಸಲ್ಲ. ಪೂರ್ಣ ಗ್ರಹಣವಾದ ಕಾರಣ ಚಂದ್ರ ಕೆಂಪು ಬಣ್ಣಕ್ಕೆ ಕಾಣಿಸಲಿದೆ. ಏಕೆಂದರೆ ಭೂಮಿಯ ಪೂರ್ಣ ನೆರಳು ಚಂದ್ರನ ಮೇಲೆ ಬೀಳಲಿದೆ. ಆ ಸಂದರ್ಭದಲ್ಲಿ ಸೂರ್ಯನ ಬೆಳಕು ಭೂಮಿಯ ವಾತಾವರಣಕ್ಕೆ ಬಂದು ವಕ್ರೀಭವನಗೊಳ್ಳಲಿದೆ. ಈ ಸಮಯದಲ್ಲಿ ಬೇರೆ ಎಲ್ಲಾ ಬಣ್ಣಗಳನ್ನು ಹೀರಿಕೊಂಡು ಕೆಂಪು ಬಣ್ಣ ಮಾತ್ರ ವಾತಾವರಣದ ಮೂಲಕ ಹಾದು ಹೋಗಿ ಚಂದ್ರನ ಮೇಲೆ ಬೀಳಲಿದೆ ಎಂದು ವಿವರಿಸಿದರು.

ರಕ್ತ ಚಂದ್ರಗ್ರಹಣ ಎಂಬುದು ತಪ್ಪು ಕಲ್ಪನೆ. ಚಂದ್ರನಿಗೆ ಯಾವುದೇ ಬಣ್ಣವಿಲ್ಲ. ಆ ಬಣ್ಣ ಕೊಡುವುದು ಸೂರ್ಯನ ಬೆಳಕು. ಸೂರ್ಯನ ಬೆಳಕು ಕೂಡ ನೇರವಾಗಿ ಕೆಂಪು ಬಣ್ಣದಲ್ಲಿ ಇಲ್ಲ. ಅದು ಭೂಮಿಯ ವಾತಾವರಣಕ್ಕೆ ಬಂದು ವಕ್ರೀಭವನಗೊಂಡು ನಂತರ ಚಂದ್ರನ ಮೇಲೆ ಹೋಗುತ್ತದೆ. ಹಾಗಾಗಿ ರಕ್ತ ಚಂದ್ರ ಗ್ರಹಣ ಅಪಶಕುನ ಎಂಬುದು ಮೂಢನಂಬಿಕೆಯಾಗಿದೆ ಎಂದರು.

ಭಾರತದಲ್ಲಿ ಗೋಚರಿಸುವ ವೇಳೆಗೆ ಹೆಚ್ಚಿನ ಕೆಂಪು ಬಣ್ಣ ಇರುವುದಿಲ್ಲ, ಕಡಿಮೆಯಾಗಿರಲಿದೆ. ಇದು ಬರೀಗಣ್ಣಿನಿಂದ ಎಲ್ಲರೂ ನೋಡಬಹುದಾದ ಅಪರೂಪದ ವಿದ್ಯಮಾನ. ನೋಡಲು ಯಾವುದೇ ಉಪಕರಣದ ಅಗತ್ಯವಿಲ್ಲ. ಮೋಡ ಇಲ್ಲದೆ ಹಾಗೂ ಅತಿಯಾದ ಬೆಳಕು ಸೂಸದೇ ಇದ್ದಲ್ಲಿ ತುಂಬ ಚೆನ್ನಾಗಿ ಕಾಣಲಿದೆ. ದೂರದರ್ಶಕ ಇದ್ದಲ್ಲಿ ಇನ್ನೂ ಚೆನ್ನಾಗಿ ನೋಡಲು ಸಾಧ್ಯವಾಗಲಿದೆ. ಯಾವುದೇ ಮೂಢನಂಬಿಕೆ ಜೋತು ಬೀಳದೇ ಎಲ್ಲರೂ ಗ್ರಹಣ ನೋಡಬೇಕೆಂದು ಮೈಸೂರು ಸೈನ್ಸ್ ಫೌಂಡೇಷನ್‌ನ ಮನವಿ ಎಂದು ಹೇಳಿದರು.

ಮೈಮುಲ್ ನಂದಿನಿ ಪಾರ್ಲರ್ ಉದ್ಘಾಟನೆ



ಮೈಸೂರು ತಾಲೂಕು ಜಯಪುರ ಹೋಬಳಿ ಡಿ.ಸಾಲುಂಡಿ ಗ್ರಾಮದ ಕೆಂಚಲಗೂಡು ಗೇಟ್ ಬಳಿ ನೂತನ ಮೈಮುಲ್ ನಂದಿನಿ ಪಾರ್ಲರ್ ಅನ್ನು ಉದ್ಘಾಟಿಸಿದ ಶಾಸಕ ಜಿ.ಟಿ.ದೇವೇಗೌಡರು ಸೇರಿದಂತೆ ಮೈಮುಲ್ ಅಧ್ಯಕ್ಷರು, ನಿರ್ದೇಶಕರು, ಮೈಮುಲ್ ಆಡಳಿತ ಮಂಡಳಿ ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ಮೈಮುಲ್ ಅಧ್ಯಕ್ಷ ಕೆ.ಈರೇಗೌಡ, ನಿರ್ದೇಶಕರಾದ ಬಿ.ಗುರುಸ್ವಾಮಿ, ಸೋಮಶೇಖರ್, ಕೆ.ಉಮಾಶಂಕರ್, ಬಿ.ಓಂಪ್ರಕಾಶ್, ಆರ್,ಚೆಲುವರಾಜು, ಲೀಲಾ ನಾಗರಾಜು, ಲೀಲಾಂಬಿಕೆ ಮಹೇಶ್ ಕೊರಹಟ್ಟಿ, ಮೈಮುಲ್ ಎಂಡಿ ಕೆ.ಎಸ್. ಸುರೇಶ್ ನಾಯಕ್, ಮೈಮುಲ್ ಮಾರುಕಟ್ಟೆ ವ್ಯವಸ್ಥಾಪಕ ನವೀನ್‌ಕುಮಾರ್, ಮುಖಂಡರಾದ ಕೋಟೆ ಹುಂಡಿ ಮಹದೇವು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ವಿವಿ ಓವೆಲ್ ಮೈದಾನದಲ್ಲಿ ದೇವರ ಮಕ್ಕಳ ಕ್ರೀಡಾಕೂಟ

ಓಟ, ಮ್ಯೂಸಿಕಲ್ ಚೇರ್, ಲಾಂಗ್ ಜಂಪ್, ಬಾಲ್ ಎಸೆದು ಆಟವಾಡಿದ ವಿಶೇಷ ಮಕ್ಕಳು



ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ನಡೆದ 'ಬಾಂಧವ್ಯ – ವಿಶೇಷ ಮಕ್ಕಳ ಕ್ರೀಡಾಕೂಟ'ದಲ್ಲಿ ವಿಶೇಷ ಮಕ್ಕಳು ಆಕರ್ಷಕ ಪಥಸಂಚಲನ ನಡೆಸಿದರು.

ಮೈಸೂರು, ಮಾ.1(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ದೇವರ ಮಕ್ಕಳ ಉತ್ಸವವೇ ನಡೆದಂತೆ ಕಂಡು ಬಂದಿತು. ವಿವಿಧೆಡೆಯಿಂದ ಆಗಮಿಸಿದ್ದ ವಿಶೇಷ ಮಕ್ಕಳು ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಗಮನ ಸೆಳೆದರು.

ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಆಯೋಜಿಸಿದ್ದ 'ವಿಶೇಷ ಮಕ್ಕಳ ಕ್ರೀಡಾಕೂಟ ಬಾಂಧವ್ಯ–2026' ಮೈಸೂರಿನ 23 ವಿಶೇಷ ಚೇತನ ಶಾಲೆಗಳ 500ಕ್ಕೂ ಹೆಚ್ಚು ವಿಶೇಷ ಮಕ್ಕಳು ತಮ್ಮ ಪೋಷಕರು ಹಾಗೂ ಶಾಲಾ ಶಿಕ್ಷಕರೊಂದಿಗೆ ಓವೆಲ್ ಮೈದಾನಕ್ಕೆ ಆಗಮಿಸಿ, ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸೈ ಎನಿಸಿಕೊಂಡರು.


ಕ್ರೀಡಾಕೂಟದಲ್ಲಿ ವಿವಿಧ ವಯೋಮಾನದ ಮಕ್ಕಳಿಗೆ ಹಾಗೂ ವಿವಿಧ ಬಗೆಯ ವಿಶೇಷ ಚೇತನರಿಗೆ ಪ್ರತ್ಯೇಕ ವಿಭಾಗದಲ್ಲಿ ಕ್ರೀಡಾ ಚಟುವಟಿಕೆಗಳನ್ನು ನಡೆಸಲಾಯಿತು. 8 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗಾಗಿ ಓಟ, ಮ್ಯೂಸಿಕಲ್ ಚೇರ್, ಬಾಲ್ ಎಸೆತ ಸೇರಿದಂತೆ ವಿಶೇಷ ಆಟೋಟ ಆಯೋಜಿಸಲಾಗಿತ್ತು. 8 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳಿಗಾಗಿ ಓಟ, ಲಾಂಗ್ ಜಂಪ್, ಶಾಟ್‌ಪುಟ್ ಮತ್ತು ಟೆನ್ನಿಸ್ ಬಾಲ್ ಥ್ರೋ ಸೇರಿದಂತೆ ವಿವಿಧ ಕ್ರೀಡಾಸ್ಪರ್ಧೆಗಳು ಜರುಗಿದವು.

ವಿಶೇಷ ಮಕ್ಕಳ ಕ್ರೀಡಾಕೂಟದಲ್ಲಿ ಮಕ್ಕಳ ಪೋಷಕರು, ಶಾಲಾ ಶಿಕ್ಷಕರು, ಎನ್‌ಸಿಸಿ ಕೆಡೆಟ್‌ಗಳು, ಸ್ವಯಂ ಸೇವಕರು, ರೋಟರಿ ಮೈಸೂರು ಮಿಡ್‌ಟೌನ್ ಸಂಸ್ಥೆಯ ಸದಸ್ಯರು ಪಾಲ್ಗೊಂಡು ವಿಶೇಷ ಮಕ್ಕಳಿಗೆ ಸಹಕರಿಸಿದರು. ಓವೆಲ್ ಮೈದಾನದಲ್ಲಿ ಪ್ರತ್ಯೇಕ ಐದು ಸ್ಥಳದಲ್ಲಿ ಕ್ರೀಡಾ ಚಟುವಟಿಕೆಗಳನ್ನು ನಡೆಸಲಾಯಿತು. ಮರಗಳ ನೆರಳಿನಲ್ಲಿ ಮಕ್ಕಳಿಗೆ ಕ್ರೀಡಾ ಸ್ಪರ್ಧೆಗಳನ್ನು ನಡೆಸಿ, ಮಕ್ಕಳ ಬಗ್ಗೆ ಕಾಳಜಿ ವಹಿಸಲಾಗಿತ್ತು. ವಿವಿಧೆಡೆ ಕೌಂಟರ್ ತೆರೆದು ಮಕ್ಕಳು, ಪೋಷಕರು ಹಾಗೂ ಶಿಕ್ಷಕರಿಗೆ ಪಾನೀಯ, ಕುಡಿಯುವ ನೀರು ಹಾಗೂ ತಿನಿಸು ಸರಬರಾಜು ಮಾಡಲಾಯಿತು. ಪ್ರತ್ಯೇಕ ವಿಭಾಗದಲ್ಲಿ ವಿಜೇತರಾದ ಮಕ್ಕಳಿಗೆ ಸ್ಥಳದಲ್ಲೇ ಬಹುಮಾನ ಹಾಗೂ ಉಡುಗೊರೆ ನೀಡಿ ಪ್ರೋತ್ಸಾಹಿಸಲಾಯಿತು.

ಆಕರ್ಷಕ ಪಥ ಸಂಚಲನ: ಬೆಳಗ್ಗೆ 'ವಿಶೇಷ ಮಕ್ಕಳ ಕ್ರೀಡಾಕೂಟ ಬಾಂಧವ್ಯ–2026' ಕ್ರೀಡಾಕೂಟಕ್ಕೆ ರೋಟರಿ ಸಂಸ್ಥೆಯ ರವಿಶಂಕರ್ ದಾಕೋಜು ಚಾಲನೆ ನೀಡಿದರು. ಈ ವೇಳೆ ವಿಶೇಷ ಮಕ್ಕಳು ಆಕರ್ಷಕ ಪಥಸಂಚಲನ ನಡೆಸಿ, ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದರು. ಕ್ರೀಡಾಕೂಟದ ವೇಳೆ ಬಿಗ್‌ಬಾಸ್ ವಿನ್ನರ್ ಗಿಲ್ಲಿ ನಟರಾಜ್ ಪಾಲ್ಗೊಂಡು ಮಕ್ಕಳಿಗೆ ಪ್ರೋತ್ಸಾಹಿಸಿದರು. ಈ ಸಂದರ್ಭದಲ್ಲಿ ವಲಯ 7ರ ಸಹಾಯಕ ಗೌವರ್ನರ್ ಎಂ.ಎಸ್.ನವೀನ್‌ಚಂದ್ರು, ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ರೊ.ರಾಕೇಶ್ ಬಾಬು ಕೆ.ಎಲ್, ಕಾರ್ಯದರ್ಶಿ ರೊ.ಕೆ.ವಿ.ಭಾಸ್ಕರ್, ಕ್ರೀಡಾಕೂಟದ ಸಮಿತಿಯ ಅಧ್ಯಕ್ಷ ರೊ.ಹೆಚ್.ಎಸ್.ವೀರೇಶ್, ರೊ.ಡಾ. ಪಿ.ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಿವೃತ್ತ ಡಿವೈಎಸ್ಪಿ ಶಾಂತಮಲ್ಲಪ್ಪ ಅವರ ಅಭಿನಂದನಾ ಸಮಾರಂಭ

ಪೊಲೀಸರು ಲಾಠಿ, ಪಿಸ್ತೂಲ್ ಅನ್ನು ನ್ಯಾಯಯುತವಾಗಿ ಬಳಸಬೇಕು



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ನಿವೃತ್ತ ಡಿವೈಎಸ್ಪಿ ಶಾಂತಮಲ್ಲಪ್ಪ ಹಾಗೂ ಅವರ ಕುಟುಂಬಸ್ಥರನ್ನು ಅಭಿನಂದಿಸಲಾಯಿತು.

ಮೈಸೂರು, ಮಾ.1(ಬಿಎಲ್‌ಯು)– ಪೊಲೀಸರು ತಾವು ಹಿಡಿಯುವ ಲಾಠಿ ಹಾಗೂ ಪಿಸ್ತೂಲ್ ಅನ್ನು ನ್ಯಾಯಯುತವಾಗಿ ಬಳಸಬೇಕು ಎಂದು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಸಲಹೆ ನೀಡಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಶಾಂತಮಲ್ಲಪ್ಪ ಸ್ನೇಹ ಬಳಗವು ಮುಖ್ಯಮಂತ್ರಿ ಪ್ರಶಸ್ತಿ ಪುರಸ್ಕೃತರಾದ ನಿವೃತ್ತ ಡಿವೈಎಸ್ಪಿ ಶಾಂತಮಲ್ಲಪ್ಪ ಅವರಿಗೆ ಅಭಿನಂದನೆ ಸಲ್ಲಿಸಲು ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನಾ ನುಡಿಗಳಾಡಿದ ಅವರು, ಪೊಲೀಸರು ತಮ್ಮ ಕರ್ತವ್ಯದ ಸಮಯದಲ್ಲಿ ಮಾನವೀಯತೆ ಹಾದಿಯಲ್ಲಿ ಸಾಗಬೇಕು ಎಂದು ಹೇಳಿದರು.

ಸಮಾಜದಲ್ಲಿ ಏನೇ ಸಮಸ್ಯೆ ಎದುರಾದರೂ ಅದಕ್ಕೆಲ್ಲಾ ಪೊಲೀಸರೆ ಕಾರಣ ಎಂದು ಅವರತ್ತ ಬೊಟ್ಟು ಮಾಡಿ ತೋರಿಸುವುದು ಸರಿಯಲ್ಲ. ಮೊದಲು ನಾವು ನಮ್ಮತನ ಮರೆಯಬೇಕು, ನಾವು ಸರಿಯಾಗಬೇಕು ಎಂದು ಪ್ರೊ.ಕೃಷ್ಣೇಗೌಡರು ಅಭಿಪ್ರಾಯಪಟ್ಟರು.

ಶಾಂತಮಲ್ಲಪ್ಪ ಅವರ ಪೊಲೀಸ್ ಸೇವೆಯನ್ನು ಗಮನಿಸಿದಾಗ ಕಪ್ಪು ಚುಕ್ಕೆ ಇಲ್ಲದೆ ಕರ್ತವ್ಯ ನಿರ್ವಹಿಸಿದರು. ಯಾವುದೇ ಒತ್ತಡಕ್ಕೂ ಕಟ್ಟು ಬೀಳದೆ ನಿಷ್ಕಂಳಕವಾಗಿ ಕರ್ತವ್ಯ ನಿರ್ವಹಿಸಿ, ನಿವೃತ್ತಿ ಪಡೆದಿದ್ದಾರೆ ಎಂದು ಪ್ರಶಂಸಿಸಿದರು.

ಇತ್ತೀಚಿಗೆ ಮೈಸೂರಿನಲ್ಲಿ ಸಮುದಾಯವೊಂದರ ಗಲಭೆಯೊಂದು ನಡೆದ ಸಂದರ್ಭದಲ್ಲಿ ಶಾಂತಮಲ್ಲಪ್ಪ ಅವರು ಯಾವುದಕ್ಕೂ ಜಗ್ಗದೆ, ಎದೆಗಾರಿಕೆಯಿಂದ ಸಮರ್ಥವಾಗಿ ಕರ್ತವ್ಯ ನಿರ್ವಹಿಸಿದರು. ಆ ವೇಳೆ ಪರಿಸ್ಥಿತಿ ನಿಭಾಯಿಸಲು ತಮ್ಮ ಕಿರಿಯ ಅಧಿಕಾರಿಗಳನ್ನು ಉತ್ತೇಜಿಸಿದರು ಎಂದು ಪ್ರೊ.ಕೃಷ್ಣೇಗೌಡ ಅವರು ಹೇಳಿದರು.

ಶಾಂತಮಲ್ಲಪ್ಪ ಅವರನ್ನು ಸನ್ಮಾನಿಸಿ ಮಾತನಾಡಿದ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಶ್ರೀ ಸೋಮನಾಥೇಶ್ವರ ಸ್ವಾಮೀಜಿ ಅವರು, ಯಾವುದೇ ದೇಶ ಸುಭಿಕ್ಷವಾಗಿರಲು ಹಾಗೂ ಅಲ್ಲಿನ ಜನರು ನೆಮ್ಮದಿಯಿಂದ ಬದುಕಲು ಸೈನಿಕರು ಕಾರಣಕರ್ತರಾಗುತ್ತಾರೆ. ಹಾಗೆಯೇ ದೇಶದ ಒಳಗೆ ನಾಗರೀಕರು ನಿರ್ಭೀತಿಯಿಂದ ಜೀವನ ಮಾಡಲು ಪೊಲೀಸ್ ವ್ಯವಸ್ಥೆ ಕಾರಣವಾಗುತ್ತದೆ. ನಾಗರೀಕರ ರಕ್ಷಣೆಗಾಗಿ ಪೊಲೀಸರು ಹಗಲು, ರಾತ್ರಿಯೆನ್ನದೆ ದುಡಿಯುತ್ತಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಇಂದು ನಿಷ್ಕಂಳಕವಾಗಿ ಸೇವೆ ಸಲ್ಲಿಸುವುದು ತಪಸ್ಸು ಇದ್ದಂತೆ. ಇದು ಕರ್ತವ್ಯದಲ್ಲಿರುವ ಪ್ರತಿಯೊಬ್ಬರಿಗೂ ಸವಾಲು ಕೂಡ ಆಗಿದೆ. ಇಂತಹ ಸಂದರ್ಭದಲ್ಲಿ ಶಾಂತಮಲ್ಲಪ್ಪ ಅವರ ಮೇರು ವ್ಯಕ್ತಿತ್ವ ನಮಗೆ ಕಾಣಿಸುತ್ತದೆ ಎಂದರು.

ಹದಗೆಟ್ಟ ಪರಿಸ್ಥಿತಿಯಲ್ಲಿ ಎಲ್ಲರನ್ನು ಒಟ್ಟುಗೂಡಿಸಿಕೊಂಡು ಆಡಳಿತ ನಡೆಸುವುದು ಕ್ಲಿಷ್ಟಕರವಾಗಿದೆ. ಇಂತಹ ಸವಾಲನ್ನು ಸಮರ್ಥವಾಗಿ ಎದುರಿಸಿ ಕರ್ತವ್ಯ ನಿರ್ಹಸಿರುವ ಶಾಂತಮಲ್ಲಪ್ಪ ಅವರು ನಿವೃತ್ತಿ ಹೊಂದಿದ್ದು, ಪೊಲೀಸ್ ಇಲಾಖೆಯವರಿಗೆ ಮಾದರಿಯಾಗಿದ್ದಾರೆ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ತರುವಾಯ ಮಾತನಾಡಿದ ಪಂಚಾಯತ್ ರಾಜ್‌ನ ನಿವೃತ್ತ ಸಮಾಲೋಚಕರಾದ ಎಂ.ಕೆ.ಕೆಂಪೇಗೌಡ ಅವರು, ಸರ್ಕಾರಗಳು ಬದಲಾಗುತ್ತವೆ, ಹುದ್ದೆಗಳು ಬದಲಾಗುತ್ತವೆ, ಅಧಿಕಾರಿಗಳು ಬದಲಾಗುತ್ತಾರೆ, ಆದರೆ ಯಾರೊಂದಿಗೂ ಗುರುತಿಸಿಕೊಳ್ಳದೆ ಸೇವೆಗೆ ಬದ್ಧರಾಗಿ ಕೆಲಸ ಮಾಡುವುದು ಕಷ್ಟದ ಕೆಲಸ. ಈ ವಿಚಾರದಲ್ಲಿ ಶಾಂತಮಲ್ಲಪ್ಪ ಅವರು ಯಶಸ್ವಿಯಾಗಿ ಸೇವೆ ಪೂರ್ಣಗೊಳಿಸಿ, ನಿವೃತ್ತಿಯಾಗಿದ್ದಾರೆ ಎಂದರು.

ಕಾಂಗ್ರೆಸ್ ಮುಖಂಡ ವಿಕ್ರಾಂತ್ ಪಿ. ದೇವೇಗೌಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಸೇರಿದಂತೆ ಇತರೆ ಗಣ್ಯರು ಶಾಂತಮಲ್ಲಪ್ಪ ಅವರಿಗೆ ಶುಭಾಶಯ ಕೋರಿದರು.

ಚಾಮರಾಜನಗರ ಎಸ್ಪಿ ಎಂ. ಮುತ್ತುರಾಜ್, ಮಂಗಳೂರು ಸ್ಪೆಷಲ್ ಆ್ಯಕ್ಷನ್ ಫೋರ್ಸ್ ಡಿಐಜಿಪಿ ಡಾ.ಎ.ಎನ್. ಪ್ರಕಾಶ್ ಗೌಡ, ಶಾಂತಮಲ್ಲಪ್ಪ ಅವರ ಪತ್ನಿ ಹಾಗೂ ಕುಟುಂಬ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹಿರಿಯ ಲೇಖಕಿ ಪ್ರತಿಭಾ ನಂದಕುಮಾರ್ ಅವರ ‘ಬೆಕ್ಕೆ ಬೆಕ್ಕೆ ಮುದ್ದಿನ ಸೊಕ್ಕೆ’ ಸೇರಿ 5 ಕೃತಿಗಳ ಲೋಕಾರ್ಪಣೆ

ಜೋಗಿ ಸಂಪಾದಕತ್ವದ ‘ಕಾವ್ಯದಾಹ ಜೀವನ ಮೋಹ’ ಕೃತಿ ಬಿಡುಗಡೆ

ಮೈಸೂರು,ಮಾ.1(ಎಸ್‌ಪಿಎನ್)– ಹಿರಿಯ ಲೇಖಕಿ ಪ್ರತಿಭಾ ನಂದಕುಮಾರ್ ವಿರಚಿತ ‘ಬೆಕ್ಕೇಬೆಕ್ಕೇ ಮುದ್ದಿನ ಸೊಕ್ಕೇ’, ‘ಶಾಪಗ್ರಸ್ತ ಕವಿ ಬೋದಿಲೇರ್’, ಆಯ್ದ ಲೇಖನಗಳ ‘ಪ್ರತಿಭಾ ಉವಾಚ’, ‘ಇಳಿದು ಬರುವುದಿಲ್ಲ ತಾಯಿ’, ‘ಒಂದು ಹೆಣ್ಣು ಒಂಟಿಯ ಹತ್ಯೆ’ ಹಾಗೂ ಜೋಗಿ ಸಂಪಾದಕತ್ವದ ‘ಕಾವ್ಯದಾಹ ಜೀವನ ಮೋಹ’ ಆರು ಕೃತಿಗಳನ್ನು ಭಾನುವಾರ ಬಿಡುಗಡೆಗೊಳಿಸಲಾಯಿತು.


ಹಿರಿಯ ಲೇಖಕಿ ಪ್ರತಿಭಾ ನಂದಕುಮಾರ್ ವಿರಚಿತ ‘ಬೆಕ್ಕೇಬೆಕ್ಕೇ ಮುದ್ದಿನ ಸೊಕ್ಕೇ’ ಸೇರಿದಂತೆ ಐದು ಕೃತಿ ಹಾಗೂ ಜೋಗಿ ಸಂಪಾದಕತ್ವದ ‘ಕಾವ್ಯದಾಹ ಜೀವನ ಮೋಹ’ ಕೃತಿಯನ್ನು ಭಾನುವಾರ ಬಿಡುಗಡೆಗೊಳಿಸಲಾಯಿತು.

ಮೈಸೂರಿನ ರಂಗಾಯಣ ಆವರಣದ ಶ್ರೀರಂಗ ಮಂದಿರದಲ್ಲಿ ಕರ್ನಾಟಕ ಲೇಖಕಿಯರ ಸಂಘ ಹಾಗೂ ಸಮತಾ ಅಧ್ಯಯನ ಕೇಂದ್ರ ಸಹಯೋಗದೊಂದಿಗೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಲಾಯಿತು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಉಪನ್ಯಾಸಕಿ ಡಾ.ಎಚ್.ಆರ್.ಶೈಲಾ ಮಾತನಾಡಿ, ಮನುಷ್ಯನ ಅನಾರೋಗ್ಯಕರ ಚಿಂತನೆ, ಅಭಿವ್ಯಕ್ತಿಗಳಲ್ಲಿ ವ್ಯಕ್ತವಾಗುತ್ತಿರುವ ವಿಭಿನ್ನ ಸನ್ನಿವೇಶದಲ್ಲಿ ಲೇಖಕಿ ಪ್ರತಿಭಾ ಅವರ ಸಾಹಿತ್ಯ ಸಮಾಜಕ್ಕೆ ಶಕ್ತಿ ಮಾತ್ರವಲ್ಲ. ಸಾರ್ವಕಾಲಿಕ ಮೌಲ್ಯವನ್ನು ತಂದುಕೊಡಲಿದೆ ಎಂದರು.

ಪಸ್ತುತ ಸಮಾಜವಾದಿಗಳೆಂದು ಡಂಗೂರ ಬಾರಿಸಿ ಕೊಂಡು ಫೋಟೋಗೆ ಪೋಸ್ ಕೊಡುವವರ ಮುಂದೆ ಲೇಖಕಿ ಪ್ರತಿಭಾ ಅವರ ಪ್ರಭುತ್ವವನ್ನು ಸಣ್ಣಗೆ ವಿರೋಧಿಸುತ್ತಾ ಕಾವ್ಯಗಳ ಮೂಲಕ ಎಚ್ಚರಿಕೆ ನೀಡುತ್ತಿರುವುದು ಅನ್ಯನ್ಯ, ಅನಂತವಾದದ್ದು. ಧರ್ಮ ಮತ್ತು ಪ್ರಭುತ್ವವನ್ನು ಎದುರು ಹಾಕಿಕೊಳ್ಳಲು ಹಿಂಜರಿಯದ ಲೇಖಕಿ ಪ್ರತಿಭಾ ಅವರ ಸಾಹಸ ಇತರೆ ಮಹಿಳೆಯರಿಗೆ ಆದರ್ಶಪ್ರಾಯ ಎಂದರು.

ಸಮಾಜದಲ್ಲಿ ದೌಪ್ರದಿ ವಸ್ತ್ರಾಪಹರಣದ ಮುಜುಗರದ ಸನ್ನಿವೇಶಕ್ಕಿಂತ ಕೃಷ್ಣನ ಸಹಾಯಸ್ತವೇ ಮುಖ್ಯವೆಂದು ಚರ್ಚಿಸುವ ಸಮಾಜ ನಮ್ಮದು. ಹುಟ್ಟಿನಿಂದಲೇ ಹೆಣ್ಣಿನ ಅಭಿವ್ಯಕ್ತಿಯನ್ನು ಇಲ್ಲವಾಗಿಸುವ ಕ್ರೌರ್ಯ ನಮ್ಮ ವ್ಯವಸ್ಥೆಯಲ್ಲಿದೆ. ಈ ಮನಸ್ಥಿತಿಯಿಂದ ಹೊರ ಬರಲು ಲೇಖಕಿ ಪ್ರತಿಭಾ ರಚನೆಯ ಕಾವ್ಯದಲ್ಲಿವೆ ಎಂದು ಪ್ರತಿಪಾದಿಸಿದರು.

ಲೇಖಕಿ ಪ್ರತಿಭಾ ಅವರು ವಿಧಿಗೆ ಹೆದರುವವರಲ್ಲ, ಸೆಡ್ಡು ಹೊಡೆದವರು. ಕಿವಿಕೊಟ್ಟು ಜಡವಾದವರಲ್ಲ. ಕಾವ್ಯದ ಮೂಲಕ ಉತ್ತರಿಸಿ ಗೆದ್ದವರು. ತಮ್ಮ ಸೃಜನ ಶೀಲ ಅಭಿವ್ಯಕ್ತಿಯಿಂದ ಜೀವನದ ನಾನಾ ಮಗ್ಗಲಿನ ಖಜಾನೆ ಚತುರೆಯ ಕವಯತ್ರಿಯನ್ನು ಹುಟ್ಟುಹಾಕಿದೆ. ಇದು ದೇಶದಿಂದಾಚೆಗೆ ಚರ್ಚಿಸಬೇಕಾದ ಸಂಗತಿ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ.ಆರ್.ಸುನಂದಮ್ಮ ಮಾತನಾಡಿದರು. ಪ್ರತಿಭಾ ಕಾವ್ಯದಲ್ಲಿ ದೇಹ ಮೀಮಾಂಸೆಯ ವಿಷಯ ಕುರಿತು ವಿಮರ್ಶಕಿ ಡಾ.ಗೀತಾ ವಸಂತ ಮಾತನಾಡಿದರು.

ವೇದಿಕೆಯಲ್ಲಿ ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷೆ ಡಾ.ಸಬಿಹಾ ಭೂಮಿಗೌಡ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷೆ ಉಷಾ ನರಸಿಂಹನ್, ಲೇಖಕಿಯರಾದ ಸುಚಿತ್ರಾ ಹೆಗಡೆ, ಡಾ.ಶಬಾನಾ, ಮಧುರಾಣಿ, ಜೆ.ಪುಷ್ಪಲತಾ, ಮೀನಾ ಮೈಸೂರು, ಹಿರಿಯ ಪತ್ರಕರ್ತ ಓಂಕಾರ್ ಸೇರಿದಂತೆ ಇನ್ನಿತರರಿದ್ದರು.

ಶ್ರಮ ನಮ್ಮದು ಫಲ ದೇವರದ್ದು

ರಂಭಾಪುರಿ ಭೇಟಿ ವೇಳೆ ಡಿಕೆಶಿ ಮಾರ್ಮಿಕ ನುಡಿ

ಚಿಕ್ಕಮಗಳೂರು, ಮಾ.1– ‘ಶ್ರಮ ನಮ್ಮದು ಫಲ ದೇವರದ್ದು’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತೆ ಮಾರ್ಮಿಕವಾಗಿ ಮಾತನಾಡಿದ್ದಾರೆ.



ಚಿಕ್ಕಮಗಳೂರು ಜಿಲ್ಲೆ ಎನ್.ಆರ್.ಪುರ ತಾಲೂಕಿನ ಬಾಳೆಹೊನ್ನೂರಿನ ರಂಭಾಪುರಿ ಪೀಠಕ್ಕೆ ಭಾನುವಾರ ಭೇಟಿ ನೀಡಿ ಜಗದ್ಗುರು ರೇಣುಕಾಚಾರ್ಯ, ವೀರಭದ್ರೇಶ್ವರನ ದರ್ಶನ ಪಡೆದ ಅವರು ಅಧಿಕಾರ ಹಸ್ತಾಂತರದ ಬಗ್ಗೆ ಪ್ರತಿಕ್ರಿಯಿಸಿ, ಯಾವಾಗಲೂ ಶ್ರಮ ನಮ್ಮದು, ಫಲ ದೇವರದ್ದು ಎಂದರು. ಹಾಗಾದರೆ ನಿಮ್ಮ ಶ್ರಮಕ್ಕೆ ಫಲ ಸಿಗುತ್ತದೆಯೇ ಎಂದು ಪ್ರಶ್ನಿಸಿದಾಗ ‘ಇಲ್ಲಿಗೆ ಬಂದಿದ್ದೇನೆ ಅಲ್ವಾ, ಮಾತನಾಡೋಣ’ ಎಂದು ಹೇಳಿ ನಕ್ಕರು.

ಡಿಕೆಶಿ ಗರಂ: ಈ ವೇಳೆ ಕೆಲ ಬೆಂಬಲಿಗರು ‘ಡಿ.ಕೆ.ಶಿವಕುಮಾರ್ ಮುಂದಿನ ಮುಖ್ಯಮಂತ್ರಿ’ ಎಂದು ಘೋಷಣೆ ಕೂಗಿದರು. ಆಗ ಡಿಕೆಶಿ ಭದ್ರತಾ ಸಿಬ್ಬಂದಿ ಹಾಗೂ ಪೊಲೀಸರ ವಿರುದ್ಧ ಗರಂ ಆದರು. ಭದ್ರತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಿದರು.

ಮಾಜಿ ಕಾರ್ಪೊರೇಟರ್ ಪೈ.ಶ್ರೀನಿವಾಸ್ ಹುಟ್ಟುಹಬ್ಬದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮಾ.1(ಎಂಕೆ)– ಮೈಸೂರು ಹೆಬ್ಬಾಳಿನ ಬಸವನಗುಡಿ ವೃತ್ತದ ಸಮೀಪದಲ್ಲಿರುವ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉದ್ಯಾನವನದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಅವರ ಹುಟ್ಟುಹಬ್ಬದ ಅಂಗವಾಗಿ ಭಾನುವಾರ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.


ಮೈಸೂರು ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಅವರ ಹುಟ್ಟುಹಬ್ಬದ ಅಂಗವಾಗಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಪೈಲ್ವಾನ್ ಶ್ರೀನಿವಾಸ್ ಅಭಿಮಾನಿ ಬಳಗದಿಂದ ಜಿಲ್ಲಾಸ್ಪತ್ರೆ, ಇಎಸ್‌ಐ ಆಸ್ಪತ್ರೆ, ಕುಂಬಾರಕೊಪ್ಪಲು ಪ್ರಾಥಮಿಕ ಆರೋಗ್ಯ ಕೇಂದ್ರ, ನಾರಾಯಣ ಹೃದಯಾಲಯ, ಅಪೋಲೋ ಆಸ್ಪತ್ರೆ, ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆ, ಲಯನ್ಸ್ ಬ್ಲಡ್ ಬ್ಯಾಂಕ್ ಜೀವಧಾರ ಕೇಂದ್ರ ಹಾಗೂ ಬೆನಕ ಡಯಾಗ್ನೋಸ್ಟಿಕ್ ಸೆಂಟರ್ ಸಹಯೋಗದೊಂದಿಗೆ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಶಿಬಿರದಲ್ಲಿ ಸಾವಿರಾರು ಮಂದಿಗೆ ಬಿಪಿ, ಶುಗರ್ ಸೇರಿದಂತೆ ಇನ್ನಿತರೆ ಆರೋಗ್ಯ ಸಮಸ್ಯೆಗಳ ತಪಾಸಣೆ ನಡೆಸಿ, ಸ್ಥಳದಲ್ಲೇ ಔಷಧಿಗಳನ್ನು ವಿತರಣೆ ಮಾಡಲಾಯಿತು. ಹಾಗೆಯೇ ಕಣ್ಣಿನ ತಪಾಸಣೆ ಅಗತ್ಯವಿದ್ದವರಿಗೆ ಉಚಿತ ಶಸ್ತ್ರಚಿಕಿತ್ಸೆ ಮಾಡಿಸಲು ನೆರವು ನೀಡಲಾಯಿತು.

ಇದೇ ವೇಳೆ ಬೃಹತ್ ಕೇಕ್ ಕತ್ತರಿಸಿ, ಸಿಹಿ ಹಂಚುವ ಮೂಲಕ ಹುಟ್ಟುಹಬ್ಬ ಆಚರಿಸಲಾಯಿತು. ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಸತೀಶ್, ಇಎಸ್‌ಐ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಹೆಚ್.ಎನ್.ಶಿವಕುಮಾರ್, ಕುಂಬಾರಕೊಪ್ಪಲು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ರಮ್ಯ, ಎನ್‌ಹೆಚ್ ನಾರಾಯಣ ಹೃದಯಾಲಯದ ಪಿಆರ್‌ಓ ಪ್ರದೀಪ್, ಅಪೋಲೋ ಆಸ್ಪತ್ರೆ ಪಿಆರ್‌ಓ ಪ್ರಕಾಶ್‌ಗೌಡ, ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆ ಪಿಆರ್‌ಓ ಸುಂದ್ರೇಶ್, ಲಯನ್ಸ್ ಬ್ಲಡ್ ಬ್ಯಾಂಕ್ ಜೀವಧಾರ ಕೇಂದ್ರದ ಗಿರೀಶ್, ಬೆನಕ ಡಯಗೋಸ್ಟಿಕ್ ಸೆಂಟರ್‌ನ ಕೋಮಲ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗಭೂಷಣ್, ವಾರ್ಡ್ ಅಧ್ಯಕ್ಷ ಕೇಬಲ್ ನಾಗಣ್ಣ, ಚಿಲ್ಲಿ ದಿನೇಶ್, ರವೀಶ್, ದರ್ಶನ್ ಇದ್ದರು.

ಯುದ್ಧ ಪೀಡಿತ ದೇಶಗಳಲ್ಲಿ ಮೈಸೂರು ಜನರು ಸಂಕಷ್ಟಕ್ಕೆ ಸಿಲುಕಿರುವ ಮಾಹಿತಿ ಲಭ್ಯವಿಲ್ಲ

ಮೈಸೂರು, ಮಾ.1(ಬಿಎಲ್‌ಯು)– ಯುದ್ಧ ಪೀಡಿತ ಮಧ್ಯ ಪ್ರಾಚ್ಯದಲ್ಲಿ ಮೈಸೂರು ಜನರು ಸಂಕಷ್ಟಕ್ಕೆ ಸಿಲುಕಿರುವ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಸ್ಪಷ್ಟಪಡಿಸಿದರು.



ಈ ಕುರಿತು ‘ಮೈಸೂರು ಮಿತ್ರ’ನಿಗೆ ಮಾಹಿತಿ ನೀಡಿದ ಅವರು, ಇರಾನ್ ನಲ್ಲಿ ಮೈಸೂರು ಜಿಲ್ಲೆಯ ಜನರು ತೊಂದರೆಗೆ ಸಿಲುಕಿರುವ ಅಥವಾ ಪ್ರಾಣ ಹಾನಿಯಾಗಿರುವ ಮಾಹಿತಿ ದೊರೆತಿಲ್ಲ ಎಂದು ಹೇಳಿದರು. ಮಧ್ಯಪ್ರಾಚ್ಯ ದೇಶಗಳಲ್ಲಿ ಮೈಸೂರು ಜಿಲ್ಲೆಯ ಎಷ್ಟು ಜನರು ವಾಸ ಮಾಡುತ್ತಿದ್ದಾರೆ ಎಂಬ ಖಚಿತವಾದ ಅಂಕಿ ಅಂಶ (ಡಾಟಾ) ನಮ್ಮಲ್ಲಿ ಇಲ್ಲ ಎಂದು ಇದೇ ವೇಳೆ ಲಕ್ಷ್ಮೀಕಾಂತ ರೆಡ್ಡಿ ಅವರು ತಿಳಿಸಿದರು.

ಕನ್ನಡಿಗರ ರಕ್ಷಣೆಯ ಹೊಣೆ ಕೇಂದ್ರ, ರಾಜ್ಯ ಸರ್ಕಾರದ್ದು

ಮೈಸೂರು, ಮಾ.1(ಬಿಎಲ್‌ಯು)– ಯುದ್ಧ ನಡೆಯುತ್ತಿರುವ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿರುವ ಕನ್ನಡಿಗರ ರಕ್ಷಣೆಯ ಹೊಣೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ದ್ದಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು ಅಭಿಪ್ರಾಯಪಟ್ಟರು. ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯುದ್ಧ ಪೀಡಿತ ಮಧ್ಯ ಪ್ರಾಚ್ಯದಲ್ಲಿ ಸಿಲುಕಿರುವ ಕನ್ನಡಿಗರನ್ನು ರಕ್ಷಣೆ ಮಾಡುವ ಹಾಗೂ ಅವರ ನೆರವಿಗೆ ಧಾವಿಸುವ ಪ್ರಮುಖ ಜವಾಬ್ದಾರಿ ಕೇಂದ್ರ ಸರ್ಕಾರದ್ದಾಗಿದೆ ಎಂದು ಹೇಳಿದರು. ಇರಾನ್ ಸೇರಿದಂತೆ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಮೈಸೂರು ಜಿಲ್ಲೆಯ ಜನರು ತೊಂದರೆ ಸಿಲುಕಿರುವ ಬಗ್ಗೆ ಸದ್ಯಕ್ಕೆ ಯಾವುದೇ ಮಾಹಿತಿ ಲಭ್ಯವಿಲ್ಲ ಎಂದು ತಿಳಿಸಿದರು. ಯುದ್ಧ ನಡೆಯಬಾರದು, ಯುದ್ಧದಿಂದ ಸಾಕಷ್ಟು ಪ್ರಾಣ ಹಾನಿ ಆಗುತ್ತದೆ. ಇದನ್ನು ಪ್ರತಿಯೊಂದು ದೇಶಗಳು ಮನಗಾಣಬೇಕು ಎಂದು ಹೇಳಿದರು. ಈಗ ಇರಾನ್ ಹಾಗೂ ಅಮೇರಿಕಾ ನಡುವಿನ ಯುದ್ಧ ಸಂಘರ್ಷ ಕೊನೆಗಾಣಿಸುವ ನಿಟ್ಟಿನಲ್ಲಿ ವಿಶ್ವ ಸಂಸ್ಥೆ ಮಧ್ಯ ಪ್ರವೇಶಿಸಬೇಕು ಎಂದು ಡಾ.ಮಹದೇವಪ್ಪ ಸಲಹೆ ನೀಡಿದರು.



ತಡೆಗೋಡೆ ಇಲ್ಲದೆ ಅಪಾಯಕ್ಕೆ ಕಾದಿರುವ ಚರಂಡಿ ರಸ್ತೆ ಕುಪ್ಪಣ್ಣ ಪಾರ್ಕ್ ಬಳಿ ಜೀವ ಕೈಯಲ್ಲಿಡಿದು ಓಡಾಡುವ ಪರಿಸ್ಥಿತಿ

ಮೈಸೂರು, ಮಾ.1(ವಿವಿಹೆಚ್)– ಮೈಸೂರಿನ ಹೃದಯಭಾಗವಾದ ಹಾರ್ಡಿಂಜ್ ವೃತ್ತದಿಂದ ಪೊಲೀಸ್ ಕಮಿಷ್ನರ್ ಕಚೇರಿಗೆ ತೆರಳುವ ಮಾರ್ಗದ ರಸ್ತೆಯಲ್ಲಿರುವ ಮೋರಿ ತಡೆಗೋಡೆ ಇಲ್ಲದೇ ಸವಾರರನ್ನು ಸಾವಿಗೆ ಆಹ್ವಾನಿಸುವಂತಿದೆ.

ಬಿಎಸ್‌ಎನ್‌ಎಲ್ ಮಾರ್ಗವಾಗಿ ಬರುವ ನರಸೀಪುರ, ಬನ್ನೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಹಾರ್ಡಿಂಜ್ ವೃತ್ತದ ಎಡ ಭಾಗದಲ್ಲಿ ಮಿರ್ಜಾ ರಸ್ತೆ ಹಾಗೂ ಕುಪ್ಪಣ್ಣ ಪಾರ್ಕ್ ನಡುವೆ ಈ ಚರಂಡಿ ಇದೆ. ಆದರೆ, ತಡೆಗೋಡೆ ಇಲ್ಲ.

ಈ ರಸ್ತೆ ಬಸ್ಸುಗಳ ಓಡಾಟಕ್ಕೆ ಮಾತ್ರ ಸೀಮಿತವಾಗಿಲ್ಲ. ಆಟೋಗಳು, ಬೈಕ್ ಸವಾರರು ಶಾರ್ಟ್ ಕಟ್ ಆಗಿ ಇದೇ ರಸ್ತೆಯಲ್ಲಿ ಓಡಾಟ ನಡೆಸುತ್ತಿದ್ದಾರೆ. ರಸ್ತೆ ನಿರ್ಮಾಣವಾಗಿ ವರುಷಗಳುರುಳಿದ್ದರೂ ಅಪಾಯಕಾರಿ ಮೋರಿಯ ಪಕ್ಕದಲ್ಲಿ ಕನಿಷ್ಟ ತಡೆಗೋಡೆ ನಿರ್ಮಿಸದೇ ನಗರ ಪಾಲಿಕೆ ಬೇಜವಾಬ್ದಾರಿ ತೋರುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಮಾರ್ಗದಲ್ಲಿ ಸಂಚರಿಸುವ ವಾಹನಗಳು ತುಸು ಮೈಮರೆತರೂ ಮೋರಿ ಪಾಲಾಗುವುದು ಖಚಿತ. ಪೊಲೀಸ್ ಕಮಿಷನರನ್ನು ಭೇಟಿಯಾಗಲು ನಡೆದುಕೊಂಡು ಹೋಗುವವರಂತೂ ಈ ಮೋರಿಯ ಬಳಿ ಉಸಿರು ಬಿಗಿ ಹಿಡಿದು ನಡೆಯಬೇಕಿದೆ. ಗಬ್ಬೆದ್ದು ನಾರುತ್ತಿರುವ ಮೋರಿಯೂ ಸಾವಿಗೆ ಬಾಯ್ತೆರೆದು ನಿಂತಿರುವ ರಾಕ್ಷಸನಂತೆ ಭಾಸವಾಗುತ್ತದೆ.

ಇನ್ನು ಮೋರಿಗೆ ಮೇಲ್ಭಾಗ ಹಾಕಲಾಗಿರುವ ಡಾಂಬಾರು ಕ್ರಮೇಣ ಕುಸಿಯುತ್ತಾ ಬರುತ್ತಿದೆ. ಈಗಾಗಲೇ ಕೆಲವು ಭಾಗ ಕುಸಿದಿದ್ದು, ರಸ್ತೆ ಭಾಗವಾದಂತೆ ಕಾಣುತ್ತಿದೆ. ದಿನೇ–ದಿನೆ ಮೈಸೂರಿಗೆ ಬರುವ ಪ್ರವಾಸಿಗರ ದಂಡು ಹೆಚ್ಚಾಗುತ್ತಲೇ ಇದೆ. ಇದರ ನಡುವೆ ಅಪಾಯಕ್ಕೆ ಆಹ್ವಾನ ನೀಡುವಂತಿರುವ ರಸ್ತೆಗಳಲ್ಲಿ ಸಂಚರಿಸುವ ವಾಹನಗಳು ಮೋರಿಗೆ ಉರುಳಿ ಅಪಘಾತ ಸಂಭವಿಸಿ ಪ್ರಾಣ ಹಾನಿಯಾದ ಬಳಿಕವಷ್ಟೇ ಪಾಲಿಕೆ, ಸಂಬಂಧಪಟ್ಟ ಅಧಿಕಾರಿ ವರ್ಗ ಎಚ್ಚೆತ್ತುಕೊಳ್ಳುತ್ತದೆ. ಇದನ್ನು ಕೂಡಲೇ ಸರಿಪಡಿಸಿ, ಮೋರಿಗೆ ತಡೆಗೋಡೆ ನಿರ್ಮಾಣ ಮಾಡಿ, ಸಾರ್ವಜನಿಕರ ಹಿತ ಕಾಯುವಂತೆ ಕಾಳಜಿಯುಳ್ಳ ನಾಗರಿಕರು ಒತ್ತಾಯಿಸಿದ್ದಾರೆ.


ಚರಂಡಿ ಮೇಲೆ ಹಾಕಲಾಗಿರುವ ಡಾಂಬಾರು ಕುಸಿದು ಮೋರಿಯೊಳಗೆ ಕುಸಿಯುತ್ತಿರುವುದು.

ಅಲ್ಲಮಪ್ರಭು ಲೋಕ ಕಂಡ ಮಹಾನ್ ದಾರ್ಶನಿಕರು

ಅಲ್ಲಮಪ್ರಭು ವಚನಗಳು–ವ್ಯಾಖ್ಯಾನ ಸಂಪುಟಗಳ ಇಂಗ್ಲಿಷ್ ಅವತರಣಿಕೆ ಬಿಡುಗಡೆ ಸಮಾರಂಭದಲ್ಲಿ ನ್ಯಾಯಮೂರ್ತಿ ದೀಕ್ಷಿತ್ ಕೃಷ್ಣ ಶ್ರೀಪಾದ್ ಬಣ್ಣನೆ

ಮೈಸೂರು, ಮಾ.1– ಅಲ್ಲಮಪ್ರಭುಗಳು ಈ ಲೋಕ ಕಂಡ ಮಹಾನ್ ದಾರ್ಶನಿಕರು ಎಂದು ಒರಿಸ್ಸಾ ಹೈಕೋರ್ಟ್ ನ್ಯಾಯಮೂರ್ತಿ ದೀಕ್ಷಿತ್ ಕೃಷ್ಣ ಶ್ರೀಪಾದ್ ಅವರು ಬಣ್ಣಿಸಿದರು.


ಬೆಂಗಳೂರಿನ ಶಿವರಾತ್ರೀಶ್ವರ ಕೇಂದ್ರದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಲ್ಲಮ ಪ್ರಭುಗಳನ್ನು ಕುರಿತಾದ ಇಂಗ್ಲಿಷ್ ಅನುವಾದಿತ ಕೃತಿಯನ್ನು ಒರಿಸ್ಸಾ ಹೈಕೋರ್ಟ್ ನ್ಯಾಯಮೂರ್ತಿ ದೀಕ್ಷಿತ್ ಕೃಷ್ಣ ಶ್ರೀಪಾದ್ ಅವರು ಬಿಡುಗಡೆ ಮಾಡಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಬೆಂಗಳೂರಿನಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ‘ಅಲ್ಲಮಪ್ರಭು ವಚನಗಳು–ವ್ಯಾಖ್ಯಾನ’ ಸಂಪುಟ 1 ಮತ್ತು 2ರ ಇಂಗ್ಲಿಷ್ ಅನುವಾದ ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಜೀವನದ ಉದ್ದೇಶವೇ ಸತ್ಯ ದರ್ಶನವಾಗಿತ್ತು. ಅಲ್ಲಮ ಪ್ರಭುಗಳ ಹಾಗೆಯೆ ಸಿದ್ಧೇಶ್ವರ ಶ್ರೀಗಳೂ ಬದುಕಿದವರು. ಅಲ್ಲಮಪ್ರಭುಗಳು ವೇದ, ಉಪನಿಷತ್ತು ಮತ್ತು ಪುರಾಣಗಳನ್ನು ಮೀರಿ ನಿಲ್ಲುವಂಥ ವ್ಯಕ್ತಿತ್ವವುಳ್ಳವರಾಗಿದ್ದರು. ಅವರೊಬ್ಬ ಮಹಾನ್ ದಾರ್ಶನಿಕರಾಗಿದ್ದರು ಎಂದು ಸ್ಮರಿಸಿಕೊಂಡರು.

ಭಾರತ ಸಂವಿಧಾನದ ಹಲವಾರು ಅಂಶಗಳನ್ನು ವಚನಕಾರರು 12ನೇ ಶತಮಾನದಲ್ಲೇ ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಬಸವಣ್ಣ, ಅಲ್ಲಮಪ್ರಭು, ಅಕ್ಕ ಮಹಾದೇವಿ ಮುಂತಾದ ವಚನಕಾರರ ಹಲವಾರು ಚಿಂತನೆಗಳು ಸಂವಿಧಾನದಲ್ಲಿ ಅಡಕವಾಗಿವೆ. ಈಗಿನ ಸಂಸತ್ ವ್ಯವಸ್ಥೆಯನ್ನು 12ನೇ ಶತಮಾನದಲ್ಲಿಯೇ ಬಸವಣ್ಣನವರು ಅನುಭವ ಮಂಟಪದ ಮೂಲಕ ಪ್ರಾರಂಭಿಸಿದರು. ಸಂವಿಧಾನದ ಪುಸ್ತಕದಲ್ಲಿ ವೇದ, ಉಪನಿಷತ್ತು, ರಾಮಾಯಣ ಮತ್ತು ಮಹಾಭಾರತ ಮುಂತಾದವುಗಳಿಗೆ ಸಂಬಂಧಿಸಿದಂತೆ 22 ಚಿತ್ರಗಳಿವೆ. ಹಾಗೆಂಯೇ ಬಸವಣ್ಣನವರು, ಅಲ್ಲಮಪ್ರಭುಗಳು ಸೇರಿದಂತೆ ವಚನಕಾರರ ಚಿತ್ರಗಳನ್ನು ಸೇರ್ಪಡೆ ಮಾಡುವ ಪ್ರಯತ್ನವಾಗಬೇಕಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್ ಮಾತನಾಡಿ, ಸಿದ್ದೇಶ್ವರ ಸ್ವಾಮಿಗಳು ತಮ್ಮ ಅಂತಿಮ ಪತ್ರ ದಲ್ಲಿ ಅಲ್ಲಮಪ್ರಭುಗಳ ವಚನವನ್ನು ಉಲ್ಲೇಖಿಸಿದ್ದಾರೆ. ಇವರು ಶತಮಾನದ ಸಂತರು, ಕೊನೆಯ ಉಸಿರಿರುವವರೆಗೂ ಅಲ್ಲಮಪ್ರಭುಗಳನ್ನು ಧ್ಯಾನಿಸಿದರು. ಅಲ್ಲಮಪ್ರಭುಗಳ ವಚನಗಳನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡುವುದು ಬಹಳ ಕಷ್ಟದ ಕೆಲಸ. ಆದರೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಈ ಸಂಕಲ್ಪ ವನ್ನು ಸಿದ್ದೇಶ್ವರ ಸ್ವಾಮಿಗಳು ಸಾಕಾರಗೊಳಿಸಿದ್ದಾರೆ. ಈ ಕೃತಿ ಎಲ್ಲೆಡೆ ಲಭ್ಯವಾಗುವಂತಾಗಬೇಕು ಎಂದರು.

ಈ ವೇಳೆ ಆಶೀರ್ವಚನ ನೀಡಿದ ಸುತ್ತೂರು ಶ್ರೀಗಳು, ಡಾ.ಹೆಚ್.ತಿಪ್ಪೇರುದ್ರಸ್ವಾಮಿ ಅವರು ‘ಬಸವೇಶ್ವರ ವಚನ ದೀಪಿಕೆ’ ಕೃತಿ ರಚಿಸಿದರು. ಇದರ ಮುಂದುವರಿದ ಭಾಗವಾಗಿ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಅಲ್ಲಮ ಪ್ರಭುದೇವರ ‘ವಚನ–ನಿರ್ವಚನ’ ಕೃತಿಯನ್ನು ರಚಿಸಿದರು. ಇದು ಕನ್ನಡೇತರರಿಗೂ ಲಭ್ಯವಾಗಲೆಂಬ ಉದ್ದೇಶದಿಂದ ಶ್ರೀ ಸಿದ್ದೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ವಿದ್ವಾಂಸರ ತಂಡ ಇಂಗ್ಲಿಷ್‌ಗೆ ಅನುವಾದಿಸಿದೆ. ಈ ಜಗತ್ತಿನಲ್ಲಿ ಕೊನೆಗೆ ಏನೂ ಉಳಿಯುವುದಿಲ್ಲ ಎಂಬ ಸತ್ಯವನ್ನು ಅಲ್ಲಮ ಪ್ರಭುಗಳು ಬಲ್ಲವರಾಗಿದ್ದರು. ಇದನ್ನು ಎಲ್ಲರೂ ಅರ್ಥಮಾಡಿಕೊಂಡಾಗ ಜೀವನ ಸಾರ್ಥಕವಾಗುತ್ತದೆ ಎಂದು ನುಡಿದರು.

ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇ ಪುರಂ ಜಿ.ವೆಂಕಟೇಶ್ ಅವರು ಕೃತಿಯ ಪರಿಚಯ ಮಾಡಿದರು. ಸಂಪಾದಕೀಯ ಸಮಿತಿ ಪರವಾಗಿ ಸುಬ್ಬರಾವ್ ಅವರು ಕೃತಿ ಮೂಡಿಬಂದ ರೀತಿಯನ್ನು ವಿವರಿಸಿದರು. ವಿಜಯಪುರ ಜ್ಞಾನ ಯೋಗಾಶ್ರಮದ ಅಧ್ಯಕ್ಷರಾದ ಶ್ರೀ ಬಸವಲಿಂಗ ಸ್ವಾಮಿಗಳು, ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರ ಗೊ.ರು.ಚನ್ನಬಸಪ್ಪನವರು, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಶ್ರೀ ಶ್ರದ್ಧಾನಂದ ಸ್ವಾಮಿ, ಪ್ರೊ.ಮೊರಬದ ಮಲ್ಲಿಕಾರ್ಜುನ, ಸವಿತಾ ಶಿವಕುಮಾರ್ ಸೇರಿದಂತೆ ಮತ್ತಿತರು ಭಾಗವಹಿಸಿದ್ದರು.